Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–11 ಮಾರ್ಚ್ 13–19, 2023 ಪುಟ 16 ರೂ. 10/–
Volume-17 Issue-11 March 13-19, 2023 Pages:16 Price: 10/-



ದುಡಿಮೆಯ ಅವಧಿ 12 ಗಂಟೆಗೆ ಏರಿಕೆ:

ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ಪ್ರಯತ್ನ



ಬಿಜೆಪಿ ಮನೆ ತುಂಬಾ ಹಗರಣಗಳು



ದುಡಿಮೆ ಮತ್ತು ಮಹಿಳೆ

ರಾತ್ರಿ ಪಾಳಿಯ ಸಂಕಷ್ಟದಲ್ಲಿ ಮಹಿಳೆ

ಚೀನಾ: ವಿಜ್ಞಾನ–ತಂತ್ರಜ್ಞಾನದ ಸೂಪರ್ ಪವರ್ ಆಗಿಬಿಟ್ಟಿದೆಯೇ?

ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?

ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆ ಕಂಡ ನಂತರ ಕ್ರಾಂತಿಕಾರಿಯಾಗಿ ಉಳಿದಿರಲಿಲ್ಲ.

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ.

ಮಿಥ್ಯೆ 3 – ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಸಾವರ್ಕರ್ ಅವರು ಬ್ರಿಟಿಷ್ ಆಳರಸರಿಗೆ ಕ್ಷಮಾಯಾಚನೆಯ ಪತ್ರಗಳನ್ನು ಬರೆದಿದ್ದರು ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲವಾದ್ದರಿಂದ, ಅದು ದರಿದ್ರ ಜೈಲಿನಿಂದ ಹೊರಬಂದು ಸಕ್ರಿಯ ರಾಜಕೀಯ ಮತ್ತು ಸ್ವಾತಂತ್ರ್ಯ ಚಳವಳಿಗೆ ಮರಳಲು ಮಾಡಿದ್ದ ತಂತ್ರ ಎಂದು ಅದನ್ನು ಅವರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಈ ಸಮರ್ಥನೆಯೂ ಸಾವರ್ಕರ್ 1913 ಮತ್ತು 1920 ರಲ್ಲಿ ಬರೆದ ಕ್ಷಮಾಯಾಚನೆಯ ಪತ್ರದ ಮೂಲ ಪಠ್ಯವನ್ನು ಓದಿದರೆ, ಅರ್ಥಹೀನವಾಗುತ್ತದೆ ಎನ್ನುತ್ತಾರೆ ಲೇಖಕರು ಈ ಅಧ್ಯಾಯದಲ್ಲಿ..

ಅಂಡಮಾನಿನಲ್ಲಿ ರಾಜಕೀಯ ಕೈದಿಗಳ ಹೋರಾಟದಿಂದ ದೂರ ಉಳಿದ ಸಾವರ್ಕರ್

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್‌ಡ' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–20

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಕ್ರಡಕ್ ಅವರ ಟಿಪ್ಪಣಿ ಹಾಗೂ 1913 ರಲ್ಲಿ ಸಾವರ್ಕರ್ ಕ್ಷಮಾಯಾಚನೆಯ ಅರ್ಜಿಯನ್ನು ಪರಿಗಣಿಸದಿರಲು ಬ್ರಿಟಿಷ್ ಸರ್ಕಾರ ಮಾಡಿದ ತೀರ್ಮಾನವು ಸಾವರ್ಕರ್ ಅವರ ದೇಶಪ್ರೇಮಕ್ಕೆ ಸಾಕ್ಷಿ ಅಥವಾ ಪುರಾವೆ ಎಂಬ ವಾದವನ್ನು ಹಿಂದುತ್ವ ಪಡೆ ಹಾಗೂ ಸಾವರ್ಕರ್ ಅವರ ಅನುಯಾಯಿಗಳು ಮುಂದಿಡುತ್ತಾರೆ. ಸಾವರ್ಕರ್ ಅವರು ಬ್ರಿಟಿಷ್ ದೊರೆಗಳ ಎದುರು ಶರಣಾದ ನಡೆಯು ಮೊಘಲ್ ದೊರೆಗಳ ವಿರುದ್ಧದ ಶಿವಾಜಿಯ ಧೀರೋದಾತ್ತ ನಡೆಗೆ ಸರಿಸಮಾನವಾದುದು ಎಂಬ ಅವರ ವಾದ ನಿಜಕ್ಕೂ ಶೋಚನೀಯ ಸಂಗತಿಯೇ ಸರಿ. 1910 ರಲ್ಲಿ 50 ವರ್ಷಗಳ ಕಾಲ ಜೀವಾವಧಿ ಶಿಕ್ಷೆಗೆ ಒಳಗಾದ 'ವೀರ ದೇಶಪ್ರೇಮಿ' ಸಾವರ್ಕರ್ ಕೇವಲ 10 ವರ್ಷಕ್ಕೂ ಕಡಿಮೆ ಅವಧಿ ಮಾತ್ರ ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿದ್ದರು ಮತ್ತು ಅಂತಿಮವಾಗಿ 1924 ರಲ್ಲಿ ಮಹಾರಾಷ್ಟ್ರದ ಯೆರವಾಡಾ ಜೈಲಿನಿಂದ ಬಿಡುಗಡೆ ಪಡೆದರು ಎಂಬ ಸತ್ಯವನ್ನು ಮರೆಮಾಚಲು ಹಿಂದುತ್ವ ಪಡೆ ಯತ್ನಿಸುತ್ತದೆ. ಒಟ್ಟಿನಲ್ಲಿ ಸಾವರ್ಕರ್ 35 ವರ್ಷಗಳಿಗೂ ಹೆಚ್ಚು ಕಾಲದ ಮಾಫಿಯನ್ನು ಪಡೆಯುತ್ತಾರೆ. ಅದೇ ಸೆಲ್ಯುಲರ್ ಜೈಲಿನಲ್ಲಿ ಮತ್ತು ಇತರ ಜೈಲುಗಳಲ್ಲಿ ನೂರಾರು ಕೈದಿಗಳು ಪೂರ್ಣ ಅವಧಿಯ ಶಿಕ್ಷೆಯನ್ನು ಅನುಭವಿಸಿದ್ದಾರೆ. ಭಗತ್ ಸಿಂಗ್, ಚಂದ್ರಶೇಖರ್ ಅಜಾದ್, ರಾಮ ಪ್ರಸಾದ್ ಬಿಸ್ಮಿಲ್, ಅಶ್ಫಖುಲ್ಲಾ ಖಾನ್, ಸುಖ್‌ದೇವ್, ರಾಜ್‌ಗುರು ಮತ್ತು ರೋಷನ್ ಸಿಂಗ್‌ರಂತಹ ಸಾವಿರಾರು ಜನರು ಕ್ಷಮಾಯಾಚನೆ ಮಾಡದೆ ಹಾಗೂ ದಯಾ ಭಿಕ್ಷೆ ಬೇಡದೆ ಹುತಾತ್ಮರಾದರು ಎಂಬ ಸಂಗತಿಯ ಬಗ್ಗೆ ಹಿಂದುತ್ವ ಪಡೆ ದಿವ್ಯಮೌನ ವಹಿಸುತ್ತದೆ. ದೊಡ್ಡ ಸಂಖ್ಯೆಯ ಘದರ್ ಕ್ರಾಂತಿಕಾರಿಗಳು ಮತ್ತು ಬಂಗಾಳದ 'ಭಯೋತ್ಪಾದಕರು' ಬ್ರಿಟಿಷ್ ಆಳರಸರಿಂದ ದಯಾ ಭಿಕ್ಷೆ ಬೇಡಲು ನಿರಾಕರಿಸಿದರು ಮತ್ತು ಅವರು ಯಾರೂ ತಮ್ಮ ವೈಯಕ್ತಿಕ ಸ್ವಾತಂತ್ರ್ಯದ ಸಲುವಾಗಿ ಭಾರತದ ವಿಮೋಚನಾ ಚಳವಳಿಯನ್ನು ತ್ಯಜಿಸಲು ಒಪ್ಪಲಿಲ್ಲ.

1913 ರಲ್ಲಿ ಸಾವರ್ಕರ್ ಅವರು ಸುದೀರ್ಘವಾದ ಕ್ಷಮಾಯಾಚನೆ ಅರ್ಜಿಯನ್ನು ಕ್ರಡಕ್ ಅವರಿಗೆ ನೇರವಾಗಿ ಸಲ್ಲಿಸಿದ ಕೂಡಲೇ ಬ್ರಿಟಿಷರು ಬಿಡುಗಡೆ ಮಾಡಲು ನಿರಾಕರಿಸಿದರು ಎಂಬುದು ಸತ್ಯವಾದ ವಿಷಯವೇ ಹೌದು. ಅದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದು, ದಮನಕಾರಿ ವಸಾಹತುಶಾಹಿ ಆಳರಸರ ವಿರುದ್ಧ ಸೆಣಸಾಡುತ್ತಿದ್ದ ಮತ್ತು ಭಾರತದಲ್ಲಿನ ವಿದೇಶಿ ಆಳ್ವಿಕೆಯನ್ನು ಕಿತ್ತೊಗೆಯುವ ಕನಸು ಕಾಣುತ್ತಿದ್ದ ಜಗತ್ತಿನೆಲ್ಲೆಡೆಯ ಕ್ರಾಂತಿಕಾರಿ ವ್ಯಕ್ತಿಗಳು ಹಾಗೂ ಸಂಘಟನೆಗಳಿಗೆ ಸಾವರ್ಕರ್ ಅವರು ಪ್ರತಿರೋಧದ ಒಬ್ಬ ಮಹಾನ್ ನೇತಾರನಾಗಿಯೇ ಉಳಿದುಕೊಂಡಿದ್ದರು. ಸಾವರ್ಕರ್ ಅವರು ಕ್ರಾಂತಿಕಾರಿ ಹಾದಿಯನ್ನು ತೊರೆದಿದ್ದರು ಮತ್ತು ಬ್ರಿಟಿಷರ ಕೃಪೆಗೆ ಒಳಗಾಗಲು ಸಿದ್ಧರಾಗಿದ್ದರು ಎಂಬ ಸಂಗತಿ ಅವರ್‍ಯಾರಿಗೂ ತಿಳಿದಿರಲಿಲ್ಲ. ಆದ್ದರಿಂದ ಸಹಜವಾಗಿಯೇ ಅವರು ಹೋರಾಟದ ಪ್ರತೀಕವಾಗಿಯೇ ಉಳಿದುಕೊಂಡಿದ್ದರು. ಎರಡನೆಯದು, ಸಾವರ್ಕರ್ ಅವರ ಶರಣಾಗತಿ ನಂಬಲು ಸಾಧ್ಯವಾಗದಷ್ಟು ಬೇಗ ಮತ್ತು ತ್ವರಿತವಾಗಿ ನಡೆದುಹೋಗಿತ್ತು. ಕೇವಲ ಅವರ ಮಾತುಗಳನ್ನು ನಂಬಲು ಸಿದ್ಧರಿಲ್ಲದ ಬ್ರಿಟಿಷರಿಗೆ ಅವರ ಶರಣಾಗತಿಯ ಪ್ರತಿಜ್ಞೆಯನ್ನು ಪರೀಕ್ಷಿಸಲು ಕಾಲಾವಕಾಶ ಬೇಕಿತ್ತು. ಆ ಕಾಲದ ಅತ್ಯಂತ ಕುತಂತ್ರಿ ಸಾಮ್ರಾಜ್ಯಶಾಹಿ ಶಕ್ತಿಯ ಪ್ರತಿನಿಧಿಯಾಗಿದ್ದ ಕ್ರಡಕ್ ಅವರು ತಮ್ಮ ಟಿಪ್ಪಣಿಯಲ್ಲಿ ಸಾವರ್ಕರ್ ಅವರ ಬಿಡುಗಡೆಯ ಪ್ರಶ್ನೆಯಲ್ಲಿ ವ್ಯಾವಹಾರಿಕ ಧೋರಣೆಯಲ್ಲಿ ಮಾತನಾಡುತ್ತ ಹೀಗೆ ಹೇಳಿದ್ದರು:

> ಎಷ್ಟರಮಟ್ಟಿಗೆ ಆತ ಅಪಾಯಕಾರಿ ಹೌದೋ ಅಲ್ಲವೋ ಅನ್ನುವುದು ಜೈಲಿನಲ್ಲಿನ ಆತನ ನಡವಳಿಕೆಯಂತೆಯೇ ಹೊರಗಡೆಯ ಸನ್ನಿವೇಶಗಳ ಮೇಲೂ ಅದು ಅವಲಂಬಿಸಿತ್ತು. ಮತ್ತು 10, 15 ಅಥವಾ 20 ವರ್ಷಗಳ ನಂತರ ಆ ಸಂದರ್ಭ ಹೇಗಿರುತ್ತದೆ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜೈಲಿನ ಶಿಸ್ತಿಗೆ ಒಳಪಡುವ ಮೂಲಕ ಮತ್ತು ಲಭ್ಯಗೊಳಿಸಿದ ಪುಸ್ತಕಗಳ ಮೂಲಕ ಜೈಲು ಜೀವನ ಆತನಿಗೆ ಕೊಡಬಹುದಾದುದಕ್ಕೆ ಒಗ್ಗಿಕೊಂಡು ಇಂತಹ ಉಪಶಮನ ಪಡೆಯಲು ಪ್ರಯತ್ನಿಸಬೇಕು ಎಂದಷ್ಟೇ ಆತನಿಗೆ ಸಲಹೆ ನೀಡಲು ಸಾಧ್ಯವಿತ್ತು.
>
> ಸಾವರ್ಕರ್‌ಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಕ್ಷಮೆ ನೀಡುವ ವಿಚಾರದಲ್ಲಿ ಎಚ್ಚರಿಕೆಯಿಂದ ಕಾದು ನೋಡಬೇಕೆಂದು ಬ್ರಿಟಿಷರು ನಿರ್ಧರಿಸಿದ್ದರು. ವಿಷಯ ಈಗ ಸಾವರ್ಕರ್ ಅವರಿಗೆ ಬಿಟ್ಟಿದ್ದಾಗಿತ್ತು, ಅವರು ತಮ್ಮ ಮಾತುಗಳನ್ನು ಕೃತಿಯಲ್ಲಿ ತೋರಿಸಿಕೊಡಬೇಕಿತ್ತು.

ಸಾವರ್ಕರ್ ಖಂಡಿತವಾಗಿಯೂ ಬ್ರಿಟಿಷ್ ದೊರೆಗಳನ್ನು ನಿರಾಸೆಗೊಳಿಸಲಿಲ್ಲ. ತ್ರೈಲೋಕ್ಯನಾಥ್ ಚಕ್ರವರ್ತಿ ತಮ್ಮ ಆತ್ಮಕಥನದಲ್ಲಿ ಪುಷ್ಟೀಕರಿಸಿದಂತೆ ಸಾವರ್ಕರ್ ತಮ್ಮ ಸಹವರ್ತಿ ಕ್ರಾಂತಿಕಾರಿಗಳಿಂದ ದೂರವಿರಲು ಶುರುಮಾಡಿದರು. ಅವರ ಲೆಕ್ಕದ ಪ್ರಕಾರವೇ ಪ್ರತಿ ತಿಂಗಳು ಸರಾಸರಿ ಮೂರು ಕೈದಿಗಳು ಸೆಲ್ಯುಲರ್ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಇದು ಮತ್ತೇನಕ್ಕೂ ಅಲ್ಲ, ಅಲ್ಲಿ ಕೈದಿಗಳನ್ನು ಅಷ್ಟು ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿತ್ತು. ದಬ್ಬಾಳಿಕೆಯನ್ನು ನೇರವಾಗಿ ಧಿಕ್ಕರಿಸಲು ಕೈದಿಗಳು ನಿರ್ಧರಿಸಿದ್ದರು. ಆದರೆ ಸಾವರ್ಕರ್ ಮತ್ತಿತರರು ಹೋರಾಟದೊಂದಿಗೆ ಕೈಜೋಡಿಸಲು ಒಪ್ಪಲಿಲ್ಲ. ಸಾವರ್ಕರ್ ಮತ್ತಿತರರು ಸೆಲ್ಯುಲರ್ ಜೈಲಿನ ಆ ಹೋರಾಟಗಳಲ್ಲಿ ಪಾಲ್ಗೊಳ್ಳದಿರುವುದು ಬ್ರಿಟಿಷರಿಗೆ ಸಹಾಯ ಮಾಡಿತು: ಅಲ್ಲಿ ಕಾನೂನಿನ ಆಳ್ವಿಕೆಯೇ ಇಲ್ಲ ಎಂಬ ಟೀಕೆಯನ್ನು ಎದುರಿಸಲು ಸಹಾಯಕವಾಯಿತು.

ಆರ್.ಸಿ.ಮಜುಂದಾರ್ ಅವರ ಪ್ರಕಾರ: ಸೆಲ್ಯುಲರ್ ಜೈಲಿನಲ್ಲಿ ಕೈದಿಗಳ ಸಾವು ಮತ್ತು ಉಪವಾಸ ಮುಷ್ಕರ ಎಂಬ ಸುದ್ದಿ ಕಲ್ಕತ್ತಾದ ಬಂಗಾಳೀಯಲ್ಲಿ ಪ್ರಕಟವಾದಾಗ, ಅದರ ಸಂಪಾದಕ ಸುರೇಂದ್ರನಾಥ್ ಬ್ಯಾನರ್ಜಿ ಅವರು ಜೈಲಿನಲ್ಲಿನ ಪರಿಸ್ಥಿತಿಯ ಬಗ್ಗೆ ಮಂಡಳಿಯಲ್ಲಿ ಹಲವಾರು ಪ್ರಶ್ನೆಗಳನ್ನು ಎತ್ತಿದರು. ಆಗ ಸರ್ಕಾರದ ಪರವಾಗಿ ಅದಕ್ಕೆ ಉತ್ತರ ನೀಡುತ್ತಾ, ಕೆಲವೇ ಕೆಲವು ದುಷ್ಟ ಕೈದಿಗಳಿಂದ ಮಾತ್ರ ಅಲ್ಲಿ ಸಮಸ್ಯೆ ಉಂಟಾಗಿದೆ; ಪ್ರಮುಖ ಕೈದಿಗಳಿಗೆ ಅವರ ಬಗ್ಗೆ ಅನುಕಂಪ ಇರಲಿಲ್ಲ ಮತ್ತು ಅವರು ಅದರಲ್ಲಿ ಸೇರಿಕೊಳ್ಳಲಿಲ್ಲ ಕೂಡ ಎಂದು ಹೇಳಿದರು. ಇದು ಅರ್ಧ ಸತ್ಯವಾಗಿತ್ತು. ಏಕೆಂದರೆ, ಈ ಮೇಲೆ ಈಗಾಗಲೇ ತಿಳಿಸಿದಂತೆ, ಬರೀಂದ್ರ ಘೋಷ್ ಮತ್ತು ಸಾವರ್ಕರ್ ಸೋದರರು ಅದರಲ್ಲಿ ಪಾಲ್ಗೊಂಡಿರಲಿಲ್ಲ. ಚಕ್ರವರ್ತಿಯವರು ತಮ್ಮ ಆತ್ಮಕಥನದಲ್ಲಿ ಹೇಳುತ್ತಾರೆ: ಸಾವರ್ಕರ್ ಸೋದರರು ನಮ್ಮ ಹೋರಾಟಕ್ಕೆ ಗುಪ್ತವಾಗಿ ಬೆಂಬಲ ನೀಡಿದರು, ಆದರೆ ಸೇರಿಕೊಳ್ಳಿ ಎಂದು ಕೇಳಿಕೊಂಡಾಗ ಅವರು ಸೇರಿಕೊಳ್ಳಲಿಲ್ಲ. ಇದು ಮತ್ತು ಚಕ್ರವರ್ತಿಯವರು ಈ ಮೇಲೆ ಹೇಳಿದಂತಹ ಉಲ್ಲೇಖಗಳು ಸಾವರ್ಕರ್ ಮತ್ತು ಬರೀಂದ್ರ ಘೋಷ್ ಅವರಂತಹ ಗಣ್ಯ ಕ್ರಾಂತಿಕಾರಿ ಮುಖಂಡರ ವಿರುದ್ಧ ಕಟುವಾದ ದೋಷಾರೋಪಣೆಯಾಗುತ್ತದೆ.

ಆದರೆ ಸಾವರ್ಕರ್ ತಾವು ಆ ರಾಜಕೀಯ ಕೈದಿಗಳ ಹೋರಾಟದಿಂದ ದೂರ ಉಳಿಯಲು ತಮ್ಮದೇ ಆದ ವಿವರಣೆಯನ್ನು ಹೊಂದಿದ್ದರು: ಅವರ ಆತ್ಮವೃತ್ತಾಂತದ ಪ್ರಕಾರ:

> ಕೆಲವು ರಾಜಕೀಯ ಕೈದಿಗಳ ಅಭಿಪ್ರಾಯ ಜೈಲಿನಲ್ಲಿ ಬಹಳ ವರ್ಷಗಳಿಂದ ಇರುವ ನಮ್ಮಂಥ ಹಿರಿಯ ಸದಸ್ಯರು ಆ ಮುಷ್ಕರದ ನಾಯಕತ್ವ ವಹಿಸಬೇಕೆಂಬುದಾಗಿತ್ತು. ನಮ್ಮೆಲ್ಲರ ಪರವಾಗಿ ಬೇಡಿಕೆಗಳನ್ನು ರೂಪಿಸುವುದೂ ಅವರದೇ ಆಗಿದೆ ಎನ್ನುವುದಾಗಿತ್ತು. ಆದರೆ, ಇಂತಹ ಕ್ರಮಗಳಿಂದ ಮುಷ್ಕರದ ಉದ್ದೇಶವು ಹೇಗೆ ಸೋಲುತ್ತದೆ ಮತ್ತು ಅದು ನಮ್ಮ ಮೂಲ ಗುರಿಗೆ ಹೇಗೆ ನಷ್ಟ ಉಂಟುಮಾಡುತ್ತದೆ ಎಂದು ನಾನು ಅವರಿಗೆ ವಿವರಿಸಿದೆ. ನಾನು ಬಹಿರಂಗವಾಗಿ ಅದಕ್ಕೆ ನಾಯಕತ್ವ ನೀಡಿದರೆ, ಜೈಲು ನಿಯಮಗಳ ಅನ್ವಯ ನನಗೆ ಮತ್ತು ಹಿರಿಯ ಕೈದಿಗಳಿಗೆ ಸಿಗುತ್ತಿರುವ ಎಲ್ಲಾ ರಿಯಾಯಿತಿಗಳನ್ನು ಕಿತ್ತುಹಾಕುವ ಅವಕಾಶ ಮಿ.ಬಾರಿ ಮತ್ತು ಅವರ ಮೇಲಿನ ಅಧಿಕಾರಿಗಳಿಗೆ ದೊರೆಯುತ್ತದೆ, ಅದರಿಂದಾಗಿ ನಾನು ಮತ್ತೆ ಏಕ ಕೋಣೆಯ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಪತ್ರ ವ್ಯವಹಾರ, ವೈಯಕ್ತಿಕ ಸಂದೇಶಗಳು ಮತ್ತು ಅದೇ ರೀತಿಯ ವಿಧಾನಗಳ ಮೂಲಕ ಮುಷ್ಕರಕ್ಕೆ ಅಗತ್ಯವಿದ್ದ ಪ್ರಚಾರ ಹಾಳುಗೆಡಲ್ಪಡುತ್ತದೆ, ಮತ್ತು ವೃತ್ತಪತ್ರಿಕೆಗಳು ಮತ್ತಿತರ ಮೂಲಗಳ ಮೂಲಕ ಭಾರತದಿಂದ ಸುದ್ದಿಗಳನ್ನು ಪಡೆಯುವ ವಿಧಾನಗಳೂ ಮುಚ್ಚಿಹೋಗುತ್ತವೆ. . ಇಂತಹ ಚಿಕ್ಕ ಪುಟ್ಟ ಅನುಕೂಲಗಳಿಗಾಗಿ ಒಬ್ಬನ ಜೀವವನ್ನು ಅಪಾಯಕ್ಕೊಡ್ಡುವುದು ರಾಷ್ಟ್ರೀಯ ಚಳವಳಿಯನ್ನೇ ಬಲಿ ಕೊಟ್ಟಂತಾಗುತ್ತದೆ, ಮತ್ತು ನಾನು ಮುಷ್ಕರದಲ್ಲಿ ತೊಡಗಿದರೆ, ಎಷ್ಟೇ ಕಷ್ಟ ಬಂದರೂ ನಾನು ಅದರಿಂದ ಹಿಂದೆ ಸರಿಯಬಾರದು. ಆದಕಾರಣ ನಮ್ಮ ಮಧ್ಯೆ ಇರುವ ಯುವಜನರು ಮತ್ತು ಚುರುಕಾದವರು ಆ ಹೊರೆಯನ್ನು ಹೊರಬೇಕಾಗುತ್ತದೆ, ಮತ್ತು ಈ ಹತ್ತಾರು ನೂರು ಜನರು ಸರದಿಯಲ್ಲಿ ಹೋರಾಟವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳನ್ನು ಮುಂದುವರಿಸಬೇಕು. ನಾನು ಅದರಿಂದ ಗೈರುಹಾಜರಾಗಲು ಎಲ್ಲಕ್ಕಿಂತಲೂ ಮುಖ್ಯವಾದ ಮತ್ತು ಕೊನೆಯದಾದ ಕಾರಣವೆಂದರೆ ನಾನು ಭಾರತಕ್ಕೆ ಪತ್ರ ಕಳಿಸುವ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತದೆ. ನಿಯಮಗಳ ಪ್ರಕಾರ ಒಂದು ವರ್ಷದ ಅವಧಿಯಲ್ಲಿ ಯಾವುದೇ ಶಿಕ್ಷೆಗಳಿಲ್ಲದೇ ಇರುವ ವ್ಯಕ್ತಿಗೆ ಪತ್ರಗಳನ್ನು ಕಳಿಸುವ ಅವಕಾಶ ಸಿಗುತ್ತದೆ. ನನಗೆ ಶಿಕ್ಷೆಯಾದರೆ ಅಥವಾ ಮುಷ್ಕರದಲ್ಲಿ ಭಾಗಿಯಾದರೆ, ನನ್ನ ಹಕ್ಕು ಅದರೊಂದಿಗೆ ಹೋಗಿಬಿಡುತ್ತದೆ, ಮತ್ತು ಹಾಗೆ ಹಕ್ಕುಗಳನ್ನು ಕಳೆದುಕೊಳ್ಳುವುದೆಂದರೆ ಅದು ಮುಷ್ಕರಕ್ಕೆ ಹಾನಿಯಾಗುತ್ತದೆ, ಅಷ್ಟೇ ಅಲ್ಲ ಅದಕ್ಕಿಂತಲೂ ಮುಖ್ಯವಾಗಿ ರಾಜಕೀಯ ಕೈದಿಗಳ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುವ ಅವಕಾಶವನ್ನೇ ಕಳೆದುಕೊಂಡಂತಾಗುತ್ತದೆ.

ಆದರೆ, ಮಜುಂದಾರ್ ಬರೆಯುತ್ತಾರೆ:

> ರಾಜಕೀಯ ಕೈದಿಗಳಲ್ಲಿನ ಯುವ ಪೀಳಿಗೆಯವರು ಎಷ್ಟರಮಟ್ಟಿಗೆ ಅದರಿಂದ ಪ್ರಭಾವಿತರಾದರು ಎಂದು ಹೇಳುವುದು ಕಷ್ಟವೇ ಸರಿ, ಆದರೆ ಚಕ್ರವರ್ತಿಯವರ ವಿವರಣೆಯ ಪ್ರಕಾರ ಕೊನೇಪಕ್ಷ ಒಂದು ವಿಭಾಗದವರಿಗಂತೂ ಅದು ಸ್ವಲ್ಪವೂ ಸಮಾಧಾನವಾಗಲಿಲ್ಲ. ಆದಾಗ್ಯೂ, ಯುವಜನರ ಗುಂಪು ತಮ್ಮ ಕಾರ್ಯಕ್ರಮಗಳನ್ನು ಬಿಡದೇ ಸಾರ್ವತ್ರಿಕ ಮುಷ್ಕರವನ್ನು ಮುಂದುವರಿಸಿದರು.

"ಸಾವರ್ಕರ್ ಅವರಿಗೆ ಗುಮಾಸ್ತಿಕೆಯ ಕೆಲಸ ನೀಡಲಾಗಿತ್ತು ಮತ್ತು ಆ ನಂತರದಲ್ಲಿ 1920 ರ ಕೊನೆಯಲ್ಲಿ ಎಣ್ಣೆ ಡಿಪೋ ಹಾಗೂ ಇಲಾಖೆಯ ಮೇಲ್ವಿಚಾರಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು." ಎಂದು ಸಾವರ್ಕರ್ ಅವರ ಚರಿತ್ರಕಾರ ಖೀರ್ ಅವರೂ ಒಪ್ಪಿಕೊಳ್ಳುತ್ತಾರೆ.

ಗಮನಿಸಬೇಕಾದ ಅಂಶವೆಂದರೆ ಸಾವರ್ಕರ್ ಅವರು ನವಂಬರ್ 14, 1913 ರಂದು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಖುದ್ದಾಗಿ ಕ್ರಡಕ್ ಅವರಿಗೆ ಸಲ್ಲಿಸಿದ್ದ ಕ್ಷಮಾಯಾಚನೆಯ ಪತ್ರವೇ ಕೊನೆಯದಲ್ಲ. ಅವರು ಒಟ್ಟೆಲ್ಲಾ ಐದು ಕ್ಷಮಾ ಯಾಚನೆಯ ಅರ್ಜಿಗಳನ್ನು 1911, 1913, 1914, 1918 ಮತ್ತು 1920 ರಲ್ಲಿ ಸಲ್ಲಿಸಿದ್ದರು. ಇತ್ತೀಚೆಗೆ ಸಾವರ್ಕರ್ ಅವರನ್ನು ಸಮರ್ಥಿಸಿ ಬರೆದ ಪುಸ್ತಕವೊಂದು "ಈ ಅವಧಿಯಲ್ಲಿ ಕ್ಷಮಾಯಾಚನೆ ಮಾಡಿ ಮತ್ತು ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ಕನಿಷ್ಠ ಏಳು ಅರ್ಜಿಗಳನ್ನು ಸಲ್ಲಿಸಿದ್ದರು." ಎಂಬ ವಾಸ್ತವಾಂಶವನ್ನು ಹೇಳುತ್ತದೆ.

1920 ರಲ್ಲಿ ಅವರು ಬರೆದ ಕ್ಷಮಾಯಾಚನೆಯ ಅರ್ಜಿಯು ಪೂರ್ಣ ಶರಣಾಗತಿಯನ್ನು ಬಯಸಿದ ಸಮಗ್ರವಾದ ಪತ್ರವಾಗಿದೆ.

(ಮುಂದುವರೆಯುವುದು)

ಸಂಪಾದಕೀಯ

ಭ್ರಷ್ಟರಿಗೆ ಅಭಯ, ಭ್ರಷ್ಟರೂ ನಿರ್ಭಯ

ಬಿ.ಜೆ.ಪಿಯ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಮತ್ತು ಅವರ ಮಗ ಮಾಡಾಳ್ ಪ್ರಶಾಂತ್ ಅವರ ಕಛೇರಿ ಹಾಗೂ ಮನೆ ಮೇಲೆ ನಡೆದ ಲೋಕಾಯುಕ್ತ ಪೋಲೀಸರ ಧಾಳಿಯಲ್ಲಿ ಸಿಕ್ಕಿರುವ ಅಕ್ರಮ, ಲಂಚದ ಹಣದ ಪ್ರಕರಣ ಸರಕಾರದ ಎಲ್ಲಾ ಹಂತಗಳಲ್ಲಿಯೂ ತಾಂಡವವಾಡುತ್ತಿರುವ ಭ್ರಹ್ಮಾಂಡ ಭ್ರಷ್ಟಾಚಾರವನ್ನು ಮತ್ತೊಮ್ಮೆ ಬಯಲಿಗಿಟ್ಟಿದೆ. ಸಿಕ್ಕಿರುವುದು ಶಾಸಕರ ಮನೆಯಲ್ಲಾದರೂ ಚುನಾವಣೆಯ ಹೊಸ್ತಿಲಿನಲ್ಲಿ ಕಂತೆ, ಕಂತೆಗಳ ಈ ಹಣದ ಪಾಲಿನ ನಂಟಿನ ಕಳಂಕದಿಂದ ಬಿಜೆಪಿ ಪಕ್ಷ ಮತ್ತು ಸರ್ಕಾರ ತಪ್ಪಿಸಿಕೊಳ್ಳುವಂತಿಲ್ಲ. ವಿಶೇಷವೆಂದರೆ 'ನ ಕಾವುಂಗಾ, ಖಾನೇ ದೂಂಗಾ' ಎಂದು ಡಂಗುರ ಹೊಡೆಯುತ್ತಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು 'ಉಕ್ಕಿನ ಮನುಷ್ಯ' ಎಂದು ಹೇಳಿಕೊಳ್ಳುವ ಗೃಹ ಸಚಿವ' ಅಮಿತ್ ಶಾ ರವರು ರಾಜ್ಯದಾದ್ಯಂತ ಪಾಳಿ ಯಂತೆ ರಾಜಕೀಯ ಪ್ರವಾಸ ಮಾಡುತ್ತಿರುವ ಸಂದರ್ಭದಲ್ಲಿಯೇ ಇದು ಬಯಲಾಗಿರುವುದು ವಿಶೇಷ. ಆದರೆ ಇವರನ್ನು ಒಳಗೊಂಡು ಬಿಜೆಪಿಯ ಯಾವ ನಾಯಕರು ಈ ಭ್ರಷ್ಟ ಹಗರಣದವನ್ನು ಖಂಡಿಸಿಲ್ಲ ಮತ್ತು ಭ್ರಷ್ಟಾಚಾರದ ಪ್ರಥಮ ಆರೋಪಿ ಶಾಸಕನ ಮೇಲೆ ಕ್ರಮವನ್ನೂ ಜರುಗಿಸಿಲ್ಲ ಎನ್ನುವುದೇ ಆತಂಕಕಾರಿ. ಯಾರೂ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವಂತಿಲ್ಲ ಎಂದು ಹೇಳಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂತರ' ಮಗ ಮಾಡಿದ ತಪ್ಪಿಗೆ ಅಪ್ಪನಿಗೆ ಯಾಕೆ ಶಿಕ್ಷೆ?' ಎಂದು ಹೇಳಿದರೆ, ಕಾನೂನು ಸಚಿವ ಮಾಧುಸ್ವಾಮಿ, ಮಾಜಿ ಮುಖ್ಯಮಂತ್ರಿ, ಸಂಸದ ಡಿ.ವಿ.ಸದಾನಂದಗೌಡ ರವರು ಅದೇ ಧಾಟಿಯಲ್ಲಿ ಸಮರ್ಥಿಸಿರುವುದು ಹೇಸಿಗೆ ಹುಟ್ಟಿಸುತ್ತದೆ. ಈ ಶಾಸಕನನ್ನು ಸರಕಾರಿ ಸ್ವಾಮ್ಯದ ಕರ್ನಾಟಕ ಮಾರ್ಜಕ ಮತ್ತು ಸಾಬೂನು ನಿಗಮ ನಿಯಮಿತ ದ ಅಧ್ಯಕ್ಷನ ಹುದ್ದೆಯಿಂದಲೂ ವಜಾ ಮಾಡಿಲ್ಲ. ಕಳಂಕಿತ ಶಾಸಕ ತನ್ನ ಸ್ಥಾನಕ್ಕೆ ರಾಜೀನಾಮೆಯನ್ನೂ ನೀಡಿಲ್ಲ. ಬಿಜೆಪಿಯೂ ಕ್ರಮ ಕೈಗೊಂಡಿಲ್ಲ. ಬದಲಾಗಿ, ನಿರೀಕ್ಷಣಾ ಜಾಮೀನು ಸಿಕ್ಕಿದೆಯೆಂದು ಲಜ್ಜೆಗೆಟ್ಟು ಮೆರವಣಿಗೆ ಮಾಡಿಸಿಕೊಂಡು ಬೀಗುತ್ತಾ ಬೀದಿಗಳಲ್ಲಿ ಸಾಗಿದ್ದು, ಮತ್ತು ಆ ಹಣ ಅಡಿಕೆ ಬೆಳೆಯಿಂದ ಬಂದಿದ್ದೆಂದು ಸಮರ್ಥಿಸಿಕೊಂಡಿದ್ದು ಭಂಡತನಕ್ಕೆ ಸಾಕ್ಷಿ.

ಈಗ ದೊರೆತ ಸ್ಪಷ್ಟ ಸಾಕ್ಷಿಗಳಂತೆ ಬೆಂಗಳೂರು ಜಲ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿಯಾಗಿರುವ ಶಾಸಕರ ಮಗ ಪ್ರಶಾಂತ್ ಮಾಡಾಳ್ ಅವರ ಖಾಸಗಿ ಕಚೇರಿಯಲ್ಲಿ 40 ಲಕ್ಷ ಲಂಚ ಸ್ವೀಕರಿಸುವಾಗಲೇ ರೆಡ್ ಹ್ಯಾಂಡಾಗಿ ಸಿಕ್ಕಿ ಬಿದ್ದಿದ್ದಾರೆ. ಅಲ್ಲದೆ ಶಾಸಕರ ನಿವಾಸದ ಮೇಲೆ ದಾಳಿ ಮಾಡಿದಾಗ 6.12 ಕೋಟಿ ರೂಪಾಯಿಗಳ ನಗದು ಸಿಕ್ಕಿತ್ತು. ಅಲ್ಲದೆ ಚನ್ನಗಿರಿ ಕ್ಷೇತ್ರದ ಶಾಸಕರ ಕಚೇರಿಯಲ್ಲಿಯೇ 1.62 ಕೋಟಿಗಳು ಹಾಗೂ ಕರ್ನಾಟಕ ಅರೋಮಾಸ್ ಕಂಪನಿಯ ನೌಕರರು ತಂದ 90 ಲಕ್ಷ ರೂಪಾಯಿಗಳನ್ನು ಪಡೆದದ್ದು ಒಟ್ಟು 8.28 ಕೋಟಿ ರೂಪಾಯಿಗಳ ನಗದು ಹಣವನ್ನು ವಶ ಪಡಿಸಿಕೊಳ್ಳಲಾಗಿದೆ. ಸೋಪ್ ಫ್ಯಾಕ್ಟರಿಗೆ ಕಚ್ಚಾವಸ್ತು ಖರೀದಿಯ ಟೆಂಡರ್ ಸಂಬಂಧ 40 ಲಕ್ಷ ರೂ.ಗಳ ಲಂಚ ಪಡೆಯುತ್ತಿರುವಾಗಲೇ ಮಾರ್ಚ್ 2, 2023 ರಂದು ಪ್ರಶಾಂತ್ ಮಾಡಾಳರನ್ನು ಬಂಧಿಸಲಾಗಿತ್ತು. ನಂತರ ನಡೆದ ದಾಳಿಯಲ್ಲಿ ಹಾಗೂ ತನಿಖೆ ನಡೆಯುತ್ತಿರುವಾಗಲೇ ತಂದ ಲಂಚದ ಹಣ ಸೇರಿ ಇಷ್ಟೆಲ್ಲಾ ಸಿಕ್ಕಿದೆ. ಶಾಸಕ ಮಾಡಾಳ್ ವಿರುಪಾಕ್ಷಪ್ಪನವರು ಹೇಳಿದಂತೆ ಕೃಷಿ ವ್ಯವಹಾರದ ವಹಿವಾಟುಗಳನ್ನು ಮೌಲ್ಯಮಾಪನ ಮಾಡಿದರೂ ಇಷ್ಟೊಂದು ಹಣ ಅದರಿಂದ ಗಳಿಸುವ ಸಾಧ್ಯತೆಗಳೇ ಇಲ್ಲ. ಅನೈತಿಕ, ಅಕ್ರಮ, ಭ್ರಷ್ಟಾಚಾರ ನಡೆಸಿರುವ ಶಾಸಕರು ತಮ್ಮ ಮುಖ ಉಳಿಸಿಕೊಳ್ಳಲು ನೀಡುತ್ತಿರುವ ಭಂಡ ಹೇಳಿಕೆಗಳು ಅವು ಎನ್ನುವುದು ಹೊರನೋಟದಲ್ಲೇ ಕಾಣುತ್ತದೆ.

ಇಷ್ಟೊಂದು ನಗದು ಹಣವನ್ನು ಒಬ್ಬೊಬ್ಬರು ತಮ್ಮ ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳಬಹುದು ಎನ್ನುವುದಾದರೆ ಮೋದಿಯವರ ಡಿಜಿಟಲ್ ಕರೆನ್ಸಿ ವ್ಯವಹಾರ ಕಥೆ ಏನಾಯಿತು? ಕಪ್ಪು ಹಣವನ್ನು ಮಟ್ಟ ಹಾಕಲೆಂದೆ ನೋಟ್ ಬ್ಯಾನ್ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದುದರ ಕಥೆ ಏನಾಯ್ತು? ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಬಿಜೆಪಿಯ ಈ ಸರ್ಕಾರ ಶೇ 40 ರ ಸರ್ಕಾರ ಎನ್ನುವ ಆರೋಪಕ್ಕೆ ಈ ಪ್ರಕರಣ ಮತ್ತೊಂದು ಪ್ರಬಲ ಸಾಕ್ಷಿ. ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಪ್ರಧಾನ ಮಂತ್ರಿಯವರೆಗೂ ದೂರು ನೀಡಿದರೂ ಯಾವುದೇ ಕನಿಷ್ಠ ವಿಚಾರಣೆಯೂ ನಡೆಯಲಿಲ್ಲ. ಎಸ್.ಐ. ನೇಮಕಾತಿ ಹಗರಣ, ಡ್ರಗ್ಸ್ ಮಾಫಿಯಾ ಹಗರಣ, ಸಚಿವನ ಲೈಂಗಿಕ ಸಿ.ಡಿ.ಹಗರಣ, ಕ್ರಿಪ್ಟೋ ಕರೆನ್ಸಿ ಹಗರಣ, ಗುತ್ತಿಗೆದಾರರ ದೂರುಗಳು, ಮುಂತಾದ ಹಲವಾರು ಭ್ರಷ್ಟಾಚಾರದ ಪ್ರಕರಣಗಳು ಹೊರಬಂದ ಬಳಿಕ ನಡೆದಿರುವ ವಿಚಾರಣೆ ಆರಂಭದಲ್ಲಿ ಅಬ್ಬರದ ಸುದ್ದಿ ಮಾಡಿದ ಬಳಿಕ ಸೊರಗಿ ಹೋಗಿವೆ.

ಇಂತಹ ಅನೇಕ ಪ್ರಕರಣಗಳನ್ನು ಸಾರ್ವಜನಿಕರು, ವಿರೋಧ ಪಕ್ಷಗಳು ಸರ್ಕಾರದ ಗಮನಕ್ಕೆ ತಂದಾಗ ಅದನ್ನು ಆರಂಭದಲ್ಲೇ ತಳ್ಳಿ ಹಾಕುವ ಮುಖ್ಯಮಂತ್ರಿಗಳು ಸಾಕ್ಷಿ ಇದ್ದರೆ ಕೊಡಿ ಎಂದು ಕೇಳುವುದೇ ವಾಡಿಕೆಯಾಗಿ ಹೋಗಿದೆ. ಮಾಡಾಳು ವಿರೂಪಾಕ್ಷಪ್ಪ ಅವರ ಪ್ರಕರಣದಲ್ಲಿ ಅನುಮಾನಕ್ಕೆ ಎಡೆಯೇ ಇಲ್ಲದಂತೆ ಸಾಕ್ಷಿ ಸಿಕ್ಕಿದ್ದಾಗಲೂ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟದ ಸಚಿವರು, ಕೇಂದ್ರದ ಸರ್ಕಾರ ಕಣ್ಣು ಮುಚ್ಚಿ ಕುಳಿತಿರುವುದು ಇವರ ಶಾಮೀಲುತನವನ್ನು ಬಯಲಿಗೆ ಇಟ್ಟಿದೆ. ಪ್ರತಿ ಭ್ರಷ್ಟಾಚಾರದ ಪ್ರಕರಣದ ಆರೋಪಗಳು ಬಂದಾಗ ಅವನ್ನು ಸಮರ್ಥಿಸಿಕೊಳ್ಳುವುದರಿಂದ ಭ್ರಷ್ಟರು, ಲಂಚಕೋರ ಲೂಟಿಕೋರರು ಮತ್ತು ಕ್ರಿಮಿನಲ್ ಅಪರಾಧಿಗಳು ತಮ್ಮ ಕೃತ್ಯಗಳನ್ನು ದಕ್ಕಿಸಿಕೊಳ್ಳಬಹುದು ಎನ್ನುವ ರಕ್ಷಣೆಯ ಗ್ಯಾರಂಟಿ ಹುಟ್ಟಿ ಭಂಡತನವನ್ನು ಗಟ್ಟಿಗೊಳಿಸುತ್ತಾ ರಕ್ಷಿಸುತ್ತಾ ಬಂದಿರುವುದು ಎದ್ದು ಕಾಣುತ್ತದೆ.

ಇಲ್ಲಿ ಇನ್ನೊಂದು ಗಹನವಾದ ವಿದ್ಯಮಾನವು ಕೂಡ ನಡೆದುಹೋಗಿದೆ. ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿದ ಮರುದಿನವೇ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಜಾಮೀನು ಸಿಕ್ಕಿರುವುದು ನ್ಯಾಯಾಂಗ ಮತ್ತು ಸಾರ್ವಜನಿಕ ವಲಯದಲ್ಲೂ ತೀವ್ರತರ ಆಕ್ಷೇಪ ಮತ್ತು ತಾರತಮ್ಯದ ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ. ಸಾಮಾನ್ಯರು ನ್ಯಾಯಾಲಯದ ಮುಂದೆ ಅರ್ಜಿ ಹಾಕಿದಲ್ಲಿ ತಿಂಗಳು, ಎರಡು ತಿಂಗಳು ಕಾಯಬೇಕಾದ ವಾಸ್ತವ ಸ್ಥಿತಿ ಇರುವಾಗ ಇಂತಹ ವಿಐಪಿ ಗಳಿಗೆ ಕೇವಲ 24 ತಾಸುಗಳ ಒಳಗೇ ಜಾಮೀನು ಮಂಜೂರಾಗುವುದು ಹೇಗೆ ಎನ್ನುವ ಪ್ರಶ್ನೆಯನ್ನು ವಕೀಲರ ಸಂಘವೇ ಎತ್ತಿ ಪರಿಶೀಲಿಸುವಂತೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಲ್ಲಿ ಮನವಿ ಮಾಡಿದೆ. ನ್ಯಾಯಾಲಯದ ನಡೆ ನ್ಯಾಯಾಂಗದ ಬಗೆಗಿನ ಸಾರ್ವಜನಿಕರ ನಂಬಿಕೆ ಮತ್ತು ಘನತೆಯನ್ನು ಕುಗ್ಗುವಂತೆ ಪುಟ 4 ಕ್ಕೆ

ಚುನಾವಣಾ ಘೋಷಣೆಯ ಮುನ್ಸೂಚನೆಗಳು

ಕರ್ನಾಟಕಕ್ಕೆ ಚುನಾವಣಾ ಆಯೋಗದ ಆಯುಕ್ತರು ಮತ್ತು ಅಧಿಕಾರಿಗಳು ಭೇಟಿ ನೀಡಿದ್ದಾರೆ. ಇದ್ದ ಮೂರು ದಿನಗಳಲ್ಲಿ (ಮಾರ್ಚ್ 9 ರಿಂದ 11) ಕರ್ನಾಟಕ ಸರ್ಕಾರ, ವಿವಿಧ ರಾಜಕೀಯ ಪಕ್ಷಗಳು, ಅಧಿಕಾರಿಗಳು, ಮುಂತಾದವರೊಂದಿಗೆ ನಿರಂತರ ಸಮಾಲೋಚನೆಗಳನ್ನು ನಡೆಸಿದ್ದಾರೆ. ಮತ್ತು ಚುನಾವಣಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡುತ್ತಿದ್ದಾರೆ. ಮೇ ತಿಂಗಳಲ್ಲಿ ನಡೆಯಬೇಕಿರುವ ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ನಡೆಸುವುದಕ್ಕೆ ಪೂರ್ವ ಪೂರ್ವಭಾವಿ ಸಿದ್ಧತೆಗಳ ಅವಲೋಕನ. ಎಂದಿಮತೆ ನಡೆದ ತಾಲೀಮು. ಈಗ ನಡೆದಿರುವ ಸಭೆಯ ನಂತರದ ಸೂಚನೆಯಂತೆ ಇನ್ನು ಕೆಲವು ದಿನಗಳಲ್ಲಿ ಚುನಾವಣೆಯ ಒಟ್ಟು ಸಂಭವನೀಯ ವೇಳಾಪಟ್ಟಿ ಪ್ರಕಟಗೊಳ್ಳಬಹುದು. ಈಗ ನಿಗದಿಯಾಗಿರುವಂತೆ ಚುನಾವಣಾ ಪೂರ್ವ ಪ್ರಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಇದೇ ಮಾರ್ಚ್ 25ರಂದು ಕರ್ನಾಟಕಕ್ಕೆ ಭೇಟಿ ನೀಡಿ ಬಹಿರಂಗ ಸಭೆಯನ್ನು ಉದ್ದೇಶಸಿ ಮಾತನಾಡಲಿದ್ದಾರೆ. ಬಳಿಕ ಮಾರ್ಚ್ 27 ರಂದು ಚುನಾವಣಾ ಆಯೋಗ ನೀತಿ ಸಂಹಿತೆಯನ್ನು ಅಧಿಕೃತವಾಗಿ ಜಾರಿಗೊಳಿಸಲಿದೆ ಎನ್ನುವ ಮುನ್ಸೂಚನೆಗಳಿವೆ. ಮೇ 12ರಂದು ಮತದಾನ ನಡೆಯುವ, 15 ರಂದು ಎಣಿಕೆ ಮಾಡುವ ಸೂಚನೆಗಳೂ ಇದೆ. ಬಹುತೇಕ ಎಲ್ಲ ರಾಜಕೀಯ ಪಕ್ಷಗಳು ಒಂದು ದಿನದಲ್ಲಿ ಚುನಾವಣೆ ನಡೆಯುವಂತೆ ಚುನಾವಣಾ ಆಯುಕ್ತರನ್ನು ಒತ್ತಾಯಿಸಿದ್ದವು. ಏಪ್ರಿಲ್ 17ರಂದು ಚುನಾವಣಾ ನೋಟಿಫಿಕೇಶನ್, 24ಕ್ಕೆ ನಾಮಪತ್ರ ಸಲ್ಲಿಕೆಯ ಕೊನೆಯ ದಿನ ನಿಗದಿಯಾಗುವ ಸಂಭವನೀಯ ಸೂಚನೆಗಳು ಇವೆ. ಚುನಾವಣಾ ಬಹಿರಂಗ ಪ್ರಚಾರಕ್ಕೆ ಬಹಳ ಎಂದರೆ 14 ಅಥವಾ 15 ದಿನಗಳು ಲಭ್ಯವಾಗಬಹುದು. ಅಂದರೆ ರಾಜ್ಯದಲ್ಲಿ ಈಗ ನಡೆದಿರುವ ಚುನಾವಣೆಯ ಪೂರ್ವಭಾವಿ ಸಿದ್ಧತೆಗಳ ಭರಾಟೆ, ಕೊಡುಗೆಗಳು ಕೊನೆಗೊಳ್ಳುತ್ತಾ ಚುನಾವಣೆಯ ನೀತಿ ಸಂಹಿತೆ ವ್ಯಾಪ್ತಿಯ ಒಳಗಡೆಯ ಚಟುವಟಿಕೆಗಳು ಬಿರುಸುಗೊಳ್ಳಲಿವೆ.

ಇನ್ನೇನಿದ್ದರೂ ರಾಜ್ಯದಲ್ಲಿ ಚುನಾವಣೆಯ ಜ್ವರ.

* * * * *

ಮೋ–ಶಾ ಗಳ ಠಿಕಾಣಿ

ಚುನಾವಣೆಯ ಸಿದ್ಧತೆಯ ಕಾರ್ಯಗಳಲ್ಲಿ ಪ್ರಚಾರದಲ್ಲಿ ಭರದಿಂದ ತೊಡಗಿರುವ ವಿವಿಧ ರಾಜಕೀಯ ಪಕ್ಷಗಳ ಚಟುವಟಿಕೆಗಳು ಈ ವಾರ ಮತ್ತಷ್ಟು ಹೆಚ್ಚಾಗಿವೆ. ಚುನಾವಣಾ ಆಯೋಗದ ಅಧಿಕಾರಿಗಳು ರಾಜ್ಯಕ್ಕೆ ಭೇಟಿ ನೀಡಿರುವುದಂತೂ ಎಲ್ಲ ರಾಜಕೀಯ ಪಕ್ಷಗಳಿಗೆ ಚುನಾವಣೆಯ ಸಿದ್ಧತೆಯ ಮತ್ತು ಯಾವುದೇ ಸಂದರ್ಭದಲ್ಲಿ ಅದರ ವೇಳಾಪಟ್ಟಿಯ ಪ್ರಕಟಣೆಯ ನಿರೀಕ್ಷೆಯನ್ನು ಹೆಚ್ಚಿಸಿದೆ. ಕಾಂಗ್ರೆಸ್ ಪಕ್ಷ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳು ರಾಜ್ಯದ ನಾಯಕರುಗಳ ಪ್ರವಾಸ, ಪ್ರಚಾರ ಕಾರ್ಯದಲ್ಲಿದ್ದರೆ, ಬಿಜೆಪಿ ಪಕ್ಷ ಮಾತ್ರ ಸಂಪೂರ್ಣವಾಗಿ ಅಖಿಲ ಭಾರತ ನಾಯಕರನ್ನೇ ಅವಲಂಬಿಸಿದೆ. ಅದರಲ್ಲೂ ಮುಖ್ಯವಾಗಿ ಪ್ರಧಾನಮಂತ್ರಿ ಮತ್ತು ಗೃಹ ಸಚಿವ ಅಮಿತ್ ಶಾ ರವರು ಬಹುತೇಕ ಎಲ್ಲ ಪ್ರಾದೇಶಿಕ ಪ್ರಮುಖ ಕೇಂದ್ರಗಳಲ್ಲೂ ಮತ್ತು ಹಲವಾರು ಜಿಲ್ಲೆಗಳಲ್ಲಿಯೂ ಸರ್ಕಾರಿ ಅಧಿಕೃತ ಕಾರ್ಯಕ್ರಮದ ಮೂಲಕವೇ ಬಹುತೇಕ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಈ ಸರಣಿಯಲ್ಲಿ ಮಾರ್ಚ್ 25 ಪ್ರಧಾನಿ ನರೇಂದ್ರ ಮೋದಿಯವರ ಭೇಟಿ ಬಹುತೇಕ ಅಂತಿಮ ಇರಬೇಕು

ಈ ವಾರ

ಎಸ್.ವೈ. ಗುರುಶಾಂತ್

ರಾಜ್ಯದಲ್ಲಿ ಗೆಲ್ಲುವ ಅನುಮಾನ ಇರುವ ಕಡೆ ಅಥವಾ ಸೋಲುವ ಸಾಧ್ಯತೆಗಳು ನಿಚ್ಚಳವಾಗಿರುವ ಕಡೆಗಳಲ್ಲಿ ತನ್ನನ್ನು ಆಹ್ವಾನಿಸಬೇಕು ಎಂದು ಗೃಹ ಸಚಿವ ಅಮಿತ್ ಶಾ ಹೇಳಿರುವುದಾಗಿ ವರದಿಯಾಗಿದೆ. ಸೋಲನ್ನು ಗೆಲುವಾಗಿ ಪರಿವರ್ತಿಸುವ ಅಂತಹ ಮಂತ್ರ ಮಾನದಂಡ ಅವರಲ್ಲಿ ಏನಿದೆ ಎನ್ನುವುದು ಕುತೂಹಲಕಾರಿ ಅಂಶ! ಆದರೆ ಚುನಾವಣೆಯ ಕಾರ್ಯತಂತ್ರ, ಕಾರ್ಯವಿಧಾನಗಳಲ್ಲಿ ಮತ್ತು ಅದಕ್ಕಾಗಿ ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳ ಬಳಕೆಯಲ್ಲಿ ಬಿಜೆಪಿ ಪಕ್ಷವನ್ನು ಸರಿಗಟ್ಟುವುದು ಒಂದು ರೀತಿಯಲ್ಲಿ ಅಸಾಧ್ಯವೇ. ಅದು ಪ್ರಥಮವಾಗಿ ಕಾರ್ಪೊರೇಟ್ ಕಂಪನಿಗಳ ಅತಿ ಹೆಚ್ಚು ಹೂಡಿಕೆಯನ್ನು ಪಡೆಯುವ ರಾಜಕೀಯ ಪಕ್ಷ. ಅತ್ಯಂತ ಸುಸಂಘಟಿತ ಸಂಘಟನಾ ಜಾಲ ಮತ್ತು ಸೈದ್ಧಾಂತಿಕ ಬದ್ಧತೆ ಸ್ಪಷ್ಟತೆ ಇರುವ ಕಮ್ಯೂನಿಸ್ಟ್ ಪಕ್ಷಗಳು ಮಾತ್ರ ಬಲವಾಗಿರುವಲ್ಲಿ ಬಿಜೆಪಿಯ ಸಿದ್ಧತೆ ಮತ್ತು ಆಕ್ರಮಣಕಾರಿ ಪ್ರಚಾರವನ್ನು ಅದರ ಸಂಘಟನಾ ಕಾರ್ಯಗಳನ್ನು ಎದುರಿಸಬಲ್ಲರು. ಕಾಂಗ್ರೆಸ್, ಜೆಡಿ ಎಸ್ ನಂತಹ ಬೇರೆ ಪಕ್ಷಗಳಿಗೆ ಅದು ತುಂಬಾ ಕಷ್ಟ ಸಾಧ್ಯ ಎಂದು ಚುನಾವಣಾ ತಜ್ಞರೊಬ್ಬರು ಇತ್ತೀಚಿಗೆ ಹೇಳಿದರು. ಬಿಜೆಪಿ ರಾಜಕೀಯ ಪ್ತಭಾನದ ಜೊತೆಗೆ ಸಂಘ ಪರಿವಾರದ ಸುಸಂಘಟಿತ ಜಾಲವೇ ಇದೆ. ಮೇಲಾಗಿ ಅಪಾರ ಪ್ರಮಾಣದ ಹಣಕಾಸು ಮತ್ತು ಮಾನವ ಇತ್ಯಾದಿ ಸಂಪನ್ಮೂಲಗಳ ವ್ಯವಸ್ಥೆ ಇದೆ ಎನ್ನುವುದು ಆ ಮಾತಿಗೆ ಒಂದು ಮೂಲ ಆಧಾರ ಅಂಶ. ಎಲ್ಲಾ ಹಂತಗಳ ಸರಕಾರಿ ಆಡಳಿತ ಯಂತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಅದು ಬಳಸುತ್ತಿದೆ. ವಿಶೇಷವಾಗಿ, ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಮತ್ತು ನಿರ್ದಿಷ್ಟ ನಿಖರ ಮಾಹಿತಿಗಳನ್ನು ಸಂಗ್ರಹಿಸುತ್ತಾ, ತಳಮಟ್ಟದಲ್ಲಿಯೂ ಬೀದಿ ಬೀದಿಗಳ ಹಂತದಲ್ಲಿಯೂ ರೂಪಿಸಿದ ತಂತ್ರಕ್ಕೆಅನುಗುಣವಾಗಿ ಕಾರ್ಯ ನಡೆಸುತ್ತಿರುವುದು ಬಿಜೆಪಿಯೇ ಎಂಬುದು ಒಂದು ಒಳ ಅವಲೋಕನ. ಕರ್ನಾಟಕದ ಜನ ಬಿಜೆಪಿಯ ದುರಾಡಳಿತಕ್ಕೆ ಬೇಸತ್ತಿದ್ದಾರೆ ಎನ್ನುವುದು ಸ್ಪಷ್ಟ. ಆದರೆ ಅದನ್ನು ಅತ್ಯಂತ ವ್ಯವಸ್ಥಿತವಾಗಿ ಬಳಸುವುದು, ಚುನಾವಣಾ ರಾಜಕೀಯ ತಂತ್ರ ಹೆಣೆಯುವುದು, ಅದನ್ನು ಕಟಿ ಬದ್ಧವಾಗಿ ಕಾರ್ಯಗತಗೊಳಿಸುವುದು ಒಂದು ಬಹುದೊಡ್ಡ ಸವಾಲು ಎಂಬುದು ನನ್ನೊಂದಿಗೆ ಮಾತನಾಡಿದ ಅವರ ಅಭಿಮತ. ಅವರ ಈ ಅಭಿಪ್ರಾಯವನ್ನು ಅಷ್ಟು ಸುಲಭದಲ್ಲಿ ತಳ್ಳಿ ಹಾಕುವಂತೆ ಇಲ್ಲ. ಯಾಕೆಂದರೆ ಭಾರತದ ಹಲವಾರು ರಾಜ್ಯಗಳ ಚುನಾವಣಾ ಪೂರ್ವ ಹಾಗೂ ನಂತರದಲ್ಲಿ ಸ್ಥಳಮಟ್ಟದ ಕಾರ್ಯ ವಿಶ್ಲೇಷಣೆ ಮತ್ತು ರಾಜಕೀಯ ತಂತ್ರಗಳನ್ನು ರೂಪಿಸುವುದರಲ್ಲಿ ಪಾಲ್ಗೊಂಡ ಅನುಭವ ಇರುವವರು.

* * *

ಅಡಕತ್ತರಿಯಲ್ಲಿ ಯಡ್ಯೂರಪ್ಪ!

ಕರ್ನಾಟಕದಲ್ಲಿ ಬಿಜೆಪಿಯು ಸಹ ಚುನಾವಣಾ ಸಿದ್ಧತೆಗಳನ್ನು ತೀವ್ರಗೊಳಿಸಿದೆ. ಈ ಚುನಾವಣೆ ಯಾರ ನಾಯಕತ್ವದಲ್ಲಿ ನಡೆಯಬೇಕು ಮತ್ತು ನಡೆಯಲಿದೆ ಎನ್ನುವುದರ ಸುತ್ತ ಅನೇಕ ಕುತೂಹಲ ಚರ್ಚೆಗಳು ನಡೆದಿದ್ದವು. ಚುನಾವಣೆಯ ಪ್ರಚಾರ ನೇತೃತ್ವವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ವಹಿಸಬಹುದು ಎನ್ನುವ ಮಾತುಗಳು ಇದ್ದವು. ಆ ಮೂಲಕ ತಮ್ಮನ್ನು ಮೂಲೆಗುಂಪು ಮಾಡಲಾಗುತ್ತಿದೆ ಮತ್ತು ಪ್ರಾಮುಖ್ಯತೆಯನ್ನು ಹಂತ ಹಂತವಾಗಿ ಕಳೆಯಲಾಗುತ್ತಿದೆ ಎನ್ನುವ ಭಾವನೆಗಳು ಸ್ವತಃ ಯಡಿಯೂರಪ್ಪನವರಲ್ಲಿ ಮನೆ ಮಾಡಿಕೊಂಡಿರುವುದನ್ನು ಎಲ್ಲರೂ ಕಂಡಿದ್ದಾರೆ. ಯಡಿಯೂರಪ್ಪನವರನ್ನು ಬಿಟ್ಟು ಚುನಾವಣೆ ನಡೆಸಲು ಬಿಜೆಪಿ ಹೋದಲ್ಲಿ ಅದು ತಿರುಗುಬಾಣವಾಗಲಿದೆ ಎನ್ನುವ ಅಂಶವನ್ನು ಬಿಜೆಪಿ ನಾಯಕತ್ವ ಗಮನಿಸದೇ ಇಲ್ಲ. ಹಾಗಾಗಿ ಲಿಂಗಾಯತರನ್ನು ಹಿಡಿದಿಟ್ಟುಕೊಳ್ಳಲು ಯಡಿಯೂರಪ್ಪನವರಿಗೆ ಮುಖ್ಯಸ್ಥಾನ ಸಿಗಲಿದೆ ಎನ್ನುವ ನಿರೀಕ್ಷೆಗಳನ್ನು ಹರಿಯ ಬಿಡಲಾಗಿತ್ತು. ರಾಜ್ಯದಲ್ಲಿನ ವಿಜಯ ಸಂಕಲ್ಪ ಯಾತ್ರೆಯ ಸಭೆಗಳಿಗೆ ಬಿಎಸ್ ವೈ ಅವರನ್ನು ಕರೆದೊಯ್ಯಲಾಗಿತ್ತು. ಆದರೆ ಇದೀಗ ಪ್ರಕಟಗೊಂಡಿರುವ ಚುನಾವಣಾ ಪ್ರಚಾರ ಸಮಿತಿಯ ನೇತೃತ್ವವನ್ನು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರೇ ವಹಿಸಲಿದ್ದಾರೆ. ಈ ಸಮಿತಿಗೆ ಪುಟ 06 ಕ್ಕೆ

ಕರ್ನಾಟಕ; ವಿಧಾನಸಭಾ ಚುನಾವಣೆ; ಅಕ್ರಮಕ್ಕೆ ಕಡಿವಾಣ; ನಿಷ್ಪಕ್ಷಪಾತವಾಗಿ ನಡೆಯಬೇಕು ಸಿಪಿಐ(ಎಂ) ಮನವಿ ಮತ್ತು ಆಗ್ರಹ

ಕರ್ನಾಟಕದಲ್ಲಿ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆ ಹಿನ್ನಲೆಯಲ್ಲಿ ಭಾರತೀಯ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳು ಇತ್ತೀಚಿಗೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಸಿಪಿಐ(ಎಂ) ರಾಜ್ಯ ಸಮಿತಿ ಪರವಾಗಿ ಕೆ.ಮಹಾಂತೇಶ್ ಆಯೋಗದ ಮುಂದೆ ಹಾಜರಾಗಿ ಪಕ್ಷದ ಅಭಿಪ್ರಾಯಗಳನ್ನು ಮಂಡಿಸಿದರು.

ಚುನಾವಣಾ ಆಯೋಗದ ಮುಂದೆ ಕಾಂಗ್ರೆಸ್, ಬಿಜೆಪಿ, ಬಿಎಸ್ಪಿ, ಜೆಡಿಎಸ್, ಸಿಪಿಐ ಮೊದಲಾದ ರಾಜಕೀಯ ಪಕ್ಷಗಳ ಮುಖಂಡರು ಕೂಡ ಹಾಜರಾಗಿ ತಮ್ಮ ತಮ್ಮ ಪಕ್ಷಗಳ ಪರವಾಗಿ ಅಭಿಪ್ರಾಯ ಮಂಡಿಸಿದರು.

ಕರ್ನಾಟಕದಲ್ಲಿ ಶಾಂತಿಯುತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಕ್ರಮ ಕೈಗೊಳ್ಳಬೇಕು ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಧಿಕಾರ ದುರುಪಯೋಗ ಮಾಡದಂತೆ ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ನೆನ್ನೆ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಪರವಾಗಿ ಭಾರತದ ಚುನಾವಣಾ ಆಯೋಗಕ್ಕೆ ಮನವಿ ಮಾಡಲಾಯಿತು.

ಬಿಜೆಪಿ ವಿಭಜನಕಾರಿ ನೀತಿ;

ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿರುವಂತೆ ಆಡಳಿತಾರೂಢ ಬಿಜೆಪಿ ಪಕ್ಷವು ಧಾರ್ಮಿಕ ಹಾಗೂ ಜಾತಿಯ ವಿಚಾರಗಳಲ್ಲಿ ಜನರನ್ನು ವಿಭಜಿಸಲು ಪ್ರಯತ್ನಿಸುತ್ತಿರುವ ಕಾರಣ, ಚುನಾವಣಾ ಆಯೋಗವು ಈ ಚುನಾವಣೆಯನ್ನು ಅತ್ಯಂತ ಸೂಕ್ಷ್ಮವೆಂದು ಪರಿಗಣಿಸಬೇಕು. ರಾಜ್ಯದಲ್ಲಿ ಸಂಘಪರಿವಾರ ಶಕ್ತಿಗಳು ಈಗಾಗಲೇ ಸೌಹಾರ್ದತೆಯ ಪ್ರತೀಕವಾಗಿರುವ ಹಬ್ಬ ಹರಿದಿನಗಳನ್ನು ಕೋಮುವಾದದ ಹೆಸರಿನಲ್ಲಿ ಉನ್ಮಾದಗೊಳಿಸಿ ಜನರ ಸೌಹಾರ್ದತೆಯನ್ನು ಹಾಳು ಮಾಡಲು ಸಾಕಷ್ಟು ಪ್ರಯತ್ನಗಳನ್ನು ನಡೆಸಿವೆ ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಬಿಜೆಪಿ ಮತ್ತು ಸಂಘಪರಿವಾರದ ಈ ಕೋಮುದ್ರುವೀಕರಣ ಮತ್ತು ವಿಭಜನಾಕಾರಿ ಚಟುವಟಿಕೆಗಳನ್ನು ನಿಯಂತ್ರಣ ಮಾಡಲು ಕ್ರಮವಹಿಸಬೇಕು ಎಂದು ಸಿಪಿಐ(ಎಂ) ಪಕ್ಷವು ಆಗ್ರಹಿಸಿತು.

ವ್ಯಾಪಕ ಭ್ರಷ್ಟಾಚಾರ;

ಈ ಚುನಾವಣೆಯಲ್ಲಿ ಅತಿಯಾದ ಭ್ರಷ್ಟಾಚಾರದ ಹಣದ ಹರಿವು ಈಗಾಗಲೇ ಆರಂಭಗೊಂಡಿದೆ. ಅದಾಗಲೇ ಅಭ್ಯರ್ಥಿಯಾಗಬಯಸುವವರು, ಆಗಿರುವವರು, ಮನೆಮನೆಗೆ ಕುಕ್ಕರ್ ಹಾಗೂ ಬೆಲೆಬಸಳುವ ಸೀರೆಗಳನ್ನು ಹಂಚುವುದು, ಧರ್ಮಸ್ಥಳ, ಮಂತ್ರಾಲಯ, ಶ್ರೀ ಶೈಲ ಮುಂತಾದ ಪ್ರದೇಶಗಳಿಗೆ ಯಾತ್ರೆಗಳನ್ನು ಸಂಘಟಿಸಿ ಅದಕ್ಕಾಗಿ ಬಸ್ ಮತ್ತಿತರೆ ವ್ಯವಸ್ಥೆಗಳನ್ನು ಒದಗಿಸುವುದು, ಕ್ಷೇತ್ರವಾರು, ಪಂಚಾಯತ್ ವಾರು ಸಾಮೂಹಿಕ ಬಾಡೂಟಗಳನ್ನುಸಂಘಟಿಸುವುದು. ಸ’ವ’ುುದಾ’ು೦ು’ುಗ’ಳಿಗೆ’, ದೇವಸ್ಥಾನಗಳಿಗೆ ಹಣವನ್ನು ವಿತರಿಸುವುದು! ಹುಟ್ಟು ಹಬ್ಬದ ಹೆಸರಲ್ಲಿ ಬೃಹತ್ ಸಭೆಗಳು ಮತ್ತು ಭಾರೀ ಔತಣಕೂಟಗಳನ್ನು ಸಂಘಟಿಸುವುದು ನಡೆದಿದೆ.



ಇನ್ನು ಚುನಾವಣೆ ಘೋಷಣೆಯಾದ ಬಳಿಕ ಅದರ ಪಾತ್ರ ಇನ್ನೂ ಹೆಚ್ಚಾಗಲಿದೆ. ಈ ಹಿನ್ನೆಲೆಯಲ್ಲಿ ಆಯೋಗವು ಈ ಬಗ್ಗೆ ತನ್ನ ಕಣ್ಗಾವಲನ್ನು ಕೇಂದ್ರೀಕರಿಸಬೇಕು. ಪ್ರಧಾನ ಮಂತ್ರಿ ಮತ್ತು ಗೃಹ ಸಚಿವರು ಮತ್ತು ಇತರ ಸಚಿವರು ರಾಜ್ಯದ ಮುಖ್ಯಮಂತ್ರಿಯಾದಿಯಾಗಿ ಸರ್ಕಾರಿ ಯಂತ್ರವನ್ನು ಮತ್ತು ಆಡಳಿತಶಾಹಿಯನ್ನು ಈ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸಾಧ್ಯತೆ ಇದ್ದು ಅದಕ್ಕೆ ಅಗತ್ಯ ಕಡಿವಾಣ ಹಾಕಬೇಕು

ಒಂದೇ ಹಂತದ ಮತದಾನಕ್ಕೆ ಒತ್ತಾಯ;

ಕರ್ನಾಟಕದ ಸದ್ಯದ ಪರಿಸ್ಥಿತಿಯಲ್ಲಿ ಎಪ್ರಿಲ್ ಅಂತ್ಯಕ್ಕೆ ಅಥವಾ ಮೇ ಮೊದಲ ವಾರದಲ್ಲಿ ಒಂದೇ ಹಂತದಲ್ಲಿ ಎಲ್ಲ 224 ಕ್ಷೇತ್ರಗಳಿಗೂ ಚುನಾವಣೆ ನಡೆಸುವುದು ಸೂಕ್ತವಾಗಿದೆ. ಹಲವು ಹಂತದ ಚುನಾವಣೆಗೆ ಅವಕಾಶ ನೀಡಿದಲ್ಲಿ ಕೇಂದ್ರದ ಹಾಗೂ ರಾಜ್ಯದ ಬಿಜೆಪಿ ಪಕ್ಷವು ತಮ್ಮ ಅಧಿಕಾರ ದುರುಪಯೋಗ ಹಾಗೂ ದುರ್ಬಳಕೆ ಮಾಡಿಕೊಳ್ಳುವ ಸಾದ್ಯತೆಗಳು ಹೆಚ್ಚಾಗಿವೆ. ಈಗಾಗಲೇ ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಮತ್ತು ಅದರ ಅಭ್ಯರ್ಥಿಗಳು ಸಾಕಷ್ಟು ಚುನಾವಣಾ ಅಕ್ರಮಗಳನ್ನು ಎಸಗಿರುವ ದೂರುಗಳು ಕರ್ನಾಟಕ ಹೈಕೋರ್ಟನಲ್ಲಿ ವಿಚಾರಣೆ ಹಂತದಲ್ಲಿರುವುದನ್ನು ಆಯೋಗದ ಗಮನಕ್ಕೆ ತರಲಾಯಿತು.

ಮೇಲ್ಕಂಡ ಎಲ್ಲ ಅಂಶಗಳನ್ನು ಪರಿಶೀಲಿಸಿ ಕರ್ನಾಟಕದಲ್ಲಿ ಶಾಂತಿಯುತ ಹಾಗೂನ್ಯಾಯ ಸಮ್ಮತವಾದ ಮತ್ತು ನಿಷ್ಪಕ್ಷಪಾತ ಚುನಾವಣೆ ನಡೆಯುವಂತೆ ಕ್ರಮವಹಿಸಬೇಕು ಎಂದು ಸಿಪಿಐ(ಎಂ) ಪಕ್ಷವು ಮನವಿ ಮಾಡಿದೆ.

ನಿಷ್ಪಕ್ಷಪಾತ ಚುನಾವಣೆಯ ಭರವಸೆ;
ಹಲವು ಕ್ರಮಗಳ ಪ್ರಕಟಣೆ;

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ಶ್ರೀರಾಮ ಕುಮಾರ್ ನೇತೃತ್ವದ ಹಿರಿಯ ಅಧಿಕಾರಿಗಳ ತಂಡವು ಸತತವಾಗಿ ಮೂರು ದಿನಗಳ ಕಾಲ ಕರ್ನಾಟಕ ವಿಧಾನಸಭೆ ಚುನಾವಣೆ ಸಿದ್ದತೆಗಳ ಕುರಿತು ರಾಜ್ಯದಲ್ಲಿ ಸಭೆ ನಡೆಸಿತು.

ಇದರಲ್ಲಿ ಅಂಗೀಕೃತ ರಾಜಕೀಯ ಪಕ್ಷಗಳ ನಿಯೋಗಗಳೊಂದಿಗೆ, ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು, ಸರ್ಕಾರದ ಮುಖ್ಯಸ್ಥರು, ಹಲವಾರು ಕೇಂದ್ರೀಯ ತನಿಖಾ ಸಂಸ್ಥೆಗಳ ಮುಖ್ಯಸ್ಥರು, ಐಟಿ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿಗಳು, ಅಧ್ಯಾಪಕರು ಸೇರಿ ವಿವಿಧ ಕ್ಷೇತ್ರಗಳ ಜನರನ್ನು ಬೇಟಿಮಾಡಿ ಮಾತುಕತೆ ನಡೆಸಿದರು. ಈ ನಿರಂತರವಾದ ಸರಣಿ ಸಭೆಗಳ ಬಳಿಕ ಪತ್ರಿಕಾಗೋಷ್ಠಿ ನಡೆಸಿದ ಆಯುಕ್ತರು ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

ಪ್ರಮುಖ ಅಂಶಗಳು;

ನೂತನ ಕರ್ನಾಟಕ ಚುನಾಯಿತ ವಿಧಾನ ಸಭೆಯು 2023 ರ ಮೇ 24 ರೊಳಗೆ ಅಸ್ತಿತ್ವಕ್ಕೆ ಬರುವುದು.

ಚುನಾವಣಾ ಆಯೋಗವು ನಿಷ್ಪಕ್ಷಪಾತ ಹಾಗೂ ನ್ಯಾಯ ಸಮ್ಮತವಾದ ಚುನಾವಣೆಯನ್ನು ನಡೆಸಲು ಬದ್ದವಾಗಿದೆ.

ರಾಜ್ಯದಲ್ಲಿ 1200 ವಿಶೇಷ ಹಾಗೂ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ ಮತ್ತು ಅಲ್ಲೆಲ್ಲಾ ನೇರ ಚುನಾವಣಾ ಆಯೋಗವೇ ಸಂಪೂರ್ಣ ವೆಬ್ ಮೂಲಕ ನೇರ ನಿಯಂತ್ರಣ ಮಾಡಲಿದೆ

ಚುನಾವಣೆಯಲ್ಲಿ ಎಲ್ಲ ರೀತಿಯ ಅಕ್ರಮ, ಅವ್ಯವಹಾರ, ಹಣದ ಸಾಗಣೆ, ಎಲ್ಲ ರೀತಿಯ ಅಮಿಷಗಳನ್ನು ಮತದಾರರಿಗೆ ಒಡ್ಡುವ ಚಟುವಟಿಕೆಗಳನ್ನು ನಿಯಂತ್ರಿಸಲು ಎಲ್ಲ ಕ್ರಮವಹಿಸಲಿದೆ.

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆ, ಅವರ ಆಸ್ತಿ, ಹಣದ ಸೇರಿ ಎಲ್ಲ ವಿವರಗಳು ಚುನಾವಣಾ ಆಯೋಗದ ವೆಬ್ ಸೈಟ್ ನಲ್ಲಿ ಲಭ್ಯವಾಗುವಂತೆ ಕ್ರಮ ಮತ್ತು ಕ್ರಿಮಿನಲ್ ಹಿನ್ನೆಲೆಯವರಿಗೆ ಟೀಕೆಟ್ ನೀಡಿದ ರಾಜಕೀಯ ಪಕ್ಷಗಳು ಯಾಕಾಗಿ ಅಂತಹ ಅಭ್ಯರ್ಥಿಗಳನ್ನು ಸ್ಪರ್ಧಿಸಲು ಅವಕಾಶ ನೀಡಿದ್ದೇವೆ ಎಂದು ರಾಷ್ಟ್ರೀಯ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಕಡ್ಡಾಯ ಜಾಹೀರಾತು ನೀಡಬೇಕಾದ ಕ್ರಮ ಜಾರಿ

ಸಾರ್ವಜನಿಕರು ಯಾವುದೇ ರೀತಿಯ ಅಕ್ರಮಗಳು ಕಂಡು ಬಂದಲ್ಲಿ ನೇರವಾಗಿ ಚುನಾವಣಾ ಆಯೋಗಕ್ಕೆ ದೂರು ನೀಡಲು ಅವಕಾಶ, ರಾಜಕೀಯ ಸಭೆ, ರ್‍ಯಾಲಿ ನಡೆಸಲು ಸ್ಥಳಾವಕಾಶ ನೀಡುವಾಗ ಎಲ್ಲ ರಾಜಕೀಯ ಪಕ್ಷಗಳಿಗೆ ಸಮಾನ ಅವಕಾಶ ಮೊದಲು ಬಂದವರಿಗೆ ಮೊದಲ ಆಧ್ಯತೆ ಯಾವುದೇ ತಾರತಮ್ಯಕ್ಕೆ ಅವಕಾಶವಿಲ್ಲ.

ಇವಿಎಂ ರಕ್ಷಣೆಗೆ ಮೂರು ಹಂತದ ವಿಶೇಷ ಭದ್ರತೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ವೀಕ್ಷಣೆಗೆ ಮುಕ್ತ ಅವಕಾಶ.

ಕರ್ನಾಟಕದಲ್ಲಿ ಮತದಾರರಲ್ಲಿ 100 ವರ್ಷ ದಾಟಿರುವ 17000 ಅತ್ಯಂತ ಹಿರಿಯ ಹಾಗೆಯೇ 80 ವಯಸ್ಸು ದಾಟಿದ 12.15 ಲಕ್ಷ ಹಿರಿಯ ಮತದಾರರಿದ್ದು ಅವರೆಲ್ಲರೂ ಬಯಸಿದರೆ ಮನೆಯಲ್ಲೇ ಎಲ್ಲ ಗೌಪ್ಯ ಹಾಗೂ ಸುರಕ್ಷಿತ ವಿಧಾನ ಹಾಗೂ ಚುನಾವಣಾ ಸಿಬ್ಬಂದಿ ಸಮಕ್ಷಮದಲ್ಲೇ ಮತಾದಾನಕ್ಕೆ ಅವಕಾಶ ಮಾಡಿಕೊಡಲು ಮೊದಲ ಬಾರಿಗೆ ನಿರ್ಧಾರ.

ಹಿರಿಯರು, ಅಂಗವಿಕಲರು, ತೃತೀಯ ಲಿಂಗಿಗಳು, ಗಿರಿಜನರಾದ ಜೇನು ಕುರುಬರು,ಅಂಧರು ಮೊದಲಾದವರ ಮತದಾನಕ್ಕೆ ಬೇಕಾದ ಸಕಲ ವ್ಯವಸ್ಥೆ, ಮತದಾನ ನಡೆಯುವ ಎಲ್ಲ ಶಾಲೆ ಕಾಲೇಜುಗಳಿಗೂ ಇದುವರೆಗೂ ಮಾಡುತ್ತಿದ್ದ ತಾತ್ಕಾಲಿಕ ಸೌಲಭ್ಯಗಳ ಬದಲು ಖಾಯಂ ಸ್ವರೂಪದಲ್ಲೇ ಕುಡಿಯುವ, ನೀರು, ಶೌಚಾಲಯ, ವಿಶ್ರಾಂತಿ ಗೃಹ, ವಿದ್ಯುತ್ ಮೊದಲಾದ ವ್ಯವಸ್ಥೆ.

ರಾಜ್ಯದಲ್ಲಿ ಹೊಸದಾಗಿ ನೊಂದಣಿಯಾದ ಯುವ ಮತದಾರರು ಮತಗಟ್ಟೆಗಳಿಗೆ ಬರುವಂತೆ ವಿಶೇಷ ಕಾರ್ಯಕ್ರಮಗಳನ್ನು ಮತ್ತು ಮಹಿಳೆಯರು, ಅಂಗವಿಕಲರೇ, ಯುವಕರೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವ ಮತಗಟ್ಟೆಗಳಲ್ಲಿ ಹೆಚ್ಚಿನ ಕೆಲಸ ನಿರ್ವಹಿಸುವಂತ ಕ್ರಮಗಳನ್ನು ಮುಂದಿನ ಒಂದೂವರೆ ತಿಂಗಳಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ವಿವರಿಸಿದರು.

ಬೀದಿ ಬದಿ ವ್ಯಾಪಾರಿಗಳಿಂದ ಮಹಾನಗರ ಪಾಲಿಕೆ ಎದುರು ಪ್ರತಿಭಟನೆ:

ಬೀದಿ ಬದಿ ವ್ಯಾಪಾರಿಗಳ ಮೇಲೆ ಕಾನೂನುಬಾಹಿರ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಆರೋಪಿಸಿ ಮಾರ್ಚ್ 7ರಂದು ಬೀದಿ ಬದಿ ವ್ಯಾಪಾರಿಗಳು ದ.ಕ. ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ಶ್ರೇಯೋಭಿವೃದ್ಧಿ ಸಂಘದ ನೇತೃತ್ವದಲ್ಲಿ ಮಂಗಳೂರಿನ ಮಹಾನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರು ಬಲ್ಲಾಳ್ ಭಾಗ್ ವೃತ್ತದಿಂದ ಮೆರವಣಿಗೆ ಹೊರಟು ಪಾಲಿಕೆ ಕಚೇರಿ ಎದುರು ಧರಣಿ ಕುಳಿತರು.

ಪಟ್ಟಣ ವ್ಯಾಪಾರ ಸಮಿತಿ ಸಭೆ ಕರೆಯಬೇಕು. ಪಟ್ಟಣ ವ್ಯಾಪಾರಿಗಳ ಕುಂದುಕೊರತೆ ಸರಿಪಡಿಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದ ಸಮಿತಿ ನೇಮಕ ಮಾಡಬೇಕು, ಬೀದಿ ಬದಿ ಆಹಾರ ಮಾರಾಟಗಾರರಿಗೆ 10 ದಿನಗಳ ತರಬೇತಿ ವ್ಯವಸ್ಥೆ ಮಾಡಬೇಕು, ಕಾನೂನು ಬಾಹಿರ ದಾಳಿಗಳನ್ನು ನಿಲ್ಲಿಸಬೇಕು, ಬೀದಿ ಬದಿ ವ್ಯಾಪಾರಿಗಳಿಗೆ ಗುರುತುಚೀಟಿ ಮತ್ತು ಪ್ರಮಾಣಪತ್ರ ವಿತರಿಸಬೇಕು ಎಂದು ಧರಣೆ ನಿರತರು ಆಗ್ರಹಿಸಿದರು.

ಈ ಸಂದರ್ಭ ಪಾಲಿಕೆ ಕಮಿಷನರ್ ಅವರಿಗೆ ಬೀದಿ ಬದಿ ಶ್ರೇಯೋಭಿವೃದ್ಧಿ ಸಂಘದ ಗೌರವಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮನವಿಯನ್ನು ಸಲ್ಲಿಸಿದರು. ಕಮೀಷನರ್ ಭರವಸೆ ಮೇರೆಗೆ ಧರಣಿಯನ್ನು ಹಿಂತೆಗೆದುಕೊಳ್ಳಲಾಯಿತು. ಸಿಐಟಿಯು ದ.ಕ. ಜಿಲ್ಲಾ ಉಪಾಧ್ಯಕ್ಷ ಸುಕುಮಾರ್ ತೊಕ್ಕೊಟ್ಟು ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಮುಹಮ್ಮದ್ ಮುಸ್ತಾಫ, ಕಾರ್ಯದರ್ಶಿ ಹರೀಶ್ ಪೂಜಾರಿ ಮತ್ತಿತರ ಮುಖಂಡರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಭ್ರಷ್ಟರಿಗೆ ಅಭಯ, ಭ್ರಷ್ಟರೂ ನಿರ್ಭಯ....... ಪುಟ 3 ರಿಂದ

ಮಾಡಿದೆ. ನ್ಯಾಯಾಲಯದ ಸ್ಪಂದನ, ಪ್ರಕರಣದ ಬಗ್ಗೆ ಸರ್ಕಾರದ ಸಮರ್ಥನೆ, ಆರೋಪಿ ಶಾಸಕನ ಸಮಾಜಾಯಿಷಿಗಳು ಹಾಗೂ ಭಂಡತನಗಳು ಮತ್ತು ಬಿಜೆಪಿ ನಾಯಕರ ಸಮ್ಮತಿ ನ್ಯಾಯ ದೊರಕುವ ಆಶಾಭಾವನೆಯನ್ನು ಸಂಪೂರ್ಣವಾಗಿ ಕಮರಿಸುತ್ತಿವೆ. ಆರೋಪಿ ಶಾಸಕನನ್ನು ಪೊಲೀಸರು ತೀವ್ರ ಹುಡುಕುತ್ತಿರುವಾಗಲೇ ಜಾಮೀನು ಶಿಕ್ಕ ಕೆಲವೇ ನಿಮಿಷಗಳಲ್ಲಿ ತನ್ನದೇ ಸ್ವಂತ ಊರಿನಲ್ಲಿ ಮನೆಯ ಬಳಿ ಪ್ರತ್ಯಕ್ಷನಾಗಿದ್ದು ಆಶ್ಚರ್ಯಕರ. ಆರೋಪಿ ಶಾಸಕ ವಿರೂಪಾಕ್ಷಪ್ಪನವರ ಬಂಧನಕ್ಕೆ ತೀವ್ರ ಹುಡುಕಾಟ ಆರಂಭಿದ್ದೇವೆ ಎಂದಿದ್ದ ಪೋಲೀಸರ ಹೇಳಿಕೆಯೇ ಢೋಂಗಿ ಎಂದಾಯಿತು. ಈ ಸಂಗತಿಗಳು ಸರ್ಕಾರದ ನಿಯಂತ್ರಣದಲ್ಲಿರುವ ಲೋಕಾಯುಕ್ತ ಪೊಲೀಸರು ಈ ಪ್ರಕರಣದಲ್ಲಿಯೂ ನ್ಯಾಯವನ್ನು ಒದಗಿಸಬಹುದೇ ಎನ್ನುವ ಅನುಮಾನ ಕಾಡುತ್ತಿದೆ. ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪನವರ ಲಂಚದ ಪ್ರಕರಣದಲ್ಲಿ ಆತ್ಮಹತ್ಯೆಗೀಡಾದ ಗುತ್ತಿಗೆದಾರನ ಪ್ರಕರಣದಲ್ಲಿಯೂ ಇದೇ ಸರ್ಕಾರದ ತನಿಖಾ ಸಂಸ್ಥೆಗಳು ಕ್ಲೀನ್ ಚಿಟ್ ನೀಡಿದ್ದು ಸಾರ್ವಜನಿಕರ ನೆನಪಿನಿಂದ ಮರೆಯಾಗಿಲ್ಲ.

ಶಾಸಕ ವಿರೂಪಾಕ್ಷಪ್ಪ ಮಾಡಾಳ್ ಮತ್ತು ಅವರ ಮಗನ ಪ್ರಕರಣ ಭ್ರಷ್ಟಾಚಾರದ ಸ್ಪಷ್ಟ ಸಾಕ್ಷಿಗಳನ್ನು ಒಳಗೊಂಡಿದೆ. ಸರ್ಕಾರ ಈ ಕೂಡಲೇ ಕೆಎಸ್‌ಡಿಎಲ್. ನ ಅಧ್ಯಕ್ಷ ಸ್ಥಾನದಿಂದ ಅವರನ್ನು ವಜಾಗೊಳಿಸಬೇಕು. ಬಿಜೆಪಿ ಪಕ್ಷ ಶಾಸಕನನ್ನು ಉಚ್ಚಾಟಿಸಬೇಕು. ಮತ್ತು ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ಕಠಿಣ ಕ್ರಿಮಿನಲ್ ಕೃತ್ಯಗಳಿಗೆ ಕ್ರಮಗಳನ್ನು ಕೈಗೊಳ್ಳಬೇಕು. ಪ್ರಕರಣದ ಸಾಕ್ಷಿಗಳನ್ನು ಬುಡಮೇಲು ಮಾಡದಂತೆ ನಿರ್ಭಂಧಿಸಬೇಕು.

ಸಾರ್ವಜನಿಕ ಹಣದ ಎಗ್ಗಿಲ್ಲದ ಲೂಟಿ, ವ್ಯಾಪಕ ಭ್ರಷ್ಟಾಚಾರ, ವಂಚನೆ, ಅನೈತಿಕತೆ ಹಗರಣಗಳಿಂದ ಮೈಯೆಲ್ಲಾ ಮೆತ್ತಿಕೊಂಡಿರುವ ಬಿಜೆಪಿ ಪಕ್ಷ ಮತ್ತು ಬಿಜೆಪಿ ಸರ್ಕಾರ ಇವೆಲ್ಲವುಗಳನ್ನು ಮರೆಮಾಚಿಕೊಳ್ಳಲು ಹಿಂದುತ್ವದ, ಹಿಂದೂ ಮತ ಧರ್ಮದ ರಕ್ಷಣೆಯ ಮತ್ತು ದೇಶಪ್ರೇಮದ ಸೋಗನ್ನು ಹಾಕುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ಮುಖೇಡಿತನದ ಎಲ್ಲವನ್ನೂ ಮರೆಸುವಂತೆ ಧಾರ್ಮಿಕತೆಯ ದುರ್ಬಳಕೆ ಹಾಗೂ ಮತೀಯ ವಿಭಜನೆಯನ್ನು ತರುವುದರ ಮೂಲಕ ಮತಧರ್ಮವನ್ನು ಕಿಂಚಿತ್ತೂ ಅಳುಕಿಲ್ಲದೇ ದುರುಪಯೋಗ ಮಾಡಿಕೊಳ್ಳುತ್ತಿದೆ. ಧರ್ಮದ್ರೋಹಿಗಳ ಕೃತ್ಯ ಇದು ಉಗ್ರ ಖಂಡನೀಯ. ಬಿಜೆಪಿ ಮತ್ತು ಸಂಘ ಪರಿವಾರದ ಈ ನಿಜ ಮುಖಗಳನ್ನು ಜನತೆ ಅರ್ಥಮಾಡಿಕೊಳ್ಳಬೇಕು, ತಕ್ಕ ಪಾಠ ಕಲಿಸಬೇಕು.



ಬಿಜೆಪಿ ಮನೆ ತುಂಬೆಲ್ಲ ಹಗರಣಗಳು

ಗುರುರಾಜ ದೇಸಾಯಿ

ರಾಜ್ಯದಲ್ಲಿ ಬಿಜೆಪಿ ಅಧಿಕಾರ ನಡೆಸಿದಾಗೆಲ್ಲ, ಅಭಿವೃದ್ಧಿಗಿಂತ ಹಗರಣಗಳು ನಡೆದದ್ದೆ ಹೆಚ್ಚೆಂದು ಕಾಣಿಸುತ್ತಿದೆ. ಹಾಗಾಗಿಯೇ ಬಿಜೆಪಿ ಎಂದರೆ ಹಗರಣದ ಮನೆಯಾಗಿದೆ. ಕಳೆದೊಂದು ವರ್ಷದಿಂದ ನಡೆದ ಹಗರಣಗಳ ಪಟ್ಟಿ ಬೆಟ್ಟದಷ್ಟು ದೊಡ್ಡದಾಗುತ್ತಿದೆ. ಬಹುತೇಕ ಇಲಾಖೆಗಳಲ್ಲಿ ಹಗರಣದ ವಾಸನೆ ಮೂಗಿಗೆ ಬಡಿಯುತ್ತಲೇ ಇದೆ. ಶಾಸಕ ಮಾಡಾಳು ವಿರೂಪಾಕ್ಷಪ್ಪ ಪ್ರಕರಣದಲ್ಲಂತು ಬಿಜೆಪಿ ನಡೆಸಿದ್ದೇ ಆಟ ಎಂಬಂತಾಗಿತ್ತು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ.

ಪಿಎಸ್ಐ ನೇಮಕಾತಿ ಹಗರಣ, ವಕ್ಫ್ ಹಗರಣ, ಮತದಾರರ ಪಟ್ಟಿ ಹಗರಣ, ಶಿಕ್ಷಣ ಇಲಾಖೆ, ಗೃಹ ಇಲಾಖೆ, ಕೆಪಿಎಸ್ಸಿ, ಕೆಪಿಟಿಸಿಎಲ್, ಕೆಲಸ ಮಾಡಿಕೊಡಲು ಕಮಿಷನ್, ಟೆಂಡರ್ಗೆ ಕಮಿಷನ್, ಹೀಗೆ ಹಗರಣಗಳ ಮೇಲೆ ಹಗರಣ ನಡೆಸಿ 40% ಕಮಿಷನ್ ಸರ್ಕಾರ ಎಂದು ಜನ ಕ್ಯಾಕರಿಸಿ ಉಗಿಯುವಂತೆ ನಡೆದುಕೊಂಡಿದೆ. ಬಿಜೆಪಿ ಸರ್ಕಾರದ ವಿರುದ್ಧ ಕೇಳಿ ಬಂದ ಪ್ರಮುಖ ಆರೋಪ, ಹಗರಣಗಳ ಕುರಿತ ವರದಿ ಇಲ್ಲಿದೆ.

40% ಕಮೀಷನ್:

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪ್ರಧಾನಿ ನರೇಂದ್ರ ಮೋದಿ ಅವರಿಗೆ 2021ರ ಜುಲೈ 6 ರಂದು ಒಂದು ಪತ್ರ ಬರೆದಿದ್ದರು. ರಾಜ್ಯದಲ್ಲಿ ಕಾಮಗಾರಿಗಳಿಗೆ ಶೇ. 40ರಷ್ಟು ಕಮಿಷನ್ ಕೇಳಲಾಗುತ್ತಿದೆ, ಸರ್ಕಾರದ ಈ ಬೇಡಿಕೆಯಿಂದ ಗುಣಮಟ್ಟದ ಕೆಲಸ ಸಾಧ್ಯವಾಗುತ್ತಿಲ್ಲ, ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು ಎಂದು ಅವರು ಮನವಿ ಮಾಡಿದ್ದರು.

ರಾಜ್ಯ ಸರ್ಕಾರ ಈ ಆರೋಪವನ್ನು ಸರಿಯಾಗಿ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೂಚನೆಯಂತೆ ಪಿಎಂ ಕಚೇರಿ ಮಧ್ಯಪ್ರವೇಶ ಮಾಡಿದ್ದು, 2022ರ ಜೂನ್ 28 ರಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣಗೆ ಪ್ರಧಾನಿ ಕಾರ್ಯಾಲಯದಿಂದ ಕರೆ ಬಂದಿದ್ದು, ಪ್ರಕರಣದ ಸಂಪೂರ್ಣ ಮಾಹಿತಿಯನ್ನು ದಾಖಲೆ ಸಮೇತ ಒದಗಿಸುವಂತೆ ಸೂಚಿಸಿತ್ತು. ಇದು ರಾಜ್ಯ ಬಿಜೆಪಿ ಸರ್ಕಾರವನ್ನು ಮುಜುಗರಕ್ಕೆ ಸಿಲುಕುವಂತೆ ಮಾಡಿತ್ತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಮ್ಮ ಬಳಿ ಶೇ. 40ರಷ್ಟು ಕಮಿಷನ್ ಕೇಳಿದ್ದಾರೆ ಎಂದು ಆರೋಪಿಸಿ ಬೆಳಗಾವಿ ಮೂಲಕ ಗುತ್ತಿಗೆದಾರ ಸಂತೋಷ್ ಡೆತ್ ನೋಟ್ ಬರೆದಿಟ್ಟು, ಉಡುಪಿಯಲ್ಲಿ 2022ರ ಏಪ್ರಿಲ್ 12ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಪ್ರತಿಪಕ್ಷದ ಒತ್ತಡ, ಹೋರಾಟಕ್ಕೆ ಮಣಿದ ಈಶ್ವರಪ್ಪ ಏಪ್ರಿಲ್ 14ರಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದು ರಾಜ್ಯ ಬಿಜೆಪಿ ಸರ್ಕಾರಕ್ಕೆ ತೀವ್ರ ಮುಖಭಂಗವಾಗುವಂತೆ ಮಾಡಿತ್ತು. ಹಿರಿಯ ಸಚಿವರೊಬ್ಬರು ಕಮಿಷನ್ ಆರೋಪಕ್ಕೆ ಒಳಗಾಗಿ ರಾಜಿನಾಮೆ ನೀಡಿದ್ದು, ರಾಷ್ಟ್ರಮಟ್ಟದಲ್ಲಿ ಸದ್ದು ಮಾಡುವಂತೆ ಮಾಡಿತ್ತು.

ಪಿಎಸ್ಐ ನೇಮಕಾತಿ ಹಗರಣ:

ಪಿಎಸ್ಐ ನೇಮಕದಲ್ಲಿ ನಡೆದ ಅಕ್ರಮ ಪ್ರಕರಣ ರಾಜ್ಯ ಬಿಜೆಪಿ ಸರ್ಕಾರದ ಪಾಲಿಗೆ ಅತ್ಯಂತ ದೊಡ್ಡ ಮುಜುಗರ ತರಿಸಿದ ಘಟನೆಯಾಗಿದೆ. ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಕಲಬುರಗಿ ಬಿಜೆಪಿ ನಾಯಕಿಯಾಗಿದ್ದು, ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಅವರನ್ನು ಮಹಾರಾಷ್ಟ್ರದ ಪುಣೆಯಲ್ಲಿ ಸಿಐಡಿ ಪೊಲೀಸರು ಬಂಧಿಸಿದ್ದರು.

ಇದು ಬಿಜೆಪಿ ವಿರುದ್ಧದ ಆರೋಪಕ್ಕೆ ಪುಷ್ಠಿ ನೀಡಿತ್ತು. ಈ ಅಕ್ರಮದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್ ನಾರಾಯಣ ಸೇರಿದಂತೆ ಹಲವರು ಭಾಗಿಯಾಗಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದವು. ಹೈಕಮಾಂಡ್ನ ಕೆಂಗಣ್ಣಿಗೂ ಗುರಿಯಾಗಬೇಕಾಯಿತು. ಪ್ರತಿಪಕ್ಷಗಳಿಂದ ಟೀಕೆಗೂ ಗುರಿಯಾಗಿ ಅಂತಿಮವಾಗಿ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿ, ತನಿಖೆಯ ವೇಗವನ್ನು ತಗ್ಗಿಸಿದ್ದು ಇನ್ನಷ್ಟು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ನೇಮಕಾತಿ ವಿಭಾಗದ ಎಡಿಜಿಪಿ ಅಮೃತ್ ಪಾಲ್, ಡಿವೈಎಸ್ಪಿ ಶಾಂತಕುಮಾರ್, ಮಲ್ಲಿಕಾರ್ಜುನ ಸಾಲಿ, ಸಿಪಿಐ ಆನಂದ್ ಮೇತ್ರೆ ಸೇರಿದಂತೆ 70ಕ್ಕೂ ಹೆಚ್ಚು ಜನರ ಬಂಧನವಾಗಿದೆ. ಸರ್ಕಾರಕ್ಕೆ ಈ ಪ್ರಕರಣ ಕಪ್ಪುಚುಕ್ಕೆಯಾಗಿದೆ.

ಮತದಾರರ ಪಟ್ಟಿ ಹಗರಣ:

ಉದ್ದೇಶಪೂರ್ವಕವಾಗಿಯೇ ನಿರ್ದಿಷ್ಟ ಸಮುದಾಯವೊಂದನ್ನು ಗುರಿಯಾಗಿಟ್ಟುಕೊಂಡು ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ ಎಂಬ ಆರೋಪ ಬಿಜೆಪಿ ಸರ್ಕಾರದ ವಿರುದ್ಧ ಕೇಳಿಬಂದಿತ್ತು. ಕರ್ನಾಟಕ ರಾಜ್ಯಾದ್ಯಂತ 27 ಲಕ್ಷಕ್ಕೂ ಅಧಿಕ ಮತದಾರರನ್ನು ಪಟ್ಟಿಯಿಂದ ಸದ್ದಿಲ್ಲದೇ ಕೈಬಿಡಲಾಗಿತ್ತು. ಬೆಂಗಳೂರು ನಗರವೊಂದರಲ್ಲಿಯೇ 6.69 ಲಕ್ಷ ಮತದಾರರ ಹೆಸರನ್ನು ಡಿಲೀಟ್ ಮಾಡಲಾಗಿದೆ. ಬಿಜೆಪಿ ಮತದಾರರಲ್ಲದವರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

ಆ ಮೂಲಕ ಯಾರು ಸರ್ಕಾರದ ಪರವಾಗಿದ್ದಾರೆ? ಯಾರು ವಿರುದ್ಧವಾಗಿದ್ದಾರೆ ಎಂಬ ಅಮೂಲ್ಯ ಮಾಹಿತಿಯನ್ನು ಕದ್ದಿದೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದು, ನೇರವಾಗಿ ಬಿಜೆಪಿಯೇ ಇದರಲ್ಲಿ ಭಾಗಿಯಾಗಿದೆ ಎಂದು ಆರೋಪಿಸಿವೆ. ಚುನಾವಣೆ ಸನಿಹದಲ್ಲಿರುವಾಗ ಆಡಳಿತಾರೂಢ ಬಿಜೆಪಿ ವಿರುದ್ಧ ಕೇಳಿಬಂದ ಮತದಾರರ ಪಟ್ಟಿ ಹಗರಣದ ಆರೋಪ ಬಿಜೆಪಿಗೆ ಹೊಸ ಸಂಕಷ್ಟ ತಂದಿದೆ. ಆಪರೇಷನ್ ಕಮಲದ ಆರೋಪದಂತೆ ಆಪರೇಷನ್ ವೋಟರ್ ಐಸಿ ಆರೋಪ ಬಿಜೆಪಿ ವಿರುದ್ಧ ಸುತ್ತಿಕೊಂಡಿದೆ.

ಬಿರುಗಾಳಿ ಎಬ್ಬಿಸಿದ ಬಿಟ್ ಕಾಯಿನ್ ಹಗರಣ:

ಕರ್ನಾಟಕ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದ್ದ ಬಿಟ್ ಕಾಯಿನ್ ಹಗರಣ ದಿನಕ್ಕೊಂದು ತಿರುವು ಪಡೆದುಕೊಂಡಿತ್ತು. ಹಗರಣದಲ್ಲಿ ಕೆಲವು ಪ್ರಭಾವಿ ರಾಜಕಾರಣಿಗಳು ಇದ್ದಾರೆ ಎಂದು ಹೇಳಲಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ನಡುವೆ ವಾಕ್ಸಮರಕ್ಕೆ ಈ ಹಗರಣ ಕಾರಣವಾಗಿತ್ತು.

ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಶ್ರೀಕೃಷ್ಣ ರಮೇಶ್ ಆಲಿಯಾಸ್ ಶ್ರೀಕಿ. 25ರ ಹರೆಯದ ಶ್ರೀಕಿಯನ್ನು ಜಾರಿ ನಿರ್ದೇಶನಾಲಯ (ED), ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್ಮೆಂಟ್ (CID)ನ ಸೈಬರ್ ಅಪರಾಧ ವಿಭಾಗ ಮತ್ತು ಕೇಂದ್ರ ಅಪರಾಧ ವಿಭಾಗ (CCB) ಹೀಗೆ ಮೂರು ವಿಭಿನ್ನ ತನಿಖಾ ತಂಡಗಳು ವಿಚಾರಣೆಗೆ ಒಳಪಡಿಸಿದ್ದವು. ಶ್ರೀಕಿ ಸೈಬರ್ ವಂಚನೆ, ಡಾರ್ಕ್ ನೆಟ್ ಮೂಲಕ ಮಾದಕವಸ್ತು ಮಾರಾಟ, ಕ್ರಿಪ್ಟೋಕರೆನ್ಸಿ ಕಳ್ಳತನ ಮತ್ತು ಕರ್ನಾಟಕ ಸರ್ಕಾರದ ಇ–ಆಡಳಿತ ಪೋರ್ಟಲ್ನಿಂದ ಹಣವನ್ನು ಕದಿಯುವ ಹಲವಾರು ಆರೋಪಗಳನ್ನು ಎದುರಿಸುತ್ತಿದ್ದಾನೆ.

ಆಪಾದಿತ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರದ ಪೋರ್ಟಲ್ ಅನ್ನು ಹ್ಯಾಕ್ ಮಾಡಿದ್ದಾನೆ ಮತ್ತು 10.5 ಕೋಟಿ ರೂಪಾಯಿ ಮತ್ತು 1.05 ಕೋಟಿ ರೂಪಾಯಿಗಳ ಹಣವನ್ನು ಬ್ಯಾಂಕ್ NGO, M/s. ಉದಯ್ ಗ್ರಾಮ ವಿಕಾಸ ಸಂಸ್ಥೆ, ನಾಗ್ಪುರ ಮತ್ತು ಮಾಲೀಕತ್ವ, M/s. ನಿಮ್ಮಿ ಎಂಟರ್ಪ್ರೈಸಸ್, ಬುಲಂದ್ಶಹರ್, ಉತ್ತರ ಪ್ರದೇಶ ಹೀಗೆ ವಿವರ ಇರುವ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಇಡಿ (ED) ತನ್ನ ಹೇಳಿಕೆಯಲ್ಲಿ ತಿಳಿಸಿತ್ತು.

> **ಬಿಜೆಪಿ ಮನೆ ಎಂಬುದು ಹಗರಣಗಳ ಮನೆ ಎಂಬಂತಾಗಿದೆ. ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಪ್ರಕರಣಗಳನ್ನು ಮುಚ್ಚಿ ಹಾಕುವ ವ್ಯವಸ್ಥಿತ ಪ್ರಯತ್ನ ನಡೆಸುತ್ತಿದೆ.**

ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆಯೇ?

ಬಿಟ್ಕಾಯಿನ್ ಹಗರಣಗಳಲ್ಲಿ ಸುಮಾರು 1,000 ಕೋಟಿ ರೂಪಾಯಿಗಳ ವಹಿವಾಟು ನಡೆದಿರಬಹುದು ಎಂದು ವಿಪಕ್ಷ ನಾಯಕರು ಆರೋಪಿಸಿದ್ದಾರೆ. ಈ ಸಂಬಂಧಿತವಾಗಿ ಹಲವಾರು ರಾಜಕೀಯ ನಾಯಕರುಗಳತ್ತ ಬೆರಳು ತೋರಿಸಲಾಗುತ್ತಿದ್ದು ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪ ಈಗಲೂ ಕೇಳಿ ಬರುತ್ತಿದೆ.

8.5% ಲಂಚ ಆರೋಪ:

ತೋಟಗಾರಿಕೆ ಸಚಿವ ಮುನಿರತ್ನ ವಿರುದ್ಧ 8.5% ಲಂಚ ಆರೋಪ ಜುಲೈ ಎರಡನೇ ವಾರದಲ್ಲಿ ಕೇಳಿಬಂದಿತ್ತು. ಈ ಕುರಿತು ಚಾಮರಾಜನಗರ ಹನಿ ನೀರಾವರಿ ವಿತರಕರ ಸಂಘದಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಾಗಿತ್ತು. ರೈತರ ಜಮೀನಿನಲ್ಲಿ ಹನಿ ನೀರಾವರಿ ಅಳವಡಿಸಿಕೊಳ್ಳಲು ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಸಬ್ಸಿಡಿ ಹಣವನ್ನು ನೀಡಲಾಗುತ್ತಿದೆ. ಆದರೆ ಇತ್ತೀಚೆಗೆ ಕರ್ನಾಟಕದ ತೋಟಗಾರಿಕಾ ಸಚಿವರಾಗಿ ಅಧಿಕಾರ ವಹಿಸಿಕೊಂಡ ಮುನಿರತ್ನ ಅವರು ಎಲ್ಲ ಮಾರ್ಗದಿಂದಲೂ ಅಕ್ರಮವಾಗಿ ಹಣ ಮಾಡಲು ಶುರು ಮಾಡಿದ್ದಾರೆ. ಈ ಸಂಬಂಧ ರೈತರಿಗೆ ನೀಡಬೇಕಾದ ಸಬ್ಸಿಡಿ ಹಣದಲ್ಲಿ ಪರ್ಸೆಂಟೇಜ್ ಪಡೆಯುವ ಉದ್ದೇಶದಿಂದ ಹನಿ ನೀರಾವರಿ ನಿಯಮಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ, ಅದನ್ನು ಸರಿಪಡಿಸಲು ಇಂತಿಷ್ಟು ಪರ್ಸೆಂಟೇಜ್ ಕೊಡಬೇಕು ಎಂದು ಕಂಪನಿಗಳಿಗೆ ತಾಕೀತು ಮಾಡಿದ್ದಾರೆ. ಕಂಪನಿಯ ಅಪ್ರುವಲ್ ಮಾಡಲು ಪ್ರತಿ ಕಂಪನಿಯಿಂದ 15 ಲಕ್ಷ ರೂ. ಬೇಡಿಕೆ ಇಟ್ಟಿರುವುದು ತಿಳಿದುಬಂದಿದೆ. ಈ ಸಂಬಂಧ ಹನಿ ನೀರಾವರಿ ಕಂಪನಿಗಳು ಡೀಲರ್ಗಳ ಬಿಲ್ನಲ್ಲಿ ಎಂಟೂವರೆ ಪರ್ಸೆಂಟ್ ಹಣವನ್ನು ಮಿನಿಸ್ಟರ್ಗೆ ನೀಡುವ ಪರ್ಸೆಂಟೇಜ್ ಎಂದು ನಮೂದಿಸಿ ಸ್ಟೇಟ್ಮೆಂಟ್ಗಳನ್ನು ಡೀಲರ್ಗಳಿಗೆ ಕೊಟ್ಟಿರುವುದು ಎಲ್ಲೆಡೆ ಹರಿದಾಡಿತ್ತು.

ರೂ. 40 ಲಕ್ಷ ಲಂಚ:

ಟೆಂಡರ್ ಕೊಡಿಸಲು ಲಂಚಕ್ಕೆ ಬೇಡಿಕೆ ಇಟ್ಟು, 40 ಲಕ್ಷ ಲಂಚದ ಹಣವನ್ನು ಪಡೆಯುತ್ತಿದ್ದಾಗ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ ನಿಯಮಿತಕ್ಕೆ(ಕೆ.ಎಸ್.ಡಿ.ಎಲ್.) ರಾಸಾಯನಿಕ ಪೂರೈಸುವ ಟೆಂಡರ್ ಗೆ ಗುತ್ತಿಗೆದಾರರೊಬ್ಬರು ಅರ್ಜಿ ಸಲ್ಲಿಸಿದ್ದರು. ಚನ್ನಗಿರಿ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪನವರ ಪುತ್ರ ಹಾಗೂ ಬಿಡಬ್ಲ್ಯೂಎಸ್ಎಸ್ ಬಿ ಮುಖ್ಯ ಲೆಕ್ಕಾಧಿಕಾರಿಯಾಗಿರುವ ಪ್ರಶಾಂತ್ ಈ ಗುತ್ತಿಗೆಯನ್ನು ಕೊಡಿಸಲು 80 ಲಕ್ಷ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಲೋಕಾಯುಕ್ತ ಪೊಲೀಸರಿಗೆ ಗುತ್ತಿಗೆದಾರರು ದೂರು ನೀಡಿದ್ದರು. ಮುಂಗಡವಾಗಿ 40 ಲಕ್ಷ ಲಂಚದ ಹಣವನ್ನು ಬೆಂಗಳೂರಿನ ಕ್ರೆಸೆಂಟ್ ರಸ್ತೆಯಲ್ಲಿರುವ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಕಚೇರಿಯಲ್ಲಿ ಪುತ್ರ ಪ್ರಶಾಂತ್ ಗೆ ಕೊಡಲು ತೆರಳಿದ್ದರು. ಈ ವೇಳೆ ಲೋಕಾಯುಕ್ತ ಪೊಲೀಸರು ದಿಢೀರ್ ದಾಳಿ ನಡೆಸಿ, 40 ಲಕ್ಷ ಹಣದೊಂದಿಗೆ ಶಾಸಕರ ಪುತ್ರನನ್ನು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದರು. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ರೂ.81 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹಣವನ್ನು ಮಗನಿಗೆ ತಲುಪಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದ್ದರು ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಲಂಚಕ್ಕೆ ಬೇಡಿಕೆಯಿಟ್ಟ ಆರೋಪದಲ್ಲಿ ಸಿಲುಕಿ ಲೋಕಾಯುಕ್ತ ಪೊಲೀಸರಿಂದ ಬಂಧನದ ಭೀತಿ ಎದುರಿಸುತ್ತಿದ್ದ ಶಾಸಕ ಕೆ.ಮಾಡಾಳು ವಿರೂಪಾಕ್ಷಪ್ಪಗೆ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿತು. ಈ ಪ್ರಕರಣ ನ್ಯಾಯಾಂಗದ ಮೇಲೆ ಜನ ನಂಬಿಕೆ ಕಳೆದುಕೊಳ್ಳುವಂತೆ ಮಾಡಿತ್ತು.

ಇದರ ಬೆನ್ನಲ್ಲೇ ಚನ್ನಗಿರಿ ಕ್ಷೇತ್ರದಲ್ಲಿ ಬೆಂಬಲಿಗರು ಮಾಡಾಳು ವಿರೂಪಾಕ್ಷಪ್ಪ ಅವರನ್ನು ವಾಹನದಲ್ಲಿ ಮೆರವಣಿಗೆ ಮಾಡಿ, ವಿಜಯೋತ್ಸವ ಆಚರಿಸಿದ್ದಾರೆ. ಇದು ವಿವಾದಕ್ಕೆ ಕಾರಣವಾಗಿದೆ.

ಒಟ್ಟಾರೆ ಬಿಜೆಪಿ ಮನೆ ಎಂಬುದು ಹಗರಣಗಳ ಮನೆ ಎಂಬಂತಾಗಿದೆ. ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಪ್ರಕರಣಗಳನ್ನು ಮುಚ್ಚಿಹಾಕುವ ಪ್ರಯತ್ನ ನಡೆಸುತ್ತಿದೆ. ಈ ಎಲ್ಲಾ ಹಗರಣಗಳನ್ನು ಜನ ಮರೆತಿಲ್ಲ. ಬಿಜೆಪಿಗೆ ಈ ಬಾರಿಯ ಚುನಾವಣೆಯಲ್ಲಿ ಹಗರಣಗಳು ಮಗ್ಗುಲಮುಳ್ಳಾಗಿ ಕಾಡುತ್ತಿವೆ. ಜನ 40% ಕಮಿಷನ್ ಸರ್ಕಾರವನ್ನು ಕಿತ್ತೆಸೆಯಬೇಕು ಎಂದೆಲ್ಲ ಮಾತನಾಡಿಕೊಳ್ಳುತ್ತಿದ್ದಾರೆ.



ಅಸಮಾನತೆಯು ಕೊಲ್ಲುತ್ತದೆ!

ಪ್ರೊ. ರಾಜೇಂದ್ರ ಚೆನ್ನಿ

ಜನಪ್ರಿಯ ಕಲ್ಪನೆ ಹಾಗೂ ಕಥನಗಳ ಪ್ರಕಾರ 21ನೇ ಶತಮಾನದಲ್ಲಿ ಮನುಷ್ಯರನ್ನು ಕೊಲ್ಲುವ ಅಸಮಾನತೆಯು ಇರುವುದು ಅಸಾಧ್ಯ. ಅಭಿವೃದ್ಧಿಯಲ್ಲಿ ಏರುಪೇರುಗಳು ಸಹಜವಾಗಿರುವುದರಿಂದ ಹಿಂದುಳಿದ ರಾಷ್ಟ್ರಗಳಲ್ಲಿ ಅರ್ಥವ್ಯವಸ್ಥೆಯು ಅಸಮರ್ಪಕವಾಗಿರಬಹುದು, ಆದರೆ ಮನುಷ್ಯರನ್ನು ಕೊಲ್ಲುವ ಅಸಮಾನತೆ ಇದೆಯೆನ್ನುವುದು ಉತ್ಪ್ರೇಕ್ಷೆಯಾಗಿದೆ. ಬಂಡವಾಳಶಾಹಿಯು ತನ್ನ ಉದಯದ ಕಾಲದಲ್ಲಿ ಹಾಗೆ ಮಾಡಿರಬಹುದು. ಆದರೆ ಕ್ರಮೇಣವಾಗಿ ತನ್ನ ಬಿಕ್ಕಟ್ಟುಗಳನ್ನು ನಿವಾರಿಸಿಕೊಂಡು ಇಂದು ಪರ್ಯಾಯವಿಲ್ಲದ ಏಕಮಾತ್ರ ವ್ಯವಸ್ಥೆಯಾಗಿದೆ ಎಂದು ಎಲ್ಲಾ ವಲಯಗಳಲ್ಲಿ ಪ್ರಚಾರವು ಭರದಿಂದ ನಡೆಯುತ್ತಲಿದೆ. ಭಾರತೀಯ ಸಮಾಜದ ಹಾಗೂ ಜಗತ್ತಿನ ಭೀಕರ ಅಸಮಾನತೆಗಳನ್ನು ಕಂಡವರಿಗೆ ಇಂಥ ವಾದಗಳು ಯಾವುದೋ ಭ್ರಮಾಲೋಕದ ಸಂಗತಿಗಳಾಗಿ ಕಾಣುತ್ತವೆ.

ಅಸಮಾನತೆಯು ಕೊಲ್ಲುತ್ತದೆ (Inequality Kills) ಇದು ಆಕ್ಸ್ ಫಾಮ್ ಪ್ರಕಟಿಸಿದ ಜಾಗತಿಕ ಅಸಮಾನತೆಯ ಬಗೆಗಿನ ಕೃತಿಗೆ ಕೊಟ್ಟಿರುವ ಶೀರ್ಷಿಕೆಯಾಗಿದೆ. 21ನೇ ಶತಮಾನದಲ್ಲಿ ಬಂಡವಾಳಶಾಹಿಯು ಸೃಷ್ಟಿಸಿರುವ ಭೀಕರ ಅಸಮಾನತೆಯ ಬಗ್ಗೆ ಇದಕ್ಕಿಂತ ಸಮರ್ಪಕವಾದ ವ್ಯಾಖ್ಯಾನ ಇರಲಾರದು. ಜನಪ್ರಿಯ ಕಲ್ಪನೆ ಹಾಗೂ ಕಥನಗಳ ಪ್ರಕಾರ, 21ನೇ ಶತಮಾನದಲ್ಲಿ ಮನುಷ್ಯರನ್ನು ಕೊಲ್ಲುವ ಅಸಮಾನತೆಯು ಇರುವುದು ಅಸಾಧ್ಯ. ಅಭಿವೃದ್ಧಿಯಲ್ಲಿ ಏರುಪೇರುಗಳು ಸಹಜವಾಗಿರುವುದರಿಂದ ಹಿಂದುಳಿದ ರಾಷ್ಟ್ರಗಳಲ್ಲಿ ಅರ್ಥವ್ಯವಸ್ಥೆಯು ಅಸಮರ್ಪಕವಾಗಿರಬಹುದು, ಆದರೆ ಮನುಷ್ಯರನ್ನು ಕೊಲ್ಲುವ ಅಸಮಾನತೆ ಇದೆ ಎನ್ನುವುದು ಉತ್ಪ್ರೇಕ್ಷೆಯಾಗಿದೆ. ಬಂಡವಾಳಶಾಹಿಯು ತನ್ನ ಉದಯದ ಕಾಲದಲ್ಲಿ ಹಾಗೆ ಮಾಡಿರಬಹುದು. ಆದರೆ ಕ್ರಮೇಣವಾಗಿ ತನ್ನ ಬಿಕ್ಕಟ್ಟುಗಳನ್ನು ನಿವಾರಿಸಿಕೊಂಡು ಇಂದು ಪರ್ಯಾಯವಿಲ್ಲದ ಏಕಮಾತ್ರ ವ್ಯವಸ್ಥೆಯಾಗಿದೆಯೆಂದು ಎಲ್ಲಾ ವಲಯಗಳಲ್ಲಿ ಪ್ರಚಾರವು ಭರದಿಂದ ನಡೆಯುತ್ತಲಿದೆ. ಜಾಗತಿಕ ಮಟ್ಟದಲ್ಲಿ ಜನಪ್ರಿಯತೆ ಪಡೆದಿರುವ ಫೂಕೋಯಾಮಾ ಅವರ 'The End of History' ಕೃತಿಯು ಇಂಥ ವಾದವನ್ನು ಮಂಡಿಸುತ್ತದೆ. ರಾಜಕೀಯವಾಗಿ ಉದಾರವಾದಿ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಆರ್ಥಿಕವಾಗಿ ಇಂದಿನ ಸ್ವರೂಪದ ಬಂಡವಾಳಶಾಹಿ ವ್ಯವಸ್ಥೆ ಇವುಗಳು ಮಾನವ ನಾಗರೀಕತೆ ಹಾಗೂ ಸಮಾಜಗಳು ತಲುಪಿರುವ ಅಂತಿಮ ಸ್ಥಿತಿಗಳು. ಅಂದರೆ ಚರಿತ್ರೆಯಲ್ಲಿ ನಡೆದ ಎಲ್ಲಾ ಪರಿವರ್ತನೆಗಳು ಈಗ ಈ ಅಂತಿಮ ಸ್ಥಿತಿಯಲ್ಲಿ ಮುಕ್ತಾಯ ಕಂಡಿವೆ. ಹೀಗಾಗಿ ಇನ್ನು ಚರಿತ್ರೆಯು ಹುಡುಕಬೇಕಾದ ಇನ್ನೊಂದು ಪರ್ಯಾಯ ವ್ಯವಸ್ಥೆ ಬೇಕಿಲ್ಲ.

ಇಂಥ ವಾದವನ್ನು ಮಂಡಿಸುವ ಅನೇಕ ಕೃತಿಗಳು ಬಂದಿವೆ. ಈ ಹಿಂದೆ ಜಾಗತೀಕರಣವನ್ನು ಸಮರ್ಥಿಸಿ ಬರೆದ 'The World is Flat' ಎನ್ನುವ ಕೃತಿಯು ಇದೇ ಕೆಲಸವನ್ನು ಮಾಡಿತ್ತು. ಅಂದರೆ ಚರಿತ್ರೆಯಲ್ಲಿ ಕಂಡಂಥ ಅಸಮಾನತೆಗಳು ಜಾಗತೀಕರಣ, ಮುಕ್ತ ಮಾರುಕಟ್ಟೆಗಳಿಂದಾಗಿ ಈಗ ಇಲ್ಲವಾಗಿ 'ನೆಲ ಸಪಾಟಾಗಿದೆ'. ಅಥವಾ ಇಂಥ ಬರಹಗಾರರು ಹೇಳುವಂತೆ ಈ ಮುಕ್ತ ಆರ್ಥಿಕತೆಯಲ್ಲಿ ಎಲ್ಲರಿಗೂ Level playing field ಲಭ್ಯವಿದೆ. ಯಾರು ಬೇಕಾದರೂ ಪಂದ್ಯದಲ್ಲಿ ಭಾಗವಹಿಸಬಹುದು. ಸ್ವಲ್ಪ ವಿಷಯಾಂತರ ಮಾಡಿ ನೋಡಿದರೆ ಮೀಸಲಾತಿ ಬೇಡ ಎನ್ನುವವರದೂ ಇದೇ ಮಾದರಿಯ ವಾದವಾಗಿದೆ. ಒಂದು ಕಾಲದಲ್ಲಿ ಜಾತಿ ಅಸಮಾನತೆ, ಅಸ್ಪೃಶ್ಯತೆ ಇದ್ದಿದ್ದರಿಂದ ಅಸಮಾನತೆ ಇತ್ತು. ಅದನ್ನು ಸರಿಪಡಿಸಲು ಒಂದು ಕಾಲದಲ್ಲಿ ಮೀಸಲಾತಿ ಬೇಕಿತ್ತು. ಆದರೆ ಇಂದಿನ ಆಧುನಿಕ, ಜಾಗತೀಕರಣದ ಯುಗದಲ್ಲಿ ಈ ಹಳೆಯ ಯಾವುದೇ ಪಳೆಯುಳಿಕೆಗಳಿಲ್ಲ. ಈಗ ಮೆರಿಟ್ ಇರುವ ಯಾರಾದರೂ ಸ್ಪರ್ಧೆಗೆ ಇಳಿಯಬಹುದು. ನೆಲ ಸಮಸಟ್ಟಾಗಿದೆ. ಆಟದ ಬಯಲು ಏರು, ದಿನ್ನೆ, ತಗ್ಗುಗಳಿಲ್ಲದೆ ಸಮತಟ್ಟಾಗಿದೆ. ಆದ್ದರಿಂದ ಮೀಸಲಾತಿಯು ಮೆರಿಟ್ ವಿರುದ್ಧ ಒಂದು ಷಡ್ಯಂತ್ರವಾಗಿದೆ.

ಭಾರತೀಯ ಸಮಾಜದ ಹಾಗೂ ಜಗತ್ತಿನ ಭೀಕರ ಅಸಮಾನತೆಗಳನ್ನು ಕಂಡವರಿಗೆ ಇಂಥ ವಾದಗಳು ಯಾವುದೋ ಭ್ರಮಾಲೋಕದ ಸಂಗತಿಗಳಾಗಿ ಕಾಣುತ್ತವೆ. ಜಾತಿ ವ್ಯವಸ್ಥೆಯು ಅತ್ಯಂತ ಪ್ರಬಲವಾಗುತ್ತಿದೆ. ವಿಶೇಷವಾಗಿ ಶಿಕ್ಷಿತ ಮುಂಚೂಣಿ ವರ್ಗಗಳಲ್ಲಿ, ಅಮೇರಿಕದಂಥ ದೇಶದಲ್ಲಿರುವ ಅನಿವಾಸಿ ಭಾರತೀಯರಲ್ಲಿ, ಜಾತಿಕೇಂದ್ರಿತ ತಾರತಮ್ಯ ಇರಕೂಡದು ಎನ್ನುವ ಕಾನೂನು, ಕ್ರಮಗಳನ್ನು ಅಮೇರಿಕದ ಕೆಲವು ರಾಜ್ಯಗಳಲ್ಲಿ ಅನುಷ್ಠಾನಕ್ಕೆ ತಂದಿರುವುದು ಈ ಅನಿವಾಸಿ ಭಾರತೀಯರಿಗೆ ಅಪಾಯಕಾರಿಯಾಗಿ ಕಂಡಿದೆ. ಅನೇಕ ದಶಕಗಳಿಂದ ಅಲ್ಲಿ ವಾಸಿಸುತ್ತಿರುವ, ಅಮೇರಿಕದ ನಾಗರೀಕತ್ವ ಪಡೆದುಕೊಂಡಿರುವ ಮೇಲ್ಜಾತಿ ಭಾರತೀಯರು ಇವನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ಬೋಧಿಸಲಾಗುತ್ತಿದ್ದ ಪಠ್ಯಪುಸ್ತಕಗಳಿಂದ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಇವುಗಳ ಪ್ರಸ್ತಾಪವನ್ನು ಕೈಬಿಡುವಂತೆ ಒತ್ತಡ ತಂದು ಯಶಸ್ವಿಯಾಗಿದ್ದಾರೆ. ಇತ್ತೀಚೆಗೆ ಅಮೇರಿಕದ ಒಂದು ಸಂಸ್ಥೆಯಲ್ಲಿ ಜಾತಿಕೇಂದ್ರಿತ ತಾರತಮ್ಯವಿದೆ ಎಂದು ಸಾಬೀತಾದಾಗ ಈ ವರ್ಗವು ಒಪ್ಪಲಿಲ್ಲ. ಇಂಥ ವರ್ಗಗಳು ಪ್ರತಿಪಾದಿಸುವ, ನಂಬುವ ವಾದವೆಂದರೆ ಇಂದಿನ ಯುಗ ತಾರತಮ್ಯಗಳಿಲ್ಲದ, ಜಾತಿ, ವರ್ಗಗಳಿಲ್ಲದ ಸಮಾನ ಅವಕಾಶಗಳಿರುವ ಅಧುನಿಕಯುಗ. ಇಲ್ಲಿ ಅಸಮಾನತೆಗಳಿಲ್ಲ.


ವಸ್ತುಸ್ಥಿತಿಯೆಂದರೆ ಭಾರತದಲ್ಲಿ ನವ–ಅಸ್ಪೃಶ್ಯತೆ ದಿನದಿನಕ್ಕೂ ಕ್ರೂರವಾಗುತ್ತಿದೆ, ಹಿಂಸಾಪರವಾಗುತ್ತಿದೆ. ಪ್ರತಿ ದಿನವೂ ದಲಿತ ಹೆಣ್ಣು ಮಕ್ಕಳು, ಯುವತಿಯರ ಮೇಲೆ ಅತ್ಯಾಚಾರ, ದೈಹಿಕ ಹಿಂಸೆ ಹಾಗೂ lynching ಗಳು ಹೆಚ್ಚಾಗುತ್ತಿವೆ. ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ತಾರತಮ್ಯದಿಂದಾಗಿ ಪ್ರತಿಭಾವಂತ ದಲಿತ ಯುವಕ, ಯುವತಿಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.


ವಸ್ತುಸ್ಥಿತಿಯೆಂದರೆ ಭಾರತದಲ್ಲಿ ನವ–ಅಸ್ಪೃಶ್ಯತೆ ದಿನದಿನಕ್ಕೂ ಕ್ರೂರವಾಗುತ್ತಿದೆ, ಹಿಂಸಾಪರವಾಗುತ್ತಿದೆ. ಪ್ರತಿ ದಿನವೂ ದಲಿತ ಹೆಣ್ಣು ಮಕ್ಕಳು, ಯುವತಿಯರ ಮೇಲೆ ಅತ್ಯಾಚಾರ, ದೈಹಿಕ ಹಿಂಸೆ ಹಾಗೂ lynching ಗಳು ಹೆಚ್ಚಾಗುತ್ತಿವೆ. ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ತಾರತಮ್ಯದಿಂದಾಗಿ ಪ್ರತಿಭಾವಂತ ದಲಿತ ಯುವಕ, ಯುವತಿಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಬಂದಿರುವ Oxfam ವರದಿಯ ಪ್ರಕಾರ ಭಾರತದ ಶೇಕಡಾ 1% ರಷ್ಟು ಶ್ರೀಮಂತರು ಇಡೀ ದೇಶದ ಆಸ್ತಿಯಲ್ಲಿ 37% ಒಡೆತನ ಹೊಂದಿದ್ದಾರೆ. ಕೆಳಗಿನ ಶೇಕಡಾ 50% ರಷ್ಟು ಜನರು ಕೇವಲ 3% ದೇಶದ ಆಸ್ತಿಯ ಒಡೆತನ ಹೊಂದಿದ್ದಾರೆ. ನಿರಂತರ ಹಸಿವು, ಬಡತನಗಳು ಅಪೌಷ್ಟಿಕತೆಯಿಂದಾಗಿ ಭಾರತದ ಅನೇಕ ಮಿಲಿಯನ್ ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ. ಶಿಶುಮರಣ ಗಾಬರಿ ಹುಟ್ಟಿಸುತ್ತದೆ. ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳನ್ನು ಬಿಟ್ಟರೆ ಭಾರತವು ಅತ್ಯಂತ ದರಿದ್ರ ಸ್ಥಾನದಲ್ಲಿದೆ. ಇದಕ್ಕೆ ತದ್ವಿರುದ್ಧವಾಗಿ ನಮ್ಮ ಮಾಧ್ಯಮಗಳು ಜಿಡಿಪಿ ಅಂಕಿ ಸಂಖ್ಯೆಗಳನ್ನು ಸಂಭ್ರಮಿಸುತ್ತಿವೆ.

ಐಜಾಜ್ ಅಹಮದ್ ಅವರು ಹೇಳಿದಂತೆ ಬಂಡವಾಳದ ಆಂತರಿಕ ತರ್ಕವೆಂದರೆ ವಿಸ್ತರಣೆ ಹಾಗೂ ಅಸಮಾನತೆಯ ಸೃಷ್ಟಿ. ಇಂದು ಅಗೋಚರವಾಗಿ ಇರುವ ಅಂತರ್ ರಾಷ್ಟ್ರೀಯ ಬಂಡವಾಳಶಾಹಿಯು ಭೀಕರವಾದ ಅಸಮಾನತೆಯನ್ನು ಹುಟ್ಟುಹಾಕಿದೆ. ಇಂಥ ವ್ಯವಸ್ಥೆಯನ್ನು ಉಳಿಸಿಕೊಂಡಿರಲು ಪ್ರಜಾಪ್ರಭುತ್ವವನ್ನು ನಾಶಮಾಡಿ ಬಲಪಂಥೀಯ ಸರ್ವಾಧಿಕಾರಿ ರಾಜಕೀಯ ವ್ಯವಸ್ಥೆಗಳು ಜಗತ್ತಿನಲ್ಲಿ ಪ್ರಬಲವಾಗುತ್ತಿವೆ. ಈ ಪ್ರಭುತ್ವಗಳ ಗುರಿಯೆಂದರೆ ವಿಮರ್ಶೆ, ಪ್ರತಿರೋಧ, ವಿರೋಧ ಇವುಗಳು ಇಲ್ಲದೆ ಇರುವ ಸ್ಥಿತಿಯನ್ನು ನಿರ್ಮಿಸುವುದು. ಅಂದರೆ ಬಂಡವಾಳಕ್ಕಾಗಿ "ಸಮತಟ್ಟಾದ ನೆಲವನ್ನು" ತಯ್ಯಾರು ಮಾಡುವುದು. ವಿಶೇಷವೆಂದರೆ ಈ ಸಮತಟ್ಟಾದ ನೆಲದಲ್ಲಿ ಏಕಮಾತ್ರ ಸ್ಪರ್ಧಿ, ಅದು ಬಂಡವಾಳಶಾಹಿ.

* ಈ ಕೃತಿಯನ್ನು ಈ ಕೆಳಗಿನ ವೆಬ್ ಕೊಂಡಿಯಿಂದ ಡೌನ್ ಲೋಡ್ ಮಾಡಬಹುದು.
https://oxfamilibrary.openrepository.com/bitstream/handle/10546/621341/bp-inequality-kills-170122-en.pdf







ಚುನಾವಣಾ ಘೋಷಣೆಯ ಮುನ್ಸೂಚನೆಗಳು.....

ಪುಟ 3 ರಿಂದ

ಯಡಿಯೂರಪ್ಪನವರು ಒಬ್ಬ ಸದಸ್ಯರು. ಅಂದರೆ ಬಿಜೆಪಿಯ ಹೈಕಮಾಂಡ್ ಮತ್ತು ಸಂಘ ಪರಿವಾರದ ತಿರ್ಮಾನ ಬಿ ಎಸ್ ಯಡಿಯೂರಪ್ಪನವರಿಗೆ ಖಂಡಿತಕ್ಕೂ ಒಂದು ಶಾಕ್! ಆದರೆ ಅವರ ಮಗ ಬಿ.ವೈ.ವಿಜಯೇಂದ್ರರವರನ್ನು ಸದಸ್ಯರನ್ನಾಗಿ ಮಾಡಿರುವುದು ಪ್ರಾಶಸ್ತ್ಯ ನೀಡಿದಂತೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಅದೇನಿದ್ದರೂ ಖಂಡಿತಕ್ಕೂ ಬಿಜೆಪಿ ಹೈಕಮಾಂಡ್ ಯಡಿಯೂರಪ್ಪನವರಿಗೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲು ಸಿದ್ಧವಿಲ್ಲ ಎನ್ನುವುದು ಸ್ಪಷ್ಟ.

ಇದು ಅವರಿಗೆ ಮುಜುಗರವನ್ನು ತರಬಹುದು. ಇಂಥ ಇರುಸು ಮುರಿಸಿನ ಸ್ಥಿತಿಯಲ್ಲಿ ಯಡಿಯೂರಪ್ಪನವರು ಚುನಾವಣಾ ಸಂದರ್ಭದಲ್ಲಿ ಬೇರೆ ಪಕ್ಷಗಳೊಂದಿಗೆ ನಂಟು ಬೆಳೆಸಿಕೊಳ್ಳುವ ಒಂದು ಪ್ರಮುಖ ರಾಜಕೀಯ ತಂತ್ರಾತ್ಮಕ ಆಟ ಆಡಬಹುದು ಎನ್ನುವ ಅನುಮಾನವಂತೂ ಹೈಕಮಾಂಡಿಗೆ ಇದ್ದೇ ಇದೆ. ಯಡಿಯೂರಪ್ಪನವರು ಮನಃಪೂರ್ವಕವಾಗಿ ಚುನಾವಣೆಯ ಪ್ರಚಾರ ಮತ್ತು ಸಿದ್ಧತೆಯ ಕಾರ್ಯಗಳಲ್ಲಿ ತೊಡಗದೆ ಹೋಗಬಹುದು ಎನ್ನುವ ಅನುಮಾನವೂ ಇದೆ. ಹೀಗಾಗಿ ಅವರನ್ನು ಒಲಿಸಿಕೊಳ್ಳುತ್ತಿರುವಂತೆ, ಹೊಗಳುತ್ತಲೂ ಇರುವಂತೆ ತೋರುತ್ತಾ ಪ್ರಚಾರ ಕಾರ್ಯದಲ್ಲಿ ತೊಡಗಿಸಿರುವುದು ಕಾಣುತ್ತದೆ. ಆದರೆ ಅದೇ ಹೊತ್ತಿನಲ್ಲಿ ಯಡಿಯೂರಪ್ಪ ಮತ್ತು ಅವರ ಬೆಂಬಲಿಗರ ಮೇಲೆ ಬೆದರಿಕೆಯ ಒತ್ತಡವನ್ನು ಸೃಷ್ಟಿಸಲಾಗುತ್ತಿದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆ ಕಚೇರಿಗಳ ಮೇಲೆ ಲೋಕಾಯುಕ್ತರ ದಾಳಿಯ ಹಿಂದೆ ಯಡಿಯೂರಪ್ಪನವರನ್ನು ಬೆದರಿಸುವ ಒಂದು ಉದ್ದೇಶವು ಇದೆ ಎನ್ನಲಾಗಿದೆ. ಮಾಡಾಳ್ ಮೇಲಿನ ರೈಡ್ ಮೂಲಕ ಯಡಿಯೂರಪ್ಪನವರಿಗೆ ಕೊಟ್ಟಿರುವ ಒಂದು ಎಚ್ಚರಿಕೆಯ ಸಂದೇಶ ಎನ್ನಲಾಗುತ್ತಿದೆ. ಬಿಜೆಪಿ ಅಮಿತ್ ಶಾ ಮತ್ತು ನರೇಂದ್ರ ಮೋದಿಯವರ ಅಬ್ಬರದ ಪ್ರಚಾರ, ಅಪಾರ ಹಣ ಸಂಪನ್ಮೂಲಗಳ ವಿನಿಯೋಗ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಡಳಿತ ಯಂತ್ರದ ದುರ್ಬಳಕೆ, ಕೆಳಹಂತಗಳಲ್ಲಿ ಪ್ರಾದೇಶಿಕವಾಗಿ ಹಾಗೂ ಸ್ಥಳೀಯವಾದ ರಾಜಕೀಯ ತಂತ್ರಗಾರಿಕೆ ಬಳಿಕವೂ ಬಹುಮತವನ್ನು ಪಡೆದೇ ಪಡೆಯುತ್ತೇವೆ ಎನ್ನುವ ವಿಶ್ವಾಸ ಬಿಜೆಪಿ ನಾಯಕರಲ್ಲಿ ಕಾಣುವುದಿಲ್ಲ. ಹೀಗಾಗಿಯೇ ಎಲ್ಲಾ ರೀತಿಯ ವರಸೆ, ಒತ್ತಡ, ಬೆದರಿಕೆ ತಂತ್ರ, ಕುತಂತ್ರಗಳಿಗೆ ಎಳಸಿದಂತೆ ಕಾಣುತ್ತದೆ.

* * *

ಮಿಷನ್ 150 ರ ತಂತ್ರ ಜಾರಿಯಲ್ಲಿ

ಉತ್ತರ ಕರ್ನಾಟಕದಲ್ಲಿ ತಮ್ಮ ಬಲ ಕುಗ್ಗುವ ಅಂದಾಜು ಇರುವ ಬಿಜೆಪಿಯು ಮತ ವಿಭಜನೆಗೆ ಜನಾರ್ದನ ರೆಡ್ಡಿಯವರನ್ನು ಬಳಸುತ್ತಿದೆಯೇ ಎನ್ನುವ ಅನುಮಾನ ಮತ್ತಷ್ಟು ಗಟ್ಟಿಯಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಬಿಜೆಪಿ ಹೈಕಮಾಂಡ್ ನೀಡುತ್ತಿರುವ ಗಮನ ತುಂಬಾ ಹೆಚ್ಚಿದೆ. ಈ ವಾರದಲ್ಲಿ ಪಕ್ಷೇತರ ಸಂಸದರಾಗಿದ್ದ ಸುಮಲತಾ ಅಂಬರೀಶ್ ರವರನ್ನು ಬಿಜೆಪಿ ಪಕ್ಷಕ್ಕೆ ಬರಮಾಡಿಕೊಳ್ಳಲಾಗಿದೆ. ತಾಂತ್ರಿಕವಾಗಿ, ಅವರು ಬಿಜೆಪಿ ಪಕ್ಷದ ಸದಸ್ಯರಲ್ಲದೆ ಇದ್ದರೂ ಬಿಜೆಪಿ ಪಕ್ಷಕ್ಕೆ ಬಹಿರಂಗವಾಗಿ ಬೆಂಬಲಿಸುವುದಾಗಿಯೂ, ಈ ಚುನಾವಣೆಯಲ್ಲಿ ಸಂಪೂರ್ಣವಾಗಿ ಬಿಜೆಪಿಯ ಗೆಲುವಿಗೆ ಶ್ರಮಿಸುವುದಾಗಿ ಘೋಷಿಸಿದ್ದಾರೆ. ನಿಜಾರ್ಥದಲ್ಲಿ ಬಿಜೆಪಿಯನ್ನು ಸೇರಿದ್ದಾರೆ. ಆ ಬಳಿಕ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಂಸದೆ ಸುಮಲತಾ ರವರು ತಮ್ಮ ಇಡೀ ಟೀಕಾ ಪ್ರಹಾರವನ್ನು ಜೆಡಿಎಸ್ ವಿರುದ್ಧವೇ ನಡೆಸಿದರು. ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಮತ್ತು ಅಂಬರೀಶ್ ನಿಧನದ ನಂತರದ ಅನುಕಂಪದ ಆಧಾರದಲ್ಲಿ ಕಾಂಗ್ರೆಸ್ಸಿನ ಕೆಲವು ಶಾಸಕರು, ಅವರ ಬೆಂಬಲಿಗರು ಸುಮಲತಾ ರವರನ್ನು ಬೆಂಬಲಿಸಿದ್ದರು ಎನ್ನುವ ಒಂದು ಕಾರಣವೂ ಕಾಂಗ್ರೆಸ್ಸನ್ನು ಟೀಕೆಸದೆ ಉಳಿಸಿರಲು ಒಂದು ಕಾರಣ ಎನ್ನಲಾಗುತ್ತಿದೆ. ಹಾಗೆ ಬೆಂಬಲಿಸಿದವರು ಈಗಲೂ ಮುಂದೆ ತಮ್ಮನ ಬೆಂಬಲಿಸಬೇಕು ಎನ್ನುವುದು ಮತ್ತು ಈ ಚುನಾವಣೆಯಲ್ಲಿ ಒಂದಿಷ್ಟು ಜನ ಬಿಜೆಪಿಗೆ ಬೆಂಬಲಿಸಬಹುದು ಎನ್ನುವುದು ಒಂದು ಲೆಕ್ಕಾಚಾರ ಇರಬಹುದು. ಅಂತೂ, ಬಿಜೆಪಿ ಮಂಡ್ಯ, ಹಾಸನ, ಮೈಸೂರು ಈ ಭಾಗಗಳಲ್ಲಿ ತನ್ನ ಆಕ್ರಮಣಕಾರಿ ಧಾಳಿಯನ್ನು ಮುಂದುವರಿಸಿದೆ. ಹೀಗಿದ್ದಾಗ್ಯೂ ಬಿಜೆಪಿಗೆ ಅಷ್ಟು ಸುಲಭದಲ್ಲಿ ಆ ಭಾಗದಲ್ಲಿ ನೆಲೆ ಊರುವುದು ಕಷ್ಟ ಎನ್ನಲಾಗುತ್ತಿದೆ. ಬಿಜೆಪಿಗೆ ಮಂಡ್ಯ ಒಳಗೊಂಡು ದಕ್ಷಿಣ ಕರ್ನಾಟಕದಲ್ಲಿ ತೀವ್ರ ಪ್ರತಿರೋಧ ಇರುವುದು ವಾಸ್ತವ.

ಇವೆಲ್ಲವುಗಳ ಹೊರತಾಗಿಯೂ ಈ ಭಾಗದಲ್ಲಿ ಬಿಜೆಪಿ ಸಂಘ ಪರಿವಾರಗಳ ಕೋಮುವಾದಿ ವಿಷ ವಿಸ್ತರಣೆಯ ಅಪಾಯ ಹೆಚ್ಚಿದೆ.

ಪ್ರತಿಪಕ್ಷ–ಮುಕ್ತ ತ್ರಿಪುರಾಕ್ಕೆ ಬಿಜೆಪಿ ದಬ್ಬಾಳಿಕೆ



ಚುನಾವಣೆಯಲ್ಲಿ ಗೆದ್ದ ನಂತರವೂ ಪ್ರತಿಪಕ್ಷಗಳ ಮೇಲೆ ಈ ರೀತಿಯ ವ್ಯಾಪಕ ಹಾಗೂ ತೀವ್ರ ದಾಳಿ ಏಕೆ ನಡೆಯುತ್ತಿದೆ ಎಂದು ತ್ರಿಪುರಾದ ಹೊರಗಿನ ಜನರು ಕೇಳಬಹುದು. ವರ್ಗ ಪ್ರಶ್ನೆ ಬರುವುದು ಇಲ್ಲೇ. ಪಶ್ಚಿಮ ಬಂಗಾಳದಂತೆ ತ್ರಿಪುರಾದಲ್ಲಿ ಕಮ್ಯೂನಿಸ್ಟ್ ಚಳವಳಿಯನ್ನು ಹಲವು ದಶಕಗಳ ವರ್ಗ ಹೋರಾಟ ಮತ್ತು ಸಾಮೂಹಿಕ ಆಂದೋಲನಗಳಿಂದ ಕಟ್ಟಲಾಗಿದೆ. ಸಿಪಿಐ(ಎಂ) ಸಂಘಟನೆಯನ್ನು ನಾಶ ಮಾಡುವುದು ಹಾಗೂ ಅದರ ಸಾಮೂಹಿಕ ನೆಲೆಯನ್ನು ಹಾಳುಗೆಡಹುವುದು ತ್ರಿಪುರಾದಲ್ಲಿ ನಾವು ನೋಡುತ್ತಿರುವ ದಬ್ಬಾಳಿಕೆಯ ಗುರಿಯಾಗಿದೆ. ಚುನಾವಣೆಗೆ ಮುಂಚೆಯೇ ಆಗಲಿ ನಂತರವೇ ಆಗಲಿ, ಕಮ್ಯೂನಿಸ್ಟ್ ಮತ್ತು ಎಡ ಚಳವಳಿ ಮೇಲಿನ ವರ್ಗ ದಾಳಿ ಮುಂದುವರಿಯುತ್ತದೆ. ಕಮ್ಯೂನಿಸ್ಟ್ ಚಳವಳಿಯನ್ನೇ ನಿರ್ನಾಮ ಮಾಡುವುದೇ ಇದರ ಉದ್ದೇಶವಾಗಿದೆ.

ಪ್ರಕಾಶ್ ಕಾರತ್

ತ್ರಿಪುರಾ ವಿಧಾನಸಭೆಗೆ ನಡೆದ ಚುನಾವಣೆಗಳ ಫಲಿತಾಂಶ ಮಾರ್ಚ್ 2 ರಂದು ಪ್ರಕಟವಾದ ನಂತರ ಅಲ್ಲಿ ನಡೆಸಲಾಗುತ್ತಿರುವ ಹಿಂಸಾಚಾರದ ದಳ್ಳುರಿಯು ಒಂದು ವೇಳೆ ಬಿಜೆಪಿ ಬಹುಮತ ಗಳಿಸಿದರೆ ಏನು ನಡೆಯಬಹುದೆಂದು ನಿರೀಕ್ಷಿಸಲಾದ ಭವಿಷ್ಯದ ಪ್ರಕಾರವೇ ಇದೆ. ಏನಿದ್ದರೂ ಅದು ಕಡಿಮೆ ಅಂತರದಲ್ಲಿ ಬಹುಮತ ಗಳಿಸಿದೆ. ಮಾರ್ಚ್ 6ರ ವರೆಗಿನ ಲಭ್ಯ ಮಾಹಿತಿ ಪ್ರಕಾರ ಬಿಜೆಪಿ ಗ್ಯಾಂಗ್‌ಗಳು ರಾಜ್ಯದಾದ್ಯಂತ ಸುಮಾರು ಒಂದು ಸಾವಿರ ಆಕ್ರಮಣ–ಹಲ್ಲೆಗಳನ್ನು ನಡೆಸಿದೆ. ಇದು ಸಿಪಿಐ(ಎಂ), ಎಡರಂಗ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲಿನ ದೈಹಿಕ ದಾಳಿ, ಅವರ ಮನೆಗಳ ದಾಂಧಲೆ ಮತ್ತು ಸುಡುವುದು ಹಾಗೂ ಪಕ್ಷದ ಕಚೇರಿಗಳನ್ನು ನಾಶ ಮಾಡುವ ಸ್ವರೂಪದಲ್ಲಿದೆ. ರಬ್ಬರ್ ಪ್ಲಾಂಟೇಶನ್‌ಗಳನ್ನು, ಬೆಳೆಗಳನ್ನು ಸುಡುವುದು ಮತ್ತು ಇ–ರಿಕ್ಷಾಗಳನ್ನು ಹಾಗೂ ಇತರ ವಾಹನಗಳನ್ನು ಸುಟ್ಟು ಅವುಗಳನ್ನು ಓಡಿಸಲು ಆಗದಂತೆ ಮಾಡಿ ಜನರ ಜೀವನೋಪಾಯವನ್ನು ಕಸಿಯುವಂತೆ ಮಾಡುವುದು ಈ ಹಾನಿಕಾರಕ ಹಿಂಸಾಚಾರದ ಉದ್ದೇಶವಾಗಿದೆ.

2018 ಮಾರ್ಚ್‌ನಲ್ಲಿ ನಡೆದ ಕಳೆದ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾಗಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ನಂತರ ನಡೆದ ರೀತಿಯಲ್ಲೇ ಈ ಬಾರಿಯೂ ಹಿಂಸಾಚಾರವನ್ನು ಹರಿಬಿಡಲಾಗಿದೆ. ಅದು ಆಡಳಿತ ನಡೆಸಿದ ಐದು ವರ್ಷದುದ್ದಕ್ಕೂ ಆಳುವ ಪಕ್ಷದ ದಬ್ಬಾಳಿಕೆ ಮುಂದುವರಿದಿತ್ತು. ಬಲವಂತದಿಂದ ಹಣ ಕಸಿದುಕೊಳ್ಳುವುದು ಹಾಗೂ ಕಾರ್ಯಕರ್ತರ ಕುಟುಂಬಗಳಿಗೆ ಬೆದರಿಕೆ ಹಾಕುವುದು ಅದರಲ್ಲಿ ಸೇರಿವೆ. ಈ ಅವಧಿಯಲ್ಲಿ ಸಿಪಿಐ(ಎಂ)ನ 25 ಸದಸ್ಯರು ಮತ್ತು ಬೆಂಬಲಿಗರ ಕೊಲೆಯಾಗಿದೆ. ಈ ಬಾರಿ ಬಿಜೆಪಿ ಗಳಿಸಿದ ಸ್ಥಾನಗಳು ಮತ್ತು ಮತಗಳಿಕೆಯಲ್ಲಿ ಗಣನೀಯ ಇಳಿಕೆಯಾಗಿದೆ. ಇದರಿಂದ ಹುಟ್ಟಿದ ಸಿಟ್ಟು ಹಾಗೂ ಹತಾಶೆಯಿಂದ ವ್ಯಾಪಕ ತೀವ್ರ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಕಾಣುತ್ತಿದೆ. ಎಲ್ಲಾ ದಮನಕಾರಿ ಪ್ರಯತ್ನಗಳ ಹೊರತಾಗಿಯೂ ಪ್ರತಿಪಕ್ಷ, ಎಡ–ಕಾಂಗ್ರೆಸ್ ಕೂಟ ಶೇಕಡ 35ರಷ್ಟು ಮತಗಳನ್ನು ಪಡೆದಿರುವುದು ಗಮನಾರ್ಹ.

ಚುನಾವಣೆಯಲ್ಲಿ ಗೆದ್ದ ನಂತರವೂ ಪ್ರತಿಪಕ್ಷಗಳ ಮೇಲೆ ಈ ರೀತಿಯ ವ್ಯಾಪಕ ಹಾಗೂ ತೀವ್ರ ದಾಳಿ ಏಕೆ ನಡೆಯುತ್ತಿದೆ ಎಂದು ತ್ರಿಪುರಾದ ಹೊರಗಿನ ಜನರು ಕೇಳಬಹುದು. ವರ್ಗ ಪ್ರಶ್ನೆ ಬರುವುದು ಇಲ್ಲೇ. ಪಶ್ಚಿಮ ಬಂಗಾಳದಂತೆ ತ್ರಿಪುರಾದಲ್ಲಿ ಕಮ್ಯೂನಿಸ್ಟ್ ಚಳವಳಿಯನ್ನು ಹಲವು ದಶಕಗಳ ವರ್ಗ ಹೋರಾಟ ಮತ್ತು ಸಾಮೂಹಿಕ ಆಂದೋಲನಗಳಿಂದ ಕಟ್ಟಲಾಗಿದೆ. ಸಿಪಿಐ(ಎಂ) ಸಂಘಟನೆಯನ್ನು ನಾಶ ಮಾಡುವುದು ಹಾಗೂ ಅದರ ಸಾಮೂಹಿಕ ನೆಲೆಯನ್ನು ಹಾಳುಗೆಡಹುವುದು ತ್ರಿಪುರಾದಲ್ಲಿ ನಾವು ನೋಡುತ್ತಿರುವ ದಬ್ಬಾಳಿಕೆಯ ಗುರಿಯಾಗಿದೆ. ಚುನಾವಣೆಗೆ ಮುಂಚೆಯೇ ಆಗಲಿ ನಂತರವೇ ಆಗಲಿ, ಕಮ್ಯೂನಿಸ್ಟ್ ಮತ್ತು ಎಡ ಚಳವಳಿ ಮೇಲಿನ ವರ್ಗ ದಾಳಿ ಮುಂದುವರಿಯುತ್ತದೆ. ಕಮ್ಯೂನಿಸ್ಟ್ ಚಳವಳಿಯನ್ನೇ ನಿರ್ನಾಮ ಮಾಡುವುದೇ ಇದರ ಉದ್ದೇಶವಾಗಿದೆ.

ಮಾರ್ಚ್ 8 ರಂದು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮಾಣಿಕ್ ಸಹಾ ಈ ಆಕ್ರಮಣಗಳಿಗೆ ಪ್ರತಿಕ್ರಿಯಿಸಿದ ರೀತಿಯಿಂದಲೇ ಈ ಹಿಂಸಾಚಾರದ ಹಿಂದೆ ಆಳುವ ಬಿಜೆಪಿ ಇದೆ ಎನ್ನುವುದು ಸಾಬೀತಾಗುತ್ತದೆ. 'ಪ್ರತಿಪಕ್ಷಗಳ ಬೆಂಬಲಿಗರು ಮತ್ತು ಜನರು ಸ್ಥಾಪಿತ ಹಿತಾಸಕ್ತರೊಂದಿಗೆ ಸೇರಿ ರಾಜ್ಯದ ನಾನಾ ಭಾಗಗಳಲ್ಲಿ ಹಿಂಸಾಚಾರವನ್ನು ಪ್ರಚೋದಿಸುತ್ತಿದ್ದಾರೆ' ಎಂದು ಕೆಲವು ಸಂತ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿದ ಸಹಾ ಹೇಳಿದ್ದಾರೆ. ಅಂದರೆ, ಬಿಜೆಪಿಗೆ ಕೆಟ್ಟ ಹೆಸರು ತರಲು ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷ ಕಾರ್ಯಕರ್ತರು ಸ್ವತಃ ತಮ್ಮ ಮನೆಗಳು, ಅಂಗಡಿಗಳು ಮತ್ತು ಕಚೇರಿಗಳಿಗೆ ಬೆಂಕಿ ಹಾಕಿಕೊಳ್ಳುತ್ತಿದ್ದಾರೆ!

2018ಕ್ಕೂ ಮುಂಚೆ ಅಧಿಕಾರದಲ್ಲಿದ್ದಾಗ ಸಿಪಿಐ(ಎಂ) ಮತ್ತು ಎಡರಂಗ ಪ್ರತಿಪಕ್ಷಗಳನ್ನು ದಮನಿಸುತ್ತಿತ್ತು ಎಂದು ಆರೋಪಿಸುವುದು ಇನ್ನೊಂದು ತಂತ್ರವಾಗಿದೆ. ಈ ಸುಳ್ಳು ಹರಡುವಲ್ಲಿ ಸ್ವತಃ ಪ್ರಧಾನಿ ಮೋದಿಯವರದೇ ದೊಡ್ಡ ಪಾಲಿದೆ. ತ್ರಿಪುರಾದಲ್ಲಿ ಚುನಾವಣಾ ರ‍್ಯಾಲಿಗಳಲ್ಲಿ ಮಾತನಾಡಿದಾಗ ಮೋದಿ ಇದೇ ರೀತಿಯ ಮಾತುಗಳನ್ನು ಆಡಿದ್ದರು. ಮಾರ್ಚ್ 2ರ ಸಂಜೆ ದೆಹಲಿಯಲ್ಲಿ ಬಿಜೆಪಿ ಕೇಂದ್ರ ಕಾರ್ಯಾಲಯದಲ್ಲಿ ತ್ರಿಪುರಾ ವಿಜಯೋತ್ಸವದ ಆಚರಣೆ ವೇಳೆ ಕೂಡ ಅದೇ ಸುಳ್ಳಿನ ಕಂತೆ ಪುರಾಣಗಳನ್ನು ಮೋದಿ ಪುನರಾವರ್ತಿಸಿದ್ದಾರೆ. ಹಿಂದೆ ಅಗರ್ತಲಾ ಮತ್ತು ತ್ರಿಪುರಾದ ಇತರ ಭಾಗಗಳಲ್ಲಿ ಒಂದು ಪಕ್ಷದ ಬಾವುಟಗಳನ್ನು ಮಾತ್ರವೇ ಹಾರಲು ಬಿಡಲಾಗುತ್ತಿತ್ತು. ಬೇರೆ ಯಾವುದೇ ಪಕ್ಷದ ಧ್ವಜ ಹಾರಿಸಲು ಪ್ರಯತ್ನಿಸಿದರೆ ಹಿಂಸಾಚಾರ ನಡೆಸಲಾಗುತ್ತಿತ್ತು ಎಂದು ಮೋದಿ ಪದೇ ಪದೇ ಹೇಳಿದರು. ಒಂದು ಆಳುವ ಪಕ್ಷವಾಗಿ ಸಿಪಿಐ(ಎಂ)ನ ಸರ್ವಾಧಿಕಾರದ ಬಗ್ಗೆ ಮಾತನಾಡುವುದು ವಾಸ್ತವದ ಮುಖಕ್ಕೆ ಹೊಡೆಯುವಂತಿದೆ.

ಉದಾಹರಣೆಗೆ, 2018ರಲ್ಲಿ ಎಡರಂಗದ ಅಧಿಕಾರವಿದ್ದಾಗ ನಡೆದ ಅಸೆಂಬ್ಲಿ ಚುನಾವಣೆಗಳಲ್ಲಿ ರಾಜ್ಯದಾದ್ಯಂತ ಬಿಜೆಪಿ ಧ್ವಜಗಳು, ಬ್ಯಾನರ್‌ಗಳು ಮತ್ತು ಫಲಕಗಳು ರಾರಾಜಿಸಿದ್ದು ಅನೇಕ ವೀಕ್ಷಕರ ಹುಬ್ಬು ಮೇಲೆರುವಂತೆ ಮಾಡಿತ್ತು. ಯಾಕೆಂದರೆ ಬಿಜೆಪಿ ರಾಜ್ಯದಲ್ಲಿ ಯಾವತ್ತೂ ಬಲಿಷ್ಠ ಪಕ್ಷ ಆಗಿರಲಿಲ್ಲ. ಅದಕ್ಕೂ ಮುಂಚೆ, ರಾಜ್ಯದಲ್ಲಿ ಕಾಂಗ್ರೆಸ್ ಪ್ರಮುಖ ಪ್ರತಿಪಕ್ಷವಾಗಿದ್ದಾಗ ಕಾಂಗ್ರೆಸ್ ಧ್ವಜಗಳು ರಾಜಧಾನಿ ಅಗರ್ತಲಾ ಸುತ್ತಮುತ್ತ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿದ್ದವು. ಬಿಜೆಪಿ ಆಡಳಿತಾವಧಿಯಲ್ಲಿ 2021ರ ನವೆಂಬರ್‌ನಲ್ಲಿ ನಡೆದ ಅಗರ್ತಲಾ ಮುನಿಸಿಪಲ್ ಚುನಾವಣೆಗಳಲ್ಲಿ ಬಿಜೆಪಿ 51ರಲ್ಲಿ ಎಲ್ಲಾ 51 ಸ್ಥಾನಗಳನ್ನು ಗೆದ್ದಿತ್ತು. ಅದು ರಿಗ್ಗಿಂಗ್ ಮಾಡಿ ಪಡೆದ ಜಯವಾಗಿತ್ತು. ಆದರೆ, ಎಡರಂಗ ಅಧಿಕಾರದಲ್ಲಿದ್ದಾಗ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಹೀಗೆ ಆಗಿರಲಿಲ್ಲ. 1995ರ ಚುನಾವಣೆಗಳಲ್ಲಿ ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಬಹುಮತ ಪಡೆದಿತ್ತು. ನಂತರ ಕೂಡ ಮಹಾನಗರಪಾಲಿಕೆಯಲ್ಲಿ ಕಾಂಗ್ರೆಸ್ ಗಣನೀಯ ಸಂಖ್ಯೆಯ ಸ್ಥಾನಗಳನ್ನು ಗೆಲ್ಲುವುದು ಮುಂದುವರಿಯಿತು. ಅಲ್ಲದೆ ಸತತ ಅಸೆಂಬ್ಲಿ ಚುನಾವಣೆಗಳಲ್ಲಿ ಅದು ಶೇಕಡ 40ಕ್ಕೂ ಅಧಿಕ ಮತಗಳನ್ನು ಪಡೆದಿತ್ತು.

ಕಳೆದ ಐದು ವರ್ಷಗಳ ಬಿಜೆಪಿ ಆಡಳಿತದಲ್ಲಿ ಪ್ರತಿಪಕ್ಷಗಳ ಹಕ್ಕುಗಳನ್ನು ಸ್ಪಷ್ಟವಾಗಿ ನಿರಾಕರಿಸಲಾಗಿದೆ ಹಾಗೂ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕ್ರೂರವಾಗಿ ದಮನಿಸಲಾಗಿದೆ. ರಾಜ್ಯದ 16 ಸಿಪಿಐ(ಎಂ) ಶಾಸಕರ ಪೈಕಿ ಯಾರೊಬ್ಬರಿಗೂ ಚುನಾಯಿತ ಪ್ರತಿನಿಧಿಯಾಗಿ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳನ್ನು ನಡೆಸಲು ಈ ಐದು ವರ್ಷಗಳಲ್ಲಿ ತಮ್ಮ ಕ್ಷೇತ್ರಗಳಲ್ಲಿ ಮುಕ್ತವಾಗಿ ಓಡಾಡಲು ಸಾಧ್ಯವಿರಲಿಲ್ಲ ಎನ್ನುವುದರಿಂದ ತ್ರಿಪುರಾದಲ್ಲಿ ಅಧಿಕಾರಶಾಹಿ–ಫ್ಯಾಸಿಸ್ಟ್ ವ್ಯವಸ್ಥೆಯ ಸ್ವರೂಪ ಹೇಗಿದೆ ಎನ್ನುವುದನ್ನು ಯಾರಾದರೂ ಅಂದಾಜು ಮಾಡಬಹುದಾಗಿದೆ. ಮಾಜಿ ಮುಖ್ಯಮಂತ್ರಿ, ಪ್ರತಿಪಕ್ಷ ಮುಖಂಡ ಮಾಣಿಕ್ ಸರ್ಕಾರ್ ಕೂಡ ಅವರಲ್ಲಿ ಒಳಗೊಂಡಿದ್ದಾರೆ. 2021ರ ಸೆಪ್ಟೆಂಬರ್‌ನಲ್ಲಿ ತಮ್ಮ ಕ್ಷೇತ್ರದಲ್ಲಿ ಬ್ಲಾಕ್ ಮಟ್ಟದ ಸಾಮೂಹಿಕ ಮನವಿ ಅರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾಣಿಕ್ ಸರ್ಕಾರ್ ಅವಕಾಶ ಕೋರಿದ್ದಕ್ಕೆ ಪ್ರತಿಯಾಗಿ, ಬಿಜೆಪಿ ಗೂಂಡಾಗಳು ರಾಜ್ಯದಾದ್ಯಂತ ಸಿಪಿಐ(ಎಂ) ಕಚೇರಿಗಳು ಮತ್ತು ಪಕ್ಷದ ಸದಸ್ಯರ ಮನೆಗಳ ಮೇಲೆ ಆಕ್ರಮಣ ನಡೆಸಿದ್ದರು. ಸಿಪಿಐ(ಎಂ) ಪಕ್ಷದ ರಾಜ್ಯ ಕೇಂದ್ರ ಕಚೇರಿ ಮೇಲೆ ಕೂಡ ದಾಳಿ ನಡೆದಿತ್ತು.

ಸತತ ಐದು ವರ್ಷ ಕಾಲ ದಬ್ಬಾಳಿಕೆ ಮತ್ತು ದಮನಕಾರಿ ಆಡಳಿತದ ಮೂಲಕ ಪಕ್ಷವನ್ನು ಮತ್ತು ಎಡರಂಗ ಸಂಘಟನೆಯನ್ನು ದುರ್ಬಲಗೊಳಿಸಲು ತಾವು ಸಮರ್ಥರಾದೆವು ಎಂಬ ವಾಸ್ತವಾಂಶವೇ ಪ್ರಸಕ್ತ ಚುನಾವಣೆಯಲ್ಲಿ ದುರ್ಬಲ ಸಾಧನೆಗೆ ಕಾರಣ ಎಂಬುದು ಬಿಜೆಪಿ–ಆರ್‌ಎಸ್‌ಎಸ್ ಕೂಟಕ್ಕೆ ಚೆನ್ನಾಗಿ ಗೊತ್ತಿದೆ. ದೀರ್ಘ ಕಾಲದ ದಬ್ಬಾಳಿಕೆಯ ಹೊರತಾಗಿಯೂ ಎಡರಂಗ ಕಾರ್ಯಕರ್ತರು ಚೇತರಿಸಿಕೊಂಡು ದಿಟ್ಟತನದಿಂದ ಚುನಾವಣಾ ಪ್ರಚಾರದಲ್ಲಿ ಕೆಲಸ ಮಾಡಿದ್ದು ಆಳುವ ಬಿಜೆಪಿ ಕೂಟವನ್ನು ಕಾಡುತ್ತಿದೆ. ರಾಜ್ಯದಲ್ಲಿ ಎಡ ಮತ್ತು ಪ್ರತಿಪಕ್ಷಗಳ ವಿರುದ್ಧ ಮುಂದುವರಿದಿರುವ ದಾಳಿಯು ಬಿಜೆಪಿ–ಆರ್‌ಎಸ್‌ಎಸ್ ಕೂಟದವರ ಭೀತಿ ಮತ್ತು ಅನಿಶ್ಚಯತೆಯ ಸಂಕೇತವಾಗಿದೆ.

ತಮ್ಮ ವಿರುದ್ಧದ ಹಿಂಸಾಚಾರವನ್ನು ಎದುರಿಸುವ ಮಹತ್ವದ ಸವಾಲನ್ನು ಸಿಪಿಐ(ಎಂ) ಮತ್ತು ಎಡರಂಗ ಎದುರಿಸುತ್ತಿದೆ. ಜನತೆಯೊಂದಿಗೆ ಸಂಪರ್ಕವನ್ನು ಮುಂದುವರಿಸುವ ಹೊಣೆಯೂ ಇದೆ. ಈ ಪ್ರಯತ್ನದಲ್ಲಿ ಅವರಿಗೆ ದೇಶದ ಎಲ್ಲಾ ಜನತಾಂತ್ರಿಕ, ಪ್ರಗತಿಪರ ಮತ್ತು ಜಾತ್ಯತೀತ ಶಕ್ತಿಗಳ ಬೆಂಬಲವಿದೆ.

ಅನು: ವಿಶ್ವ

2023ರ ತ್ರಿಪುರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಗಳು ಪಡೆದ ಸ್ಥಾನಗಳು ಮತ್ತು ಮತಗಳು: ಒಟ್ಟು ಸ್ಥಾನಗಳು–60				
ಪಕ್ಷಗಳು	ಸ್ಪರ್ಧೆ	ಗೆಲುವು	ಪಡೆದ ಮತಗಳು	ಶೇಕಡವಾರು ಮತ
ಬಿಜೆಪಿ ಮೈತ್ರಿಕೂಟ ಪಡೆದ ಸ್ಥಾನಗಳು–33 (ಶೇಕಡಾವಾರು ಪಡೆದ ಮತಗಳು– 40.23)				
ಬಿಜೆಪಿ	55	32	9,85,797	38.97
ಐಪಿಎಫ್‌ಟಿ	05	01	31,838	1.26
ಸಿಪಿಐ(ಎಂ), ಕಾಂಗ್ರೆಸ್ ಮೈತ್ರಿಕೂಟ ಪಡೆದ ಸ್ಥಾನಗಳು–14 (ಶೇಕಡಾವಾರು ಪಡೆದ ಮತಗಳು– 35)				
ಸಿಪಿಐ(ಎಂ)	43	11	6,22,829	24.62
ಕಾಂಗ್ರೆಸ್	13	03	2,16,637	8.56
ಸಿಪಿಐ	1	–	12,063	0.48
ಆರ್‌ಎಸ್‌ಪಿ	1	–	17,007	0.67
ಫಾರ್ವರ್ಡ್ ಬ್ಲಾಕ್	1	–	–	–
ಪಕ್ಷೇತರ ಅಭ್ಯರ್ಥಿ	1	–	–	–
ತಿಪ್ರಾ ಮೋಥಾ	42	13		19

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ದುಡಿಮೆಯ ಅವಧಿ 12 ಗಂಟೆಗೆ ಏರಿಕೆ: ಕಾರ್ಮಿಕರನ್ನು ಗುಲಾಮಗಿರಿಗೆ ನೂಕುವ ಯತ್ನ!

ರಾಜ್ಯ ಬಿಜೆಪಿ ಸರ್ಕಾರ 'ಕರ್ನಾಟಕ ಕಾರ್ಖಾನೆಗಳ ಕಾಯ್ದೆ'ಗೆ ತಿದ್ದುಪಡಿ ತಂದು ಮೂರು ಮುಖ್ಯ ಬದಲಾವಣೆಗಳನ್ನು ಮಾಡಿದೆ. ಮೊದಲನೆಯದು, ದಿನದಲ್ಲಿ 8 ಗಂಟೆಗಳ ಕೆಲಸದ ಅವಧಿಯನ್ನು 12 ಗಂಟೆವರೆಗೆ ಹೆಚ್ಚಿಸಿಕೊಳ್ಳಲು ಅವಕಾಶ ನೀಡಿದೆ. ವಾರಕ್ಕೆ 48 ಗಂಟೆ, ದಿನಕ್ಕೆ 8 ಗಂಟೆ ದುಡಿಮೆ ಎಂಬ ಇದುವರೆಗೂ ಇದ್ದ ಕಾನೂನು ಇನ್ನು ಮುಂದೆ ಇರುವುದಿಲ್ಲ. ಎರಡನೆಯದಾಗಿ ಕಾರ್ಮಿಕರಿಗೆ ಮಧ್ಯಂತರ ವಿಶ್ರಾಂತಿಯನ್ನು 5 ಗಂಟೆ ಬದಲಾಗಿ 6 ಗಂಟೆಗಳಿಗೆ ಹೆಚ್ಚಿಸಲಾಗಿದೆ. ಮೂರನೆಯದಾಗಿ ಮಹಿಳೆಯರು ರಾತ್ರಿ ಪಾಳಿ(ಶಿಫ್ಟ್)ಯಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡಲಾಗಿದೆ. ಈ ಮೂರು ಮುಖ್ಯ ಬದಲಾವಣೆಗಳನ್ನು ತರಾತುರಿಯಲ್ಲಿ ತರಲಾಗಿದೆ. ಅದೂ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ!

ಲಿಂಗರಾಜು ಮಳವಳ್ಳಿ

'ನಾನು ವಾಸವಿರುವ ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಬೇಗೂರು ರಸ್ತೆ ವಿಶ್ವಪ್ರಿಯಾ ಬಡಾವಣೆಯಿಂದ ಬಿಡದಿಯಲ್ಲಿರುವ ಬಾಷ್ (ಮೈಕೋ) ಕಂಪನಿಗೆ ಕಾರ್ಮಿಕರನ್ನು ಬಸ್ ಮೂಲಕ ಕರೆದುಕೊಂಡು ಹೋಗಲಾಗುತ್ತೆ. ಫ್ಯಾಕ್ಟರಿ ತಲುಪಲು ಕನಿಷ್ಟ 2 ತಾಸು ಪ್ರಯಾಣ. ಫ್ಯಾಕ್ಟರಿಯಲ್ಲಿ ಊಟದ ವಿರಾಮ ಸೇರಿ 9 ತಾಸು ದುಡಿಮೆ, ಚಕ್ ಔಟ್ ಮಾಡಿ ಹೊರಬರಲು ಅರ್ಧ ಗಂಟೆ, ವಾಪಸ್ ಮನೆ ತಲುಪಲು ಮತ್ತೆ 2 ಗಂಟೆ ಪ್ರಯಾಣ. ಒಟ್ಟು ಒಬ್ಬ ಕಾರ್ಮಿಕ ಹದಿಮೂರೂವರೆ ಗಂಟೆಗಳನ್ನು ಫ್ಯಾಕ್ಟರಿಗಾಗಿ ಕಳೆಯುತ್ತಾನೆ.'

ಹೊಸ ತಿದ್ದುಪಡಿಯಂತೆ ಒಂದು ವಾರದಲ್ಲಿ 6 ದಿನ ದುಡಿಮೆ, 48 ಗಂಟೆ ಮಾತ್ರವೇ ಇದ್ದು, ದಿನದ ದುಡಿಮೆಯನ್ನು 12 ಗಂಟೆವರೆಗೂ ವಿಸ್ತರಿಸಬಹುದಾಗಿದೆ. ಅಂದರೆ ಒಂದು ವಾರ ಮಾಡಬಹುದಾದ ದುಡಿಮೆಯನ್ನು ಕೇವಲ ನಾಲ್ಕು ದಿನಗಳಲ್ಲಿ ಮಾಡಿ ಮುಗಿಸಬೇಕು! ಉಳಿದ ಮೂರು ದಿನ ಆತ/ಕೆ ದುಡಿಮೆಯಿಂದ ಮುಕ್ತಿ ಹೊಂದಬಹುದು! ವಾರದಲ್ಲಿ ನಾಲ್ಕು ದಿನ ಮಾತ್ರವೇ ಕೆಲಸ, ಮೂರು ದಿನ ಫ್ರೀ ಆಗಿ ಓಡಾಡಿಕೊಂಡಿರಬಹುದಲ್ಲವೇ? ಇದು ಮೇಲ್ ನೋಟಕ್ಕೆ ಸರಿ ಎನಿಸಲೂ ಸಾಧ್ಯವಿದೆ! ಆದರೆ ಇದು ಬಾರಿ ಆಪಾಯ ತಂದೊಡ್ಡಲಿದೆ.

ಕೇಂದ್ರ ಸರ್ಕಾರ ಕಾರ್ಪೋರೇಟ್ ಧಣಿಗಳನ್ನು ತೃಪ್ತಿಪಡಿಸಲು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ನಾಲ್ಕು ಸಂಹಿತೆಗಳನ್ನಾಗಿ (ಕೋಡಿಫಿಕೇಷನ್) ಈಗಾಗಲೇ ರೂಪಿಸಿದೆ. ಹೀಗಾಗಿ ಇದನ್ನು ಅನುಸರಿಸಿ ರಾಜ್ಯದ ಡಬಲ್ ಇಂಜಿನ್ ಸರ್ಕಾರ ರಾಜ್ಯದ ಕಾರ್ಪೋರೇಟ್ ಕುಳಗಳನ್ನು ಖುಷಿಪಡಿಸಲು ಕಾಯ್ದೆಗೆ ತಿದ್ದುಪಡಿ ತಂದಿದೆ.

8 ಗಂಟೆಗಳ ದುಡಿಮೆ ಎಂಬುದು ಕಾರ್ಮಿಕರಿಗೆ ಬಂಡವಾಳಶಾಹಿ ವ್ಯವಸ್ಥೆ ನೀಡಿದ ಬಳುವಳಿಯೇನಲ್ಲ! ಇದರ ಹಿಂದೆ ಧೀರೋದ್ದಾತ ಹೋರಾಟದ ರಕ್ತ ಚರಿತ್ರೆಯೇ ಇದೆ. 8 ಗಂಟೆ ದುಡಿಮೆ, 8 ಗಂಟೆ ವಿಶ್ರಾಂತಿ, 8 ಗಂಟೆ ನಿದ್ರೆ ಎಂಬ ನೀತಿಗಾಗಿ ಅಂದಿನ ಕಾರ್ಮಿಕರು ಸಮರಶೀಲ ಚಳವಳಿಗಳನ್ನು ನಡೆಸಿ ಬಲಿದಾನಗೈದಿದ್ದಾರೆ.

8 ಗಂಟೆ ಕೆಲಸದ ಅವಧಿಯ ಕಾನೂನು ಬೆಳೆದು ಬಂದಿದ್ದು ಹೀಗೆ:

1880ರ ಹೊತ್ತಿಗೆ ಪ್ರಪಂಚದಲ್ಲೇ ಅತಿ ವೇಗವಾಗಿ ಬೆಳೆಯುತ್ತಿದ್ದ ಅಮೆರಿಕಾದ ಚಿಕಾಗೋ ನಗರ, ಅಗ್ಗದ ದರದಲ್ಲಿ ಸಿಗುವ ಭೂಮಿ ಕಾರಣಕ್ಕಾಗಿ ಬಂಡವಾಳದಾರರ ಸ್ವರ್ಗವಾಗಿ ಬದಲಾಗುತ್ತಿತ್ತು. ಇದಕ್ಕೆ ಸಮಾನಾಂತರವಾಗಿ ಕಾರ್ಮಿಕ ವರ್ಗವೂ ಬೆಳೆಯುತ್ತಿತ್ತು. 14 ಗಂಟೆಗಳ ನಿರಂತರ ಕೆಲಸ, ಕಾರ್ಮಿಕರ ರಕ್ಷಣೆಗೆ ಕಾನೂನುಗಳೇ ಇಲ್ಲದ ಆ ಕಾಲದಲ್ಲಿ ಬರ್ಬರ ಶೋಷಣೆಯನ್ನು ಪ್ರಶ್ನಿಸುವಂತೆಯೇ ಇರಲಿಲ್ಲ. ಹರಿವು ಹೆಚ್ಚಾದಾಗ ಕಟ್ಟೆ ಒಡೆಯಲೇಬೇಕು ಎಂಬಂತೆ ಸಣ್ಣ ಪ್ರಮಾಣದ ಪ್ರತಿಭಟನೆಗಳು ಶುರುವಾಗಿದ್ದವು. ಪ್ರತಿಭಟನೆಯನ್ನು ಹೊಸಕಿ ಹಾಕುವ ಪ್ರಭುತ್ವದ ಪಾಶವೀಕೃತ್ಯದ ವಿರುದ್ಧ ಕಾರ್ಮಿಕರ ಪ್ರತಿಭಟನೆಗಳು ಹೆಚ್ಚಿನ ಬಲದೊಂದಿಗೆ ಸೆಟೆದು ನಿಂತವೇ ವಿನಃ ಸೊರಗಲಿಲ್ಲ.

ಇದೇ ವೇಳೆಗೆ ಇಲ್ಲಿನ ಸರ್ಕಾರಿ ನೌಕರರು 14 ಗಂಟೆಯಿಂದ 10 ಗಂಟೆ ದುಡಿಮೆ ಅವಧಿಯ ಬೇಡಿಕೆಗೆ ನಡೆಸಿದ ಹೋರಾಟಕ್ಕೆ ಫಲಸಿಕ್ಕಿ ಅಂತಿಮವಾಗಿ ಈ ಹೋರಾಟ ಗೆಲುವಿನ ತಾರ್ಕಿಕ ಅಂತ್ಯ ಕಂಡಿದ್ದು ಆ ಕಾಲದ ಐತಿಹಾಸಿಕ ಹೋರಾಟ.

ಈ ಹೋರಾಟವೇ 8 ಗಂಟೆ ದುಡಿಮೆಯ ಕಾರ್ಮಿಕರ ಹೋರಾಟಕ್ಕೂ ಸ್ಫೂರ್ತಿ ನೀಡಿತು. 8 ಗಂಟೆ ದುಡಿಮೆ ಉಳಿದ 16 ಗಂಟೆ ವಿಶ್ರಾಂತಿ ಮತ್ತು ನಿದ್ರೆಗೆ ಅಗತ್ಯ ಎಂದು ವೈಜ್ಞಾನಿಕ ಮತ್ತು ತಾತ್ತ್ವಿಕ ತಳಹದಿ ಮೇಲೆ ಬೇಡಿಕೆಯನ್ನಿಟ್ಟು ಹೋರಾಟಗಳು ಶುರುವಾದವು. ಇದಕ್ಕೆ ಬಹು ಮುಖ್ಯ ಕಾರಣ, ನಿರುದ್ಯೋಗ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿತ್ತು. ಯಾಂತ್ರೀಕರಣ ಮತ್ತು ಆಂತರಿಕ ಯುದ್ಧದ ಕಾರಣದಿಂದಾಗಿ ಆರ್ಥಿಕ ಬಿಕ್ಕಟ್ಟು ತಲೆದೋರಿ ನಿರುದ್ಯೋಗ ಉಲ್ಬಣಿಸಿತು.



ಇಂಡಿಯಾದಲ್ಲಿ 8 ಗಂಟೆ ದುಡಿಮೆಗೆ ಅಂಬೇಡ್ಕರ್ ಕೊಡುಗೆ:

ಕೈಗಾರೀಕರಣಗೊಂಡ ದೇಶಗಳಂತೆ ಭಾರತದಲ್ಲೂ 14 ಗಂಟೆಗಳ ದುಡಿಮೆ ಅವಧಿ ಇತ್ತು. ಬಾಬಾ ಸಾಹೇಬ ಡಾ.ಬಿ.ಆರ್. ಅಂಬೇಡ್ಕರ್ ಅವರು 1942ರಿಂದ 1946ರ ಅವಧಿಯಲ್ಲಿ ಬ್ರಿಟಿಷ್ ವೈಸರಾಯ್ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸಿದ ವೇಳೆಯಲ್ಲಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಹಲವು ಕಾನೂನುಗಳನ್ನು ಜಾರಿಗೆ ತಂದರು. ಅದರಲ್ಲಿ ಬಹಳ ಮುಖ್ಯವಾಗಿ ಅದುವರೆಗೂ ಇದ್ದ 14 ಗಂಟೆ ಕೆಲಸದ ಅವಧಿಯನ್ನು ರದ್ದು ಮಾಡಿ 8 ಗಂಟೆ ದುಡಿಮೆಯ ಅವಧಿಗೆ ಇಳಿಸಿದರು. ಈ ದಿಸೆಯಲ್ಲಿ ಇಂಡಿಯಾದ ಕಾರ್ಮಿಕ ವರ್ಗ, ಬಾಬಾ ಸಾಹೇಬರಿಗೆ ಋಣಿಯಾಗಬೇಕಿದೆ.

ನಿರುದ್ಯೋಗವನ್ನು ನಿಯಂತ್ರಣಕ್ಕೆ ತರುವ ವಿಚಾರದಲ್ಲಿ ಈ ಬೇಡಿಕೆಗೆ ಮಹತ್ವ ಬಂದಿತ್ತು. ಅಷ್ಟು ಮಾತ್ರವಲ್ಲದೇ ಕಾರ್ಮಿಕರು ತಮ್ಮ ಶ್ರಮಶಕ್ತಿ ಬಳಸಿ ಇಂದು ದುಡಿದು ನಾಳೆಯೂ ಅದೇ ಶ್ರಮಶಕ್ತಿ ಮತ್ತು ಅದೇ ಚೈತ್ಯನ್ಯ–ಲವಲವಿಕೆಯಿಂದ ಕಾರ್ಖಾನೆಗೆ ದುಡಿಮೆಗೆ ಬರಬೇಕಿದ್ದಲ್ಲಿ ಆತನಿಗೆ ಹೆಚ್ಚಿನ ವಿಶ್ರಾಂತಿ ಅತ್ಯಗತ್ಯ ಎಂಬುದನ್ನು ಅಧ್ಯಯನಗಳಿಂದ ಕಂಡುಕೊಳ್ಳುವ ಪ್ರಯತ್ನವೂ ನಡೆಯಿತು. ಆದರೆ ಬಂಡವಾಳದಾರರು ಕಾರ್ಮಿಕ ಸಂಘಟನೆಗಳ ಈ ಬೇಡಿಕೆಗೆ ಕಿಮ್ಮತ್ತು ಕೊಡಲಿಲ್ಲ. ಮಾತ್ರವಲ್ಲ ಪ್ರಭುತ್ವವನ್ನು ಬಳಸಿ ಹೋರಾಟವನ್ನು ಶತಾಯಗತಾಯ ಹತ್ತಿಕ್ಕುವ ದಾಳಿಗಳನ್ನು ನಡೆಸಲಾಯಿತು. ಈ ಮಧ್ಯೆ 1867 ರಲ್ಲಿ ಇಲಿನಾಯ್ ಪ್ರಾಂತದ ಶಾಸನಸಭೆಯು ಶಾಸನ ಮಂಡಿಸಿ 8 ಗಂಟೆಗಳ ಕೆಲಸ ಕಾಯ್ದೆಬದ್ಧವೆಂದು ಘೋಷಿಸಿತು.

ಪರಿಣಾಮವಾಗಿ 8 ಗಂಟೆ ಕೆಲಸದ ಬೇಡಿಕೆಗಾಗಿ ನಡೆಯುತ್ತಿದ್ದ ಹೋರಾಟಗಳು ಮೊನಚು ಪಡೆದುಕೊಂಡವು. ಚಿಕಾಗೋ ನಗರದ ಇತಿಹಾಸದಲ್ಲೇ ಎಂದೂ ಕೇಳರಿಯದ ರೀತಿಯ ಕಾರ್ಮಿಕರ ಮೆರವಣಿಗೆಗಳು ಸಾಗಿದವು. ಹನ್ನೆರಡು ಸಾವಿರ ಕಾರ್ಖಾನೆಗಳ ಸುಮಾರು 3 ಲಕ್ಷದ 40 ಸಾವಿರ ಕಾರ್ಮಿಕರು ತಮ್ಮ ಕೆಲಸಗಳನ್ನು ನಿಲ್ಲಿಸಿ ಬೀದಿಗಿಳಿದಿದ್ದರು. ಈ ಹೋರಾಟವೇ ಮೇ 1 ಕಾರ್ಮಿಕ ದಿನದ ಘೋಷಣೆಗೆ ಕಾರಣವಾಯ್ತು ಎಂಬುದು ಇತಿಹಾಸ.

ಹೋರಾಟ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಬಾಂಬ್ ಸ್ಫೋಟಿಸುತ್ತದೆ. ಗೋಲಿಬಾರ್, ಲಾಠಿ ಚಾರ್ಜ್, ಬಂಧನ, ನರಕವನ್ನೂ ನಾಚಿಸುವಂತೆ ಪೊಲೀಸ್ ಪಾಶವೀಕೃತ್ಯ ನಡೆಯುತ್ತದೆ. ನಂತರ ವಿಚಾರಣೆಯ ನಾಟಕ ನಡೆದು 7 ಜನ ಹೋರಾಟಗಾರರನ್ನು ದೇಶದ್ರೋಹಿ, ವಿದ್ವಂಶಕ ಕೃತ್ಯ ನಡೆಸಿದರು ಎಂದು ದೂರಿ ಗಲ್ಲು ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಕೆಲವರಿಗೆ 15 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಇದು ಐತಿಹಾಸಿಕ 'ಹೇ ಮಾರ್ಕೆಟ್ ಪ್ರಕರಣ' ಎಂದು ಚರಿತ್ರೆಯಲ್ಲಿ ದಾಖಲಾಗಿದೆ. ಹೀಗಾಗಿ ಎಂಟು ತಾಸಿನ ದುಡಿಮೆಯ ಹಕ್ಕು ಕಾರ್ಮಿಕರ ಬಲಿದಾನದ ಕೊಡುಗೆಯ ಫಲಾನುಭವಿಗಳು ನಾವು.

8 ಗಂಟೆ ದುಡಿಮೆ ನೀತಿಯನ್ನು ಜಗತ್ತಿನಾದ್ಯಂತ ಇದೀಗ ಅನುಸರಿಸಲಾಗುತ್ತಿದೆ. ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಸೇಶನ್ (ಐಎಲ್‌ಓ) ಇದನ್ನು ನಿಯಮಬದ್ಧಗೊಳಿಸಿದೆ. ಮುಂದುವರಿದು, ವಿಜ್ಞಾನ ತಂತ್ರಜ್ಞಾನದಲ್ಲಿ ಆಗಿರುವ ಆವಿಷ್ಕಾರಗಳಿಂದಾಗಿ ಶರವೇಗದ ಉತ್ಪಾದನೆಗೆ ದಾರಿ ಮಾಡಿಕೊಟ್ಟಿದೆ. ಇದರ ಜತೆಯಲ್ಲೇ ಜಗತ್ತಿನಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಪ್ರಮಾಣವೂ ಹೆಚ್ಚತೊಡಗಿದೆ. (ನಿರುದ್ಯೋಗ ಬಂಡವಾಶಾಹಿ ವ್ಯವಸ್ಥೆಯ ಒಂದು ಭಾಗ ಎಂಬುದು ಬೇರೆಯಾಗಿ ಹೇಳಬೇಕಿಲ್ಲ) ಹೀಗಾಗಿ ಕೆಲಸದ ಅವಧಿಯನ್ನು ವಾರದಲ್ಲಿ 35 ಗಂಟೆ, 5 ದಿನ ದುಡಿಮೆ, ದಿನದ ದುಡಿಮೆಯನ್ನು 7 ಗಂಟೆಗೆ ಇಳಿಸಬೇಕೆಂಬ ಕೂಗು ಕೇಳಿ ಬರುತ್ತಿದೆ. ಇದಕ್ಕೆ ತದ್ವಿರುದ್ಧವಾಗಿ ರಾಜ್ಯದ ಬಿಜೆಪಿ ಸರ್ಕಾರ ಕೆಲಸ ಅವಧಿಯನ್ನು ಹೆಚ್ಚಿಸಿ ಐಎಲ್‌ಓ ನಿಯಮಾವಳಿಗೆ ವಿರುದ್ಧವಾಗಿ ನಡೆದುಕೊಂಡಿದೆ.

ಬಂಡವಾಳದಾರರು ದಿನದ ಹೆಚ್ಚುವರಿ ದುಡಿಮೆಗೆ ಹಪಹಪಿಸುವುದೇಕೆ?

ಬಂಡವಾಳಶಾಹಿ

ಪುಟ 10 ಕ್ಕೆ



ದಿನದ ದುಡಿಮೆ; ಹಾಗಂದರೇನು?

ಕಾರ್ಲ್ ಮಾರ್ಕ್ಸ್ ಅವರ ದಿ ಕ್ಯಾಪಿಟಲ್ ಕೃತಿಯಲ್ಲಿ ಹೀಗೆ ವಿಶ್ಲೇಸಿಸಲಾಗಿದೆ. ದಿನದ ದುಡಿಮೆ ಎಂದರೆ, 'ದಿನದ 24 ಗಂಟೆಯ ಅವಧಿಯಲ್ಲಿ ದುಡಿಮೆಗಾರ ತನ್ನ ಚೈತನ್ಯದ ನಿರ್ಧಿಷ್ಟ ಪ್ರಮಾಣವನ್ನಷ್ಟೇ ದುಡಿಮೆಗೆ ಮೀಸಲಿಡಲು ಸಾಧ್ಯ. ಉಳಿದ ಸಮಯವು ಶ್ರಮಶಕ್ತಿಯ ವಿಶ್ರಾಂತಿಗೆ ಮೀಸಲಾಗಿರುತ್ತದೆ. ಈ ಭೌತಿಕ ಮಿತಿಗಳ ಜತೆ ದುಡಿಮೆಯ ಅವಧಿ ಅಸಾಧ್ಯ ಎನಿಸುವಷ್ಟು ಧೀರ್ಘವಾಗದಂತೆ ನೋಡಿಕೊಳ್ಳಲು ನೈತಿಕ ಮಿತಿಗಳೂ ಇವೆ. ದುಡಿಮೆಗಾರನ ಬೌದ್ಧಿಕ ಮತ್ತು ಸಾಮಾಜಿಕ ಶಕ್ತಿಗಳಿಗಾಗಿಯೂ ದಿನದ ಒಂದಷ್ಟು ಕಾಲ ಅವಶ್ಯವಾಗಿ ಬೇಕು. ಇದು ಒಂದು ಸಮಾಜ ಎಷ್ಟು ಪ್ರಗತಿಶೀಲವಾಗಿದೆ ಎಂಬುದರ ಮೇಲೆ ನಿರ್ಧರಿಸಲ್ಪಡುತ್ತದೆ'. ಅಂದರೆ ದಿನದ ದುಡಿಮೆಯ ಅವಧಿಯನ್ನು ನಿಗದಿ ಮಾಡುವಾಗ ಸಾಮಾಜಿಕ ಅಗತ್ಯ ಮತ್ತು ಮನುಷ್ಯನ ಜೈವಿಕ ಮಿತಿಯನ್ನು ಅನುಸರಿಸಿ ನಿಗದಿಪಡಿಸುವುದು ಸಹಜ ನ್ಯಾಯವಾಗುತ್ತದೆ. ಆದರೆ ಬಂಡವಾಳಷಾಹಿ ವ್ಯವಸ್ಥೆ ತನ್ನ ಲಾಭವನ್ನಷ್ಟೇ ನೋಡುತ್ತದೆ ಹೊರತು ದುಡಿಮೆಗಾರನ ಭೌತಿಕ ಮಿತಿಗಳನ್ನು ಅದು ಅಲಕ್ಷಿಸುತ್ತದೆ. ಉದಾಹರಣೆಗೆ ಇಂಗ್ಲೆಂಡ್ ನ ಬಟ್ಟೆ ಗಿರಣಿಗಳಲ್ಲಿ ಮಹಿಳಾ ಕಾರ್ಮಿಕರು ಹಾಗೂ ಬಾಲ ಕಾರ್ಮಿಕರನ್ನು ಇವರ ಭೌತಿಕ ಮಿತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇತರೆ ಕಾರ್ಮಿಕರಂತೆಯೇ ದುಡಿಸಿಕೊಳ್ಳಲಾಗುತ್ತಿತ್ತು. ಬಂಡವಾಳದ ಕ್ರೌರ್ಯವನ್ನು ಕಾರ್ಲ್ ಮಾರ್ಕ್ಸ್ 'ಬಂಡವಾಳ ಸತ್ತ ದುಡಿಮೆ ಕಳೇಬರವಾಗಿದ್ದು, ರಕ್ತ–ಪಿಶಾಚಿಯಂತೆ ಜೀವಂತ ದುಡಿಮೆಗಾರನ ರಕ್ತವನ್ನು ಹೀರಿ ಬೆಳೆಯುತ್ತದೆ' ಎಂದು ಅತ್ಯಂತ ಕಠೋರ ಶಬ್ಧಗಳಲ್ಲಿ ಹೇಳಿದ್ದಾರೆ.



ದುಡಿಮೆ ಮತ್ತು ಮಹಿಳೆ

ವಿಮಲಾ ಕೆ.ಎಸ್.

ಹುಟ್ಟುವಾಗಲೇ ಕೈಯಲ್ಲಿ ದುಡಿತದ ಪರವಾನಗಿ ಹಿಡಿದೇ ಹುಟ್ಟುವವರು ಎಂದು ಯಾರಾದರೂ ಇದ್ದರದು ಮಹಿಳೆ. ಇದು ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಸತ್ಯ. ಕೆಲವು ವರ್ಷಗಳ ಹಿಂದೆ ಕರ್ನಾಟಕದ ಖ್ಯಾತ ಐ.ಟಿ. ಕಂಪನಿಯ ಮಾಲಿಕರು (ಮಹಿಳೆ) ತಮ್ಮ ಮನೆಯ ಕೆಲಸಗಳಿಗೆ ಸಹಾಯಕ್ಕೆಯಾರನ್ನೂ ಇಟ್ಟುಕೊಂಡಿಲ್ಲ, ಅವರೇ ಮಾಡಿಕೊಳ್ಳುತ್ತಾರೆ ಎಂಬುದು ದೊಡ್ಡ ಸುದ್ದಿಯಾಗಿತ್ತು. ಸುದ್ದಿಗೆ ಕಾರಣಗಳೇನೇ ಇರಲಿ, ಎಲ್ಲ ವರ್ಗದ ಮಹಿಳೆಯರಿಗೂ ಗೃಹಕೃತ್ಯ ಎಂಬುದು ಚರ್ಮಕ್ಕೆ ಅಂಟಿದ್ದು ಎಂಬುದನ್ನು ದೃಢಪಡಿಸುವ ಸುದ್ದಿಯಾಗಿಲ್ಲಿ ನೋಡಬಹುದು. ಈ ದುಡಿಮೆಯ ಜಾಲದಲ್ಲಿ ಸಿಕ್ಕ ಮಹಿಳೆಯ ಗಳಿಕೆಯ ಪ್ರಶ್ನೆ ಬಂದಾಗ ಅದು ಉದ್ಯೋಗಸ್ಥ ಮಹಿಳೆ ಎಂದು ವ್ಯಾಖ್ಯಾನಿಸಬಹುದು. ಹಾಗೆ ಉದ್ಯೋಗದಲ್ಲಿ ತೊಡಗುವ ಮತ್ತು ಅದರ ಮೂಲಕ ವೇತನ/ಕೂಲಿ/ಗೌರವಧನ ಎಂಬಿತ್ಯಾದಿ ಪಡೆಯುವ ಮಹಿಳೆಯರ ಮೇಲಿನ ಹೊರೆ ಮತ್ತು ಹೊಣೆಯನ್ನು ಗಮನಿಸಿದರೆ, ದೇಶದ ಸಂಪತ್ತಿನ ಸೃಷ್ಟಿಗೆ ಅವರ ಕೊಡುಗೆಯನ್ನು ಊಹಿಸಬಹುದು.

ಮಹಿಳಾ ದಿನಕ್ಕೆ ಕಹಿಬೇವು ನೀಡಿದ ಬೊಮ್ಮಾಯಿ ಸರಕಾರ:

ಈ ದಿನದ ಮಹತ್ವವನ್ನು ನಾವು ಮರೆಯುವುದಿಲ್ಲ. ಮಹಿಳೆಯರು ತಮ್ಮ ದುಡಿಮೆಯ ಅವಧಿಯನ್ನು ವೈಜ್ಞಾನಿಕವಾಗಿ 8 ಘಂಟೆಗಳಿಗೆ ನಿಗದಿ ಪಡಿಸಬೇಕೆಂಬ ಅತಿ ಮುಖ್ಯ ಅಂಶವೂ ಸೇರಿದಂತೆ ಹಲವು ಒತ್ತಾಯಗಳನ್ನು ಮುಂದಿಟ್ಟು ಜಯ ಸಾಧಿಸಿದ ಚಾರಿತ್ರಿಕ ದಿನವದು. ಈ ವರ್ಷದ ಈ ದಿನಕ್ಕೆ ಕರ್ನಾಟಕ ಸರಕಾರದ ಭರ್ಜರಿ ಕೊಡುಗೆ ಈಗಿರುವ 8 ಘಂಟೆಗಳ ದುಡಿತದ ಅವಧಿಯನ್ನು 12 ಕ್ಕೆ ಏರಿಸಿರುವುದು. ಅಷ್ಟೇ ಅಲ್ಲ, -ಕಾರ್ಖಾನೆಗಳಲ್ಲಿ ಕೆಲಸಗಾರರಿಗೆ ಯಾವುದೇ ಮಧ್ಯಂತರವಿಲ್ಲದೇ 6 ಘಂಟೆಗಳವರೆಗೆ ವಿಸ್ತರಿಸಲೂ ಅವಕಾಶ ನೀಡಲಾಗಿದೆ. ಈ ಅಯ್ಕೆಯನ್ನು ಒಪ್ಪಿಕೊಂಡರೆ 6 ಘಂಟೆಯ ನಂತರ ಹೆಚ್ಚುವರಿ ಕೆಲಸ ಮಾಡಿದರೂ ದುಪ್ಪಟ್ಟು ದರದ ಮಜೂರಿ ನೀಡಬೇಕಾಗುತ್ತದೆ. ಎಂಬಿತ್ಯಾದಿ ಗೊಂದಲಮಯ ಅಂಶಗಳಿವೆ. ದೈನಂದಿನ ಬದುಕು ನಡೆಸುವುದು ದುಸ್ತರ ಎಂಬ ಸ್ಥಿತಿಗೆ ದುಡಿದುಣ್ಣುವ ಜನರನ್ನು ನೂಕಿಯಾಗಿದೆ. ಈಗ ಮೂರು ಕಾಸಿನಾಸೆಗೆ ಮತ್ತಷ್ಟು ದುಡಿಯುವ ಮತ್ತು ಅದರ ಪರಿಣಾಮವಾಗಿ ಅನಾರೋಗ್ಯಕ್ಕೆ ತುತ್ತಾಗಿ, ಗಳಿಸಿದ ಮೂರುಕಾಸು ವೈದ್ಯರಿಗೆ ಸುರಿಯಲೂ ಸಾಲದಾಗಿ, ಸಾಲದ ಶೂಲಕ್ಕೆ ಮತ್ತೆ ಬಿದ್ದು ಏಳಲಾರದ ದಯನೀಯತೆಗೆ ತಳ್ಳುವ ಹುನ್ನಾರಿದೆ ಇಲ್ಲಿ. ಇದು ಜಂಡರ್ ನ್ಯೂಟ್ರಲ್ ಆಗಿದೆಯಾದರೂ ಮಹಿಳೆಯರ ಸ್ಥಿತಿಯತ್ತ ಒಮ್ಮೆ ಹೊರಳಿ ನೋಡಿದರೆ ಇದರ ಪರಿಣಾಮಗಳು ತೀರಾ ವಿಪರೀತವಾಗಿ ತೋರುತ್ತದೆ.

ನಿರುದ್ಯೋಗದ ಮಹಿಳೀಕರಣ:

ಹೀಗಿರುವಾಗ ಭಾರತದಲ್ಲಿ ಕಳೆದ ಇಡೀ ದಶಕದಲ್ಲಿಯೇ ಮಹಿಳೆಯರ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಲೇ ಇದೆ. ಕೊವಿಡ್ ಸಾಂಕ್ರಾಮಿಕದಲ್ಲಿ ಇದು ಇನ್ನಷ್ಟು ಹದಗೆಟ್ಟಿತು. ಕಾರ್ಮಿಕ ಶಕ್ತಿಯ ಸಮೀಕ್ಷೆಯಲ್ಲಿಯೂ ದೃಢಪಟ್ಟ ಹಾಗೆ ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ ಪುರುಷರಿಗಿಂತ ಕಡಿಮೆಯಾಗಿದೆ. ದುಡಿಯುವ ವಯೋಮಾನದ ಮಹಿಳೆಯರ ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣ 2019-20ರಲ್ಲಿ 22.2% ಇತ್ತು. 2021ರ ತ್ರೈಮಾಸಿಕದಲ್ಲಿ ಅದು 16.9% ಆಯಿತು ಎನ್ನುತ್ತದೆ ಆ ಸಮೀಕ್ಷೆಯ ವರದಿ. ಅದರ ಪ್ರಕಾರವೇ ದುಡಿಮೆಯ ವಯೋಮಾನದ ಕೇವಲ 18.6% ಮಹಿಳೆಯರು ಮಾತ್ರ ದುಡಿಮೆಯಲ್ಲಿ ತೊಡಗುತ್ತಾರೆ ಎನ್ನುತ್ತದೆ. ಇದು ಪುರುಷರಿಗಿಂತ ಮೂರು ಪಟ್ಟು ಕಡಿಮೆ ಎಂದು 2020ರ ವರದಿ ಹೇಳುತ್ತದೆ. 2010 ರಿಂದ 2022ರ ನಡುವೆ ಒಟ್ಟು ದುಡಿಯುವ ಜನರ ಪ್ರಮಾಣದಲ್ಲಿ ಮಹಿಳಾ ಉದ್ಯೋಗಿಗಳ ಬಲ 26%ನಿಂದ 19% ಗೆ ಇಳಿದಿದೆ ಎಂದು ವರದಿ ಉಲ್ಲೇಖಿಸಿದೆ.

> **ಮಹಿಳಾ ದಿನ ಓಡೋಡಿ ಬರುತ್ತಿದೆ: ಪ್ರತಿ ವರ್ಷ ಅಂತರ ರಾಷ್ಟ್ರೀಯ ಮಹಿಳಾ ದಿನ ಹತ್ತಿರ ಬಂತೆಂದರೆ ಸಾಕು. ಕಂಡು ಕೇಳದವರೆಲ್ಲ ಶುಭಾಶಯ ಕಳಿಸುವವರೆ, 'ಸ್ತ್ರೀ ಎಂದರೆ ಅಷ್ಟೇ ಸಾಕೆ' ಎಂದು ನಮ್ಮ ಮಾತೃತ್ವವನ್ನು, ವಿಶಾಲ ಹೃದಯವನ್ನು ಇನ್ನಷ್ಟು ವೈಭವೀಕರಿಸಿ ನಮ್ಮನ್ನು ನಾವೇ ಮರೆತು ಓಲಾಡುವಂತೆ ಮಾಡುವ 'ಸಹೃದಯಿಗಳು', ಈ ದಿನವನ್ನೂ ತಮ್ಮ ಲಾಭ ಹೆಚ್ಚಿಸುವ ಶುಭದಿನವನ್ನಾಗಿ ಮಾರ್ಪಡಿಸಿಕೊಳ್ಳಲು ತರಹೇವಾರಿ ಸ್ಕೀಂಗಳನ್ನು ಘೋಷಿಸುವ ಕಾರ್ಪೊರೇಟ್ ಜಗತ್ತು, ಮಹಿಳೆಯರ ನೈಜ ಅಭಿವೃದ್ಧಿಯೇನೂ ಆದ್ಯತೆಯಾಗಿ ಹೊಂದದಿದ್ದರೂ ಮಹಿಳಾ ಅಭಿವೃದ್ಧಿ ಅಥವಾ ಕಲ್ಯಾಣ ಎಂದೇ ಹೆಸರು ಹೊತ್ತಿರುವ ಇಲಾಖೆ, ಈ ಎಲ್ಲ ಕಡೆ ಸಡಗರ ಸಂಭ್ರಮ. ಅಸಲಿ ಸಂಗತಿ ಏನೆಂದರೆ ಬಹುತೇಕ ಈ ಯಾರಿಗೂ ಅಂತರ ರಾಷ್ಟ್ರೀಯ ಮಹಿಳೆಯರ ದಿನದ ನಿಜ ಚರಿತ್ರೆಯ ಗಂಧವೂ ಗೊತ್ತಿರುವುದಿಲ್ಲ ಎಂಬುದು ಕೂಡ ಸತ್ಯ. ಏನೇ ಇರಲಿ ವಿಶ್ವ ಸಂಸ್ಥೆಯ ಕರೆಯ ಮೇರೆಗೆ 1975ರಿಂದ ಬಹುತೇಕ ರಾಷ್ಟ್ರಗಳು ಈ ದಿನವನ್ನು ಆಚರಿಸುತ್ತಿವೆ ಎಂಬುದು ದಾಖಲಿಸಬೇಕಾದ ಸಂಗತಿ.**

ವಿಶ್ವ ಬ್ಯಾಂಕ್ ಪ್ರಕಾರ ಭಾರತದಲ್ಲಿ ಔಪಚಾರಿಕ ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ವಿಶ್ವದಲ್ಲೇ ಅತ್ಯಂತ ಕಡಿಮೆ. ಕೆಲವು ಅರಬ್ ದೇಶಗಳಲ್ಲಿ ಮಾತ್ರ ಇಂತಹ ದುಃಸ್ಥಿತಿ ಇದೆ. ಕೆಲಸದಲ್ಲಿ ತೊಡಗುವ ಮಹಿಳೆಯರೂ ಕೂಡಾ ಅತ್ಯಂತ ಕಡಿಮೆ ಕೂಲಿಗೆ, ಕನಿಷ್ಠ ಕೂಲಿಯ ಆಸುಪಾಸೂ ಸುಳಿಯಲಾರದಂತೆ, ಯಾವುದೇ ಸುರಕ್ಷಾ ಸೌಲಭ್ಯಗಳು ಲಭ್ಯವಿಲ್ಲದೇ, ರಜಾ, ಸಾಮಾಜಿಕ ಭದ್ರತೆಗಳೂ ಸಿಗದೇ ಅತ್ಯಂತ ದಯನೀಯ ಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆ.

ಗೃಹಕೃತ್ಯಗಳನ್ನು ದುಡಿಮೆಯ ಭಾಗವಾಗಿ ಪರಿಗಣಿಸದ ಸ್ಥಿತಿಯೂ ಇರುವುದರಿಂದ ಮತ್ತು ಹೊರಗಿನ ದುಡಿತದ ಅವಕಾಶಗಳೂ ಕ್ಷೀಣಿಸುತ್ತಿರುವುದರಿಂದ ದೇಶದ ಆರ್ಥಿಕತೆಗೆ ಮಹಿಳೆಯರ ಕೊಡುಗೆ ಶೂನ್ಯದತ್ತ ಸಾಗುತ್ತಿದೆ. ವಿದ್ಯಾವಂತ ಐವರು ಮಹಿಳೆಯರಲ್ಲಿ ಒಬ್ಬರು ಮತ್ತು ಮೂವರು ಯುವತಿಯರಲ್ಲಿ ಒಬ್ಬ ಯುವತಿ ಕೆಲಸಕ್ಕಾಗಿ ಹುಡುಕುತ್ತಿದ್ದರೂ ಕೆಲಸ ಸಿಗುತ್ತಿಲ್ಲ ಎಂಬುದು ವಾಸ್ತವ ಸಂಗತಿ. ಆದರೆ ಮಹಿಳೆಯರು ಕೆಲಸ ಮಾಡಲು ಬಯಸುತ್ತಿಲ್ಲ ಎಂದು ಸುದ್ದಿ ಹರಡಲಾಗುತ್ತಿದೆ. ಇದರ ಜೊತೆಗೆ ಮನುವಾದಿಗಳು ಹೆಣ್ಣು ಮಕ್ಕಳು ಕೌಟುಂಬಿಕ ಜವಾಬ್ದಾರಿ ನಿಭಾಯಿಸುತ್ತ ಮಕ್ಕಳನ್ನು ಹೆತ್ತುಕೊಂಡಿದ್ದರೆ ಸಾಕೆಂಬ ಮೌಲ್ಯಗಳನ್ನು ಬಿತ್ತುತ್ತಿರುವ ವಿಪರೀತಗಳಿವೆ. ಅವರಿಗೆ ಸಾಥ್ ಕೊಡುವ ಮುಸ್ಲಿಂ ಮೂಲಭೂತವಾದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕುತ್ತು ಬರುವ ರೀತಿ ರಿವಾಜುಗಳನ್ನು ಮುಂದಿಟ್ಟು ಕ್ಷುಲ್ಲಕ ರಾಜಕಾರಣ ಮಾಡುತ್ತಿದೆ. ಹೀಗೆ ಶಿಕ್ಷಣದಿಂಧ ವಂಚಿತರಾದ ಮುಸ್ಲಿಂ ಹೆಣ್ಣು ಮಕ್ಕಳು ಸಹಜವಾಗಿಯೇ ಗೃಹಾಧಾರಿತ ಅಥವಾ ಮನೆಗೆಲಸದಂತಹ ಕೆಲಸಗಳಿಗೆ ಅತ್ಯಂತ ಕಡಿಮೆ ಕೂಲಿಯ ದುಡಿಮೆಗೆ ದೂಡಲ್ಪಡುತ್ತಾರೆ. ಹೀಗೆ ವೇತನವಿಲ್ಲದೇ ದುಡಿಯುವ ಪ್ರಮಾಣವನ್ನು ಐ.ಎಲ್.ಓ. ಕೂಡಾ ಗುರುತಿಸಿದೆ. 2018ರ ಅದರ ವರದಿಯಂತೆ ಏಷ್ಯಾ ಫೆಸಿಫಿಕ್ ರಾಷ್ಟ್ರಗಳಲ್ಲಿ ಮಹಿಳೆಯರು ಪುರುಷರಿಗಿಂತ 4.1% ಪಟ್ಟು ಹೆಚ್ಚು ಸಮಯವನ್ನು ವೇತನವಿಲ್ಲದ ಆರೈಕೆ ಕೆಲಸಗಳಲ್ಲಿ ಕಳೆಯುತ್ತಾರೆ. 64 ದೇಶಗಳ ಅಂಕಿ ಅಂಶಗಳು ದಿನಕ್ಕೆ 16.4 ಶತಕೋಟಿ ಘಂಟೆಗಳಷ್ಟು ಹಣ ಪಡೆಯದ ಆರೈಕೆ ಕೆಲಸಗಳಲ್ಲಿ ಮಹಿಳೆಯರು ತೊಡಗಿರುತ್ತಾರೆ ಎಂದು ಗುರುತಿಸಿದೆ. ಎಂದರೆ ಯಾವುದೇ ಸಂಭಾವನೆ ಇಲ್ಲದೇ ದಿನಕ್ಕೆ 8 ಘಂಟೆಗಳ ಕೆಲಸ ಮಾಡುವ 2 ಶತಕೋಟಿ ಜನರಿಗೆ ಇದು ಸಮಾನವಾಗಿದೆ ಎಂದರ್ಥ.

ಪುಟ 10 ಕ್ಕೆ

ರಾತ್ರಿ ಪಾಳಿಯ ಕೆಲಸದಲ್ಲಿ ದುಡಿಯುವ ಮಹಿಳೆಯರ ಸಂಕಷ್ಟಗಳು

ಹೆಚ್.ಎಸ್.ಸುನಂದ

ದುಡಿಯುವ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಕಾರ್ಖಾನೆ ಕಾಯ್ದೆ 1948 ಕ್ಕೆ ತಿದ್ದುಪಡಿ ಮಾಡಿ ವಿಧೇಯಕ 2023ನ್ನು ಬಂಡವಾಳಗಾರರ ಲಾಭಕ್ಕಾಗಿ ಮಾಲಿಕರ ಪರ ರಾಜ್ಯ ಬಿ.ಜೆ.ಪಿ. ಸರ್ಕಾರ ವಿದಾನ ಸಭೆಯಲ್ಲಿ ಮಂಡಿಸಿತು. ದುಡಿಯುವ ಜನತೆಯ ಹಾಗೂ ಕಾರ್ಮಿಕ ಸಂಘಟನೆಗಳಿಗೂ ಚರ್ಚಿಸಲು ಅವಕಾಶ ನೀಡದೇ ವಿದಾನ ಸಭೆಯಲ್ಲಿಯೇ ವಿರೋಧ ವ್ಯಕ್ತ ಪಡಿಸಿದರು ಲೆಕ್ಕಿಸದೇ ಏಕ ಪಕ್ಷೀಯವಾಗಿ ಅಂಗೀಕರಸಿರುವುದು ಬಿ.ಜೆ.ಪಿ. ಸರ್ಕಾರದ ಮಹಿಳಾ ವಿರೋಧಿ ನಡೆಯಾಗಿದೆ.

ಈಗಾಗಲೇ ಕೋವಿಡ್ ಸಂದರ್ಭದಲ್ಲಿ ಉದ್ಯೋಗ ಕಡಿತಮಾಡಿ ಮತ್ತೆ ಕಡಿಮೆ ವೇತನಕ್ಕೆ ದುಡಿಸಿಕೊಂಡು ಅಧಿಕ ಉತ್ಪಾದನೆ ಮಾಡಿಸಿಕೊಳ್ಳುವುದರ ಇತ್ತೀಚಿನ ಅವಧಿಯಲ್ಲಿ ಹೆಚ್ಚಾಗಿದೆ. ಸಾರಿಗೆ ಸೌಲಭ್ಯ, ಕ್ಯಾಂಟೀನ್, ಪ್ರತ್ಯೇಕ ಶೌಚಾಲಯ, ವಿಶ್ರಾಂತಿ ಕೊಠಡಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ದುಡಿಸಿಕೊಳ್ಳುವ ಕೈಗಾರಿಕೆಗಳು, ಗಾರ್ಮೆಂಟ್‌ಗಳು ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರಾತ್ರಿಪಾಳಿ ಕೆಲಸದ ವಿಧೇಯಕ ಮಂಡನೆಯಿಂದ ದುಡಿಯುವ ಮಹಿಳೆಯ ಮೇಲೆ ಮತ್ತಷ್ಟು ಮಾಲೀಕರ ಹಿಡಿತ, ಶೋಷಣೆ, ದಬ್ಬಾಳಿಕೆ ಹೆಚ್ಚಾಗಲಿದೆ. ಸರ್ಕಾರಗಳು ದುಡಿಯುವ ಮಹಿಳೆಯರಿಗೆ ಸುರಕ್ಷತೆ, ಸೂಕ್ತ ಭದ್ರತೆ ಒದಗಿಸದೇ ರಾತ್ರಿ ಪಾಳಿ ಕೆಲಸ ಜಾರಿಗೆ ಮುಂದಾಗಿರುವುದರಿಂದ ಮಹಿಳೆಯರು ಮತ್ತಷ್ಟು ಅಭದ್ರತೆಗೆ, ಬೀದಿಕೋರರ ದಾಳಿಗೆ ತುತ್ತಾಗಲೂ ಸರ್ಕಾರವೇ ಎಡೆ ಮಾಡಿಕೊಟ್ಟಿದೆ.



ಕೆಲಸಕ್ಕೆ ಹೋಗಬೇಕಾದರೆ ಗಾರ್ಮೆಂಟ್ಸ್‌ಗಳಲ್ಲಿ, ಸಣ್ಣ-ಪುಟ್ಟ ಕೈಗಾರಿಕೆಗಳಲ್ಲಿ ವಾಹನ ವ್ಯವಸ್ಥೆ ಇಲ್ಲ, ಹೇಗೆ ಹೋಗಬೇಕು? ಕೆಲವೆಡೆ I.T. & B.T ಗಳಲ್ಲಿ ವಾಹನ ಸೌಲಭ್ಯ ಇದ್ದಗ್ಯೂ ಚಾಲಕರಿಂದಲೇ ಅತ್ಯಾಚಾರ ಆದ ಪ್ರಕರಣಗಳು ನಮ್ಮ ಮುಂದೆ ಇದೆ. ಅಂತಹದರಲ್ಲಿ ರಾತ್ರಿಪಾಳಿಗೆ ಹೇಗೆ ಹೋಗಬೇಕು? ಪಾಳಿ ಮುಗಿಸಿ ಹೇಗೆ ಬರಬೇಕೆಂಬ ಪ್ರಶ್ನೆ ಇದೆ. ಅದೂ ಅಲ್ಲದೇ ಸರ್ಕಾರ ತನ್ನ ಮಹಿಳಾ ವಿರೋಧಿ ನೀತಿಯನ್ನ ಮರೆ ಮಾಚಿಕೊಳ್ಳಲು "ಸ್ವ ಇಚ್ಚೆಯಿಂದ" ಎಂಬ ಪದ ಬಳಕೆ ಕೇವಲ ನಾಮಕಾವಸ್ತೆಯೇ ಆಗಿದೆ. ಯಾವ ಮಾಲೀಕನೂ ಕಾರ್ಮಿಕರಿಗೆ ಅವರ ಸ್ವ ಇಚ್ಚೆಗೆ ಅವಕಾಶ ನೀಡುವುದೇ ಇಲ್ಲ. ಉದ್ಯೋಗ ಕಡಿತಗೊಳಿಸುವ ಸಲುವಾಗಿ ಆದರೂ ಒತ್ತಡ ಹೇರಿ ಭಯಪಡಿಸಿ ಜೀವನದ ಅನಿವಾರ್ಯತೆಗಾಗಿ ಅಪಾಯಗಳ ಅರಿವಿದಾಗ್ಯೂ ದುಡಿಯಲೇ ಬೇಕಾದ ಪರಿಸ್ಥಿಗೆ ದೂಡಲಿದೆ. ಮನೆ ಒಳಗೂ ಮಹಿಳೆಗೆ ಕೆಲಸ ಮಕ್ಕಳ ಲಾಲನೆ-ಪಾಲನೆ, ಕುಟುಂಬದ ಪೋಷಣೆ, ಹೊರಗಡೆಯ ದುಡಿತದಿಂದ ಹೈರಾಣಾದ ಮಹಿಳೆಯರಿಗೆ ಈಗಾಗಲೇ ಸಹಜವಾಗಿ ಅನಾರೋಗ್ಯ ಕಾಡುತ್ತಿರುತ್ತದೆ.

ಕೆಲವು ಕೈಗಾರಿಕೆಗಳಲ್ಲಿ ನಿಂತೇ ಕೆಲಸ ಮಾಡಬೇಕು, ಮುಟ್ಟಾದ ಸಂದರ್ಭದಲ್ಲಿಯೂ ಕೂಡ ವಿನಾಯಿತಿ ದೊರೆಯುವುದಿಲ್ಲ. ಒಟ್ಟಿಗೆ ಊಟಕ್ಕೂ ಹೋಗದೇ ಅದಕ್ಕೂ ಪಾಳಿಯ ಮೇಲೆ ದುಡಿಸಿಕೊಳ್ಳುವ ಅವರ ಶ್ರಮವನ್ನ ಲೂಟಿ ಮಾಡುತ್ತಿರುವ ಮಾಲೀಕರ ಪರ ತಿದ್ದುಪಡಿಯಿಂದ ದುಡಿಯುವ ಮಹಿಳೆಯರನ್ನು ಶೋಷಿಸಲು ನೇರವಾಗಿ ದಾರಿಮಾಡಿಕೊಟ್ಟಿದೆ. ಈಗಾಗಲೇ ಸಾರಿಗೆಯಲ್ಲಿ, ಆರೋಗ್ಯ, ಪೊಲೀಸ್

ಪುಟ 11 ಕ್ಕೆ

ದುಡಿಮೆಯ ಅವಧಿ 12 ಗಂಟೆಗೆ ಏರಿಕೆ...... ಪುಟ 8 ರಿಂದ


ವ್ಯವಸ್ಥೆಯು ಯಾವಾಗಲೂ ದಿನದ ಹೆಚ್ಚುವರಿ ದುಡಿಮೆಗೆ ಹಾತೊರೆಯುತ್ತದೆ! ಬಂಡವಾಳ ಎಂದೂ ಕುಂತಲ್ಲಿ ಕೂರುವುದಿಲ್ಲ! ಇನ್ನಷ್ಟು ಮತ್ತಷ್ಟೂ ಬೆಳೆಯಲು ಅದು ಹವಣಿಸುತ್ತದೆ. ಲಾಭವೇ ಬಂಡವಾಳದ ಬೆಳವಣಿಗೆಯ ಪಾತುಪತಾಸ್ತ್ರ! ಈ ಲಾಭದ ಮೂಲ ಇರುವುದು ಹೆಚ್ಚುವರಿ ದುಡಿಮೆ ಎಂಬ ಮಿಗುತಾಯ ಮೌಲ್ಯದಲ್ಲಿ! ಕಾರ್ಲ್ ಮಾರ್ಕ್ಸ್ ಮಿಗುತಾಯ ಮೌಲ್ಯದ ಕುರಿತು 'ಮಿಗುತಾಯ ಮೌಲ್ಯಗಳನ್ನು ಸೃಷ್ಟಿಸುವುದು ಹಾಗೂ ಸಾಧ್ಯವಾದಷ್ಟು ಗರಿಷ್ಠ ಮಿಗುತಾಯ ದುಡಿಮೆಯನ್ನು ತನ್ನ ಸ್ಥಿರ ಅಂಗವಾದ ಉತ್ಪಾದನಾ ಸಾಧನಗಳು ಅರಗಿಸಿಕೊಳ್ಳುವಂತೆ ಮಾಡುವುದೇ ಬಂಡವಾಳದ ಏಕೈಕ ಜೀವ ಸೆಲೆ' ಎಂದು ವಿಶ್ಲೇಷಿಸಿದ್ದಾರೆ. ಜತೆಗೆ 'ದಿನದ ಕೆಲದ ಅವಧಿಯನ್ನು ಹೆಚ್ಚಿಸುವುದರಿಂದ ಪಡೆದ ಮೌಲ್ಯವು ಪರಮ ಮಿಗುತಾಯ ಮೌಲ್ಯ' ಎನ್ನುತ್ತಾರೆ. ಹೀಗಾಗಿ ಬಂಡವಾಳದಾರರು ತಮ್ಮ ಸೂಪರ್ ಲಾಭಕ್ಕಾಗಿ ಕಾರ್ಮಿಕರಿಂದ ಹೆಚ್ಚುವರಿ ದುಡಿಮೆಯನ್ನು ಸದಾ ಬೇಡುತ್ತಾರೆ.

ತರಾತುರಿಯ ಏಕಪಕ್ಷೀಯ ನಿರ್ಧಾರ:

ಸರ್ಕಾರ ಇಂತಹ ಮಹತ್ವದ ಕಾಯ್ದೆಯೊಂದಕ್ಕೆ ತಿದ್ದುಪಡಿ ತರುವ ಮುನ್ನ ಕಾರ್ಮಿಕ ಸಂಘಟನೆಗಳೊಂದಿಗೆ ಕನಿಷ್ಟ ಚರ್ಚಿಸಬೇಕಿತ್ತು. ಸಾಧಕ–ಬಾಧಕಗಳ ಬಗ್ಗೆ ಚಿಂತಿಸಿ, ತಜ್ಞರ ಜತೆ ಸಮಾಲೋಚಿಸಿ ತೀರ್ಮಾನಕ್ಕೆ ಬರುವುದು ಜವಾಬ್ದಾರಿ ಇರುವವರ ನಡೆ. ಆದರೆ ಬೊಮ್ಮಾಯಿ ಅವರು ಚುನಾವಣೆ ಹೊಸ್ತಿಲಲ್ಲಿ ಇರುವಾಗ ಕಾಯ್ದೆಗೆ ತರಾತುರಿಯಲ್ಲಿ ತಿದ್ದುಪಡಿ ತರುವ ತುರ್ತು ಏನಿತ್ತು ಎಂಬುದನ್ನು ಈವರೆಗೂ ಹೇಳಿಲ್ಲ. ನಿರುದ್ಯೋಗದ ಪ್ರಮಾಣ ಏರುತ್ತಿರುವುದನ್ನು ಅವರದೇ ಅಂಕಿಅಂಶಗಳು ದೃಢಪಡಿಸಿವೆ. ಹೀಗಿದ್ದೂ ಶಾಸನ ಸಭೆಯಲ್ಲೂ ಚರ್ಚೆಯನ್ನೇ ನಡೆಸದೇ ಕಾಯ್ದೆ ಪಾಸು ಮಾಡಲಾಗಿದೆ.

12 ಗಂಟೆ ಕೆಲಸದ ಅವಧಿಯಿಂದ ಕಾರ್ಮಿಕರು ಮತ್ತು ಕಾರ್ಖಾನೆ ಅವಲಂಬಿತರಿಗೆ ಒದಗುವ ಅಪಾಯಗಳು:

1. ಮನೆಯಿಂದ ಕೆಲಸದ ಸ್ಥಳ ತಲುಪುವ ಪ್ರಯಾಣದ ವೇಳೆ ಸೇರಿ ಅವನ/ಳ ವಿಶ್ರಾಂತಿಗೆ ಅವಕಾಶ ಇರುವುದಿಲ್ಲ.
2. ಕಾರ್ಮಿಕನ/ಳ ಕೆಲಸದ ಸಮಯದಲ್ಲಿ ಮಧ್ಯಂತರ ವಿಶ್ರಾಂತಿಯನ್ನು 5 ಗಂಟೆ ಬದಲಾಗಿ 6 ಗಂಟೆಯ ನಂತರ ನೀಡುವುದರಿಂದ ದುಡಿಮೆಯ ಸಾಮರ್ಥ್ಯ ಕ್ಷೀಣಿಸುತ್ತದೆ.
3. ಇದು ಕಾರ್ಮಿಕನ/ಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.
4. ಹೆಚ್ಚಿನ ಸಮಯ ಕಾರ್ಖಾನೆಯಲ್ಲೇ ಕಳೆಯುವುದರಿಂದ ಕುಟುಂಬದ ಜತೆಗಿನ ಸಂಬಂಧಗಳು ಸಡಿಲಗೊಳ್ಳುತ್ತವೆ ಮತ್ತು ಇವುಗಳಿಂದಾಗಿ ಭವಿಷ್ಯದಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ.
5. ಈಗಿರುವ ಮೂರು ಪಾಳಿ (ಶಿಫ್ಟ್) ಬದಲಾಗಿ ಎರಡು ಪಾಳಿಯಲ್ಲೇ ಅಗತ್ಯವಿರುವ ಉತ್ಪಾದನೆ ಆಗುವುದರಿಂದ ಹೆಚ್ಚುವರಿ (Surplus) ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಗುತ್ತದೆ. ಇದರಿಂದ ಕಾರ್ಮಿಕರ ಕುಟುಂಬಗಳು ಬೀದಿಗೆ ಬೀಳುತ್ತವೆ.
6. ಹೆಚ್ಚುವರಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುವಾಗ ಹೆಚ್ಚು ವೇತನ ಪಡೆಯುವ ಖಾಯಂ ಕಾರ್ಮಿಕರನ್ನು ಟಾರ್ಗೆಟ್ ಮಾಡಿ ತೆಗೆಯಲಾಗುತ್ತದೆ. ಕಾರ್ಖಾನೆಯಲ್ಲಿ ಪೂರ್ತಿಯಾಗಿ ಖಾಯಂಯೇತರ ಕಾರ್ಮಿಕರಿಂದ ಕಡಿಮೆ ಕೂಲಿಗೆ ದುಡಿಸಿಕೊಳ್ಳಲಾಗುತ್ತದೆ.
7. ಆರು ದಿನಗಳ ಕೆಲಸದ ಬದಲಾಗಿ ನಾಲ್ಕು ದಿನ ಮತ್ತು ಎರಡು ಪಾಳಿಯಲ್ಲಿ ಮಾತ್ರವೇ ಕೆಲಸ ನಡೆಯುವುದರಿಂದ ಅವಲಂಬಿತ ಉದ್ಯೋಗಿಗಳು ನಿರುದ್ಯೋಗಿಗಳಾಗುತ್ತಾರೆ. ಉದಾಹರಣೆಗೆ ಕ್ಯಾಂಟೀನ್ ನಡೆಸುವವರು ಮತ್ತು ಇಲ್ಲಿನ ಕಾರ್ಮಿಕರು, ಟ್ಯಾಕ್ಸಿ, ಕ್ಯಾಬ್ ಚಾಲಕರು, ಸಣ್ಣಪುಟ್ಟ ಚಿಲ್ಲರೆ ವ್ಯಾಪಾರಿಗಳು ಉದ್ಯೋಗ ನಷ್ಟಕ್ಕೆ ಒಳಗಾಗುತ್ತಾರೆ.
8. ಮಹಿಳೆಯರಿಗೆ ರಾತ್ರಿ ಪಾಳಿಗೆ ಅವಕಾಶ ಮಾಡಿಕೊಟ್ಟಿರುವುದರಿಂದ ಅವರ ಸುರಕ್ಷತೆ ಸಮಸ್ಯೆಗಳು ಉದ್ಭವಿಸಲಿವೆ. ಮಹಿಳೆಯರ ಮೇಲೆ ಹಿಂಸೆ, ದೌರ್ಜನ್ಯ, ಲೈಂಗಿಕ ಕಿರುಕುಳ, ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರ ಸುರಕ್ಷತೆಯ ಹೊಣೆಯನ್ನು ಯಾರು ಹೊರುತ್ತಾರೆ ಎಂಬ ಪ್ರಶ್ನೆಗೆ ಸ್ಪಷ್ಟತೆ ಇಲ್ಲ.



ಈ ತಿದ್ದುಪಡಿಯಿಂದ ಮಾಲೀಕರಿಗೆ ಆಗುವ ಅನುಕೂಲಗಳೇನು?

1. 12 ಗಂಟೆ ಕೆಲಸದ ಅವಧಿಯ ಎರಡು ಶಿಫ್ಟ್ ಗಳಲ್ಲಿ ತನಗೆ ಅಗತ್ಯವಿರುವ ಉತ್ಪಾದನೆಯನ್ನು ತೆಗೆಯುವುದರಿಂದ ಮಾಲೀಕರ ಉತ್ಪಾದನಾ ವೆಚ್ಚ ತಗ್ಗುತ್ತದೆ (Operational Expense) ಇದರಿಂದ ಹೆಚ್ಚು ಲಾಭ ದೊರೆಯುತ್ತದೆ.
2. ಹೆಚ್ಚುವರಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುವುದರಿಂದ ಕಾರ್ಮಿಕರ ವೇತನದ ಪಾಲು ಮಾಲೀಕರ ಪಾಲಾಗುತ್ತದೆ.
3. ಎರಡೇ ಶಿಫ್ಟ್ ಗಳು ಇರುವುದರಿಂದ ಸಾರಿಗೆ ವೆಚ್ಚ, ಕ್ಯಾಂಟೀನ್ ಇತ್ಯಾದಿ ವೆಚ್ಚಗಳು ಮಾಲೀಕರಿಗೆ ಉಳಿತಾಯ ಆಗಲಿದೆ.
4. ಕಡಿಮೆ ಅವಧಿಯಲ್ಲಿ ಉತ್ಪಾದನೆ ಆಗುವುದರಿಂದ ಹೆಚ್ಚುವರಿ ಕೆಲಸ (Over time) ನೀಡಬೇಕಿದ್ದ ಎರಡು ಪಟ್ಟು (Incentive) ಮಾಲೀಕರಿಗೆ ಉಳಿತಾಯ ಆಗಲಿದೆ.

ಹೊಸ ಕಾಯ್ದೆಯಂತೆ ಬಿಡದಿಯಲ್ಲಿ ಕೆಲಸ ಮಾಡುವ ಬಾಷ್ (ಮೈಕೋ) ಕಾರ್ಮಿಕನೊಬ್ಬ ಇದೀಗ ತನ್ನ ಹದಿನೇಳುವರೆ ಗಂಟೆ ಸಮಯವನ್ನು ಫ್ಯಾಕ್ಟರಿಗಾಗಿ ಮೀಸಲಿಡಬೇಕು! ಇದು ಎಲ್ಲ ಕಾರ್ಮಿಕರ ಕಥೆಯೂ ಹೌದು. 'ಬಂಡವಾಳಷಾಹಿ ವ್ಯವಸ್ಥೆ ಕಾರ್ಮಿಕರನ್ನು ಯಂತ್ರಗಳಂತೆಯೇ ನೋಡುತ್ತದೆ, ಮನುಷ್ಯರಂತೆ ಅದು ನೋಡುವುದಿಲ್ಲ!' ರಾಜ್ಯ ಸರ್ಕಾರದ ಈ ತಿದ್ದುಪಡಿ, ಮಾಲೀಕರು ತಮ್ಮ ಲಾಭ ಹೆಚ್ಚಿಸಿಕೊಳ್ಳಲು ದಾರಿ ಮಾಡಿಕೊಟ್ಟಿದೆ ವಿನಃ, ಇದರಲ್ಲಿ ಕಾರ್ಮಿಕರ ಹಿತಾಸಕ್ತಿ ಎಳ್ಳಷ್ಟೂ ಇಲ್ಲ. ಮಾಲೀಕರ ಹಿತಕ್ಕಾಗಿ ಕಾರ್ಮಿಕರನ್ನು ಬಲಿ ನೀಡುವ ಈ ಕಾಯ್ದೆಯನ್ನು ಒಪ್ಪಿಕೊಳ್ಳಬೇಕೇಕೆ?

ದುಡಿಮೆ ಮತ್ತು ಮಹಿಳೆ... ಪುಟ 9 ರಿಂದ

ಒಂದು ಘಂಟೆಯ ಕನಿಷ್ಟ ಕೂಲಿಯ ಆಧಾರದಲ್ಲಿ ಅದನ್ನು ಮೌಲ್ಯೀಕರಿಸಿದರೆ ಅವು ಜಾಗತಿಕ ಜಿ.ಡಿ.ಪಿ.ಯ 9% ಅಥವಾ 11 ಟ್ರಿಲಿಯನ್ ಅಮೇರಿಕನ್ ಡಾಲರ್ ಆಗುತ್ತದೆ. ಇದು ಜಾಗತಿಕ ಚಿತ್ರಣ. ಈ ಮೇಲೆ ನಾವು ನೋಡಿದಂತೆ ಭಾರತದ ಮಹಿಳೆಯರು ದುಡಿಮೆಯ ಕ್ಷೇತ್ರದಿಂದ ದೊಡ್ಡ ಪ್ರಮಾಣದಲ್ಲಿ ಹೊರತಳ್ಳಲ್ಪಟ್ಟಿದ್ದಾರೆ. ಆದ್ದರಿಂದಲೇ ಭಾರತದಲ್ಲಿ ವೇತನ/ಕೂಲಿ ಇಲ್ಲದೆಯೇ ಕೆಲಸ ಮಾಡುವ ಪ್ರಮಾಣವು ಹಿಂದಿಗಿಂತ ಹೆಚ್ಚಾಗಿದೆ ಎಂದು ಅರ್ಥಮಾಡಿಕೊಳ್ಳಬಹುದು.

ನಿರುದ್ಯೋಗದ ದವಡೆಗೆ ಸಿಕ್ಕ ಯುವ ಸಂಪನ್ಮೂಲ:

ಈ ಸಧ್ಯದ ಸ್ಥಿತಿಯಲ್ಲಿ ಸಾಮಾನ್ಯವಾಗಿ ಉದ್ಯೋಗಗಳ ಕೊರತೆ ಮಾತ್ರವಲ್ಲ ವಿಶೇಷವಾಗಿ ಯುವಜನರಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಿರುವುದು ನಿಜಕ್ಕೂ ಆತಂಕಕಾರಿ ಸಂಗತಿ. ಈ ನಿರುದ್ಯೋಗಿ ಯುವಜನರಲ್ಲಿ ಯುವತಿಯರೇ ಹೆಚ್ಚು. ವಿಶ್ವ ಬ್ಯಾಂಕ್ ನ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞರಾದ ಕೌಶೀಕ್ ಬಸು ರವರ ಮಾತಿನಲ್ಲಿ ಹೇಳುವುದಾದರೆ 'ಭಾರತದ ದೊಡ್ಡ ಸವಾಲೆಂದರೆ ಯುವ ಜನರ ನಿರುದ್ಯೋಗ. ಅದು 24%ಗಿಂತ ಹೆಚ್ಚಿದ್ದು ವಿಶ್ವದಲ್ಲಿಯೇ ಅತಿ ಹೆಚ್ಚು'.

ಇಂತಹ ಪರಿಸ್ಥಿತಿ ಇರುವಾಗ ಕರ್ನಾಟಕ ಸರಕಾರ ದುಡಿಮೆಯ ಕ್ಷೇತ್ರಕ್ಕೆ ಬಲ ತುಂಬುವ, ಆರ್ಥಿಕ ಚಟುವಟಿಕೆಗಳು ಮತ್ತು ಉದ್ಯೋಗಾವಕಾಶ ಸೃಷ್ಟಿಸುವ(!) ಎಂದು ಸಮರ್ಥನೆ ಮಾಡಿಕೊಳ್ಳುತ್ತ ದಿನದ ದುಡಿತದ ಅವಧಿಯನ್ನು 4 ಘಂಟೆ ಹೆಚ್ಚಿಸಿದೆಯಲ್ಲದೇ, ವಿಶ್ರಾಂತಿಯೂ ಇಲ್ಲದೆಯೇ ನಿರಂತರ 6 ಘಂಟೆಗಳ ದುಡಿತದ ಅವಕಾಶದ ಪ್ರಸ್ತಾಪವನ್ನೂ ಇಟ್ಟಿದೆ. ಹಾಗೆ ನಿರಂತರವಾಗಿ ಕೆಲಸ ಮಾಡಲು ಬಹುಷಃ ಯಂತ್ರಮಾನವರಿಗೂ ಸಾಧ್ಯವಾಗಲಿಕ್ಕಿಲ್ಲ. ಮನೆಯೊಳಗೆ ಅಡುಗೆ ಒಲೆ ಉರಿಯಬೇಕೆಂದರೆ ಎಂತಹ ಸ್ಥಿತಿಯಲ್ಲಿಯೂ ಕೆಲಸ ಮಾಡಲು ಸಿದ್ಧರಾಗಬೇಕಾದ ಅನಿವಾರ್ಯತೆಯಲ್ಲಿ ಇರುವ ಮಹಿಳೆಯರು, ಈ ಹೆಚ್ಚುವರಿ ಕೆಲಸದ ಅವಧಿಗಾಗಿ ಸಿಗಬಹುದಾದ ಹೆಚ್ಚುವರಿ ವೇತನದ ಆಸೆಗೆ ಹಾಗೊಮ್ಮೆ ಕೆಲಸಕ್ಕೆ ತೊಡಗಿಕೊಂಡರೆ, ಅದು ಅವರ ಮೇಲೆ ಎಂತಹ ಪರಿಣಾಮ ಬೀರಬಹುದು. ಗಾರ್ಮೆಂಟ್ಸ್ ನಂತಹ ಕ್ಷೇತ್ರಗಳಲ್ಲಿ ಈಗಾಗಲೇ ಡೆಡ್ ಲೈನ್, ಡಿಮ್ಯಾಂಡ್ ಪೂರೈಕೆ ಇತ್ಯಾದಿಗಳ ಕಾರಣಕ್ಕಾಗಿ ಸಾಧ್ಯವಿದ್ದರೂ ಇಲ್ಲದಿದ್ದರೂ ಓ.ಟಿ. ಮಾಡಲೇಬೇಕಾದ ಒತ್ತಡವಿದೆ. ಈಗ ಅಧಿಕೃತವಾಗಿಯೇ 12 ಘಂಟೆಗಳ ಕೆಲಸ ಎಂದು ಬಂದ ಮೇಲೆ ಅನಿವಾರ್ಯವಾಗಿ ಯಂತ್ರಗಳ ಮೇಲೆ ಕೆಲಸ ಮಾಡುವ ಒತ್ತಾಯಕ್ಕೆ ಒಳಗಾಗುತ್ತಾರೆ. ಅದರ ನೇರ ಪರಿಣಾಮ ಅವರ ಕಣ್ಣುಗಳ ಶಕ್ತಿ ಕ್ಷೀಣಿಸುತ್ತವೆ. ಬೆನ್ನು ಕುತ್ತಿಗೆಗಳ ಸ್ನಾಯುಗಳು ದುರ್ಬಲಗೊಳ್ಳುತ್ತವೆ. ಸಹಜ ಜೈವಿಕ ಕ್ರಿಯೆಗಳಾದ ಮುಟ್ಟು, ಬಸಿರು, ಮುಟ್ಟು ನಿಲ್ಲುವಾಗಿನ ಹಾರ್ಮೋನಲ್ ಏರು ಪೇರುಗಳು, ಮಾನಸಿಕ ಒತ್ತಡಗಳೂ ತೀವ್ರವಾಗಿ ಬಾದಿಸುತ್ತವೆ. ಇದರ ಜೊತೆಯೇ ಕೌಟುಂಬಿಕ ಕೆಲಸದ ಒತ್ತಡಗಳು ಬಹತೇಕ ತಪ್ಪಿಸಿಕೊಳ್ಳುವ ಸಾಧ್ಯತೆಗಳೇ ಇಲ್ಲದ ಮಹಿಳೆಯರೇ ಹೆಚ್ಚಿದ್ದು ಅವರ ಬದುಕು ಅಕ್ಷರಶಃ ನರಕವಾಗಲಿದೆ. ಇದು ಕೇವಲ ಗಾರ್ಮೆಂಟ್ಸ್ ಮಾತ್ರವಲ್ಲ ಎಲ್ಲ ವಿಭಾಗದ ಮಹಿಳಾ ಕಾರ್ಮಿಕರು, ನೌಕರರನ್ನು ಬಾಧಿಸುವ ಪ್ರಶ್ನೆಯಾಗಲಿದೆ. ಹಾಗಾಗಿ ಈಗಾಗಲೇ ಉದ್ಯೋಗದ ಕ್ಷೇತ್ರದಲ್ಲಿ ಕ್ಷೀಣಿಸುತ್ತಿರುವ ಮಹಿಳೆಯರ ಪಾಲ್ಗೊಳ್ಳುವಿಕೆ ಇನ್ನಷು ಅಧೋಗತಿಗೆ ಇಳಿಯಲಿದೆ.

ಉದ್ಯೋಗಾವಕಾಶ ಹೆಚ್ಚಳವೋ ಮಾಲೀಕರ ಥೈಲಿ ತುಂಬುವ ಆತುರವೋ:

ಸರಕಾರ ಹೇಳಿಕೊಂಡಂತೆ ಇದು ಉದ್ಯೋಗಾವಕಾಶ ಹೆಚ್ಚಿಸುವಿಕೆಯಲ್ಲ ಬದಲು ಚುನಾವಣೆಯ ಹೊಸ್ತಿಲಲ್ಲಿ ಮಾಲಿಕರಿಗೆ ಮೃಷ್ಟಾನ್ನ ಭೋಜನ ಉಣಿಸುವ ಮತ್ತು ಅದಕ್ಕೆ 'ಯಥಾನುಶಕ್ತಿ' ಪ್ರತಿಫಲ ಪಡೆಯುವ ಸಂಚು ಇದು. ಕೊವಿಡ್ ಸಂಕಷ್ಟದ ಹೊಡೆತದಿಂದ ದುಡಿಯುವ ಜನ ಇನ್ನೂ ಚೇತರಿಸಿಕೊಂಡಿಲ್ಲದಾಗ, ಅದರ ದೊಡ್ಡ ಪೆಟ್ಟು ಮಹಿಳಾ ಸಮೂಹಕ್ಕೆ ಬಿದ್ದಿರುವಾಗ ಅದಕ್ಕನುಗುಣವಾಗಿ ಸಹಾಯ ಹಸ್ತ ಚಾಚುವ ಬದಲು, ತನ್ನ ಅವಧಿಯ ಕೊನೆಯ ಅಧಿವೇಶನದ ಬಹುತೇಕ ಕೊನೆಯಲ್ಲಿ ಬೊಮ್ಮಾಯಿ ಸರಕಾರ ಇಟ್ಟಿದ್ದು ರಾಜ್ಯದ ದುಡಿಯುವ ಜನರ ಅದರಲ್ಲಿಯೂ ಮಹಿಳೆಯರ ಬದುಕಿಗೆ ಉರಿಯುವ ಕೊಳ್ಳಿಯನ್ನು.

ಶತಮಾನದ ಹಿಂದೆ ದುಡಿಯುವ ಮಹಿಳೆಯರೇ ಬೀದಿಗಿಳಿದು ಹೋರಾಟ ಮಾಡಿ ಗಳಿಸಿಕೊಂಡ 8 ಘಂಟೆಯ ಕೆಲಸದ ಅವಧಿಯ ಹಕ್ಕು ಹೀಗೆ ಒಂದು ಸೋ ಕಾಲ್ಡ್ ಪ್ರಜಾಪ್ರಭುತ್ವ ದೇಶದಲ್ಲಿ ವಿಧಾನಸಭೆಯಲ್ಲಿ ಮಸೂದೆಯಾಗಿ ಮಂಡಿತವಾಗಿ ಅಂಗೀಕಾರಗೊಳ್ಳುತ್ತದೆ. ಅದೂ ಬೆಳಗಾದರೆ ಬರುವ ಅಂತರರಾಷ್ಟ್ರೀಯ ಮಹಿಳಾ ದಿನದ ಮುನ್ನಾ ದಿನ.

ಪ್ರಜಾಪ್ರಭುತ್ವದಲ್ಲಿ ನಮಗಿರುವ ಒಂದು ಸಶಕ್ತ ಅಸ್ತ್ರವೆಂದರೆ ಮತದಾನ. ಜನರ ಬದುಕಿಗೆ ಕೊಳ್ಳಿ ಇಟ್ಟು ಮಾಲಿಕರು ಮತ್ತು ಉಳ್ಳವರ ಥೈಲಿ ತುಂಬಿಸುವ ಅಧಿಕಾರದಾಹಿ, ಮನುವಾದಿ ಬಿ.ಜೆ.ಪಿ.ಯನ್ನು ಸೋಲಿಸಿ ಮೂಲೆಯಲ್ಲಿ ಕೂರಿಸುವುದೊಂದೇ ದಾರಿ. ಈಗ ಮರೆತರೆ ಮತ್ತೆ ಅವಕಾಶ ದೊರೆಯದಾದೀತು. ಎಚ್ಚರದಲ್ಲಿರೋಣ.

ಏರಿದ ನಿರುದ್ಯೋಗ ಕುಸಿದ ಬದುಕು:

ಅಧಿಕೃತ ಅಂಕಿ ಅಂಶಗಳನ್ನು ಪ್ರಕಟಿಸುವ ಹಲವು ವರದಿಗಳು ಇತ್ತೀಚಿನ ವರ್ಷಗಳಲ್ಲಿಯೇ ಅತಿ ಹೆಚ್ಚು ನಿರುದ್ಯೋಗದ ಸಮಸ್ಯೆಯನ್ನು ದೇಶ ಎದುರಿಸುತ್ತಿದೆ ಎಂದು ತೋರಿಸಿವೆ. ಮಹಿಳೆಯರು ಅಲ್ಲಿ ಹೆಚ್ಚು ಬಾದಿತರು ಎಂಬುದೂ ಅಲ್ಲಿ ದೃಢಪಟ್ಟಿದೆ. 2008–09ರಲ್ಲಿಯೇ ಸಂಭವಿಸಿದ ತೀವ್ರ ಆರ್ಥಿಕ ಕುಸಿತದ ಸಂದರ್ಭದಿಂದಲೂ ಮಹಿಳೆಯರ ನಿರುದ್ಯೋಗದ ಪ್ರಮಾಣದಲ್ಲಿ ತೀವ್ರ ಏರಿಕೆಯಾಗಿದೆ ಎನ್ನುತ್ತವೆ ವರದಿಗಳು. ಇವು ವಿಶ್ವದ ಹಲವು ರಾಷ್ಟ್ರಗಳಲ್ಲಿರುವ ಸನ್ನಿವೇಶಗಳು. ಅದರಲ್ಲಿಯೂ ಭಾರತದಲ್ಲಿ ಇದರ ತೀವ್ರತೆಯನ್ನು ನಾವು ಕಾಣುತ್ತಿದ್ದೇವೆ. ಕೋವಿಡ್ ಸಾಂಕ್ರಾಮಿಕದ ನಂತರವಂತೂ ಈ ಪ್ರವೃತ್ತಿಯಲ್ಲಿ ಇನ್ನಷ್ಟು ಏರುಗತಿ ಕಂಡುಬಂತು. ವಿಶ್ವಬ್ಯಾಂಕ್ ನ ಇತ್ತೀಚಿನ ಸಮೀಕ್ಷೆಯ ಪ್ರಕಾರ 2010 ರಿಂದ 2022ರ ನಡುವೆ ದೇಶದ ಒಟ್ಟು ಕಾರ್ಮಿಕ ಬಲದಲ್ಲಿ ಮಹಿಳಾ ದುಡಿಮೆಗಾರರ ಸಂಖ್ಯೆ ಈ ಹಿಂದಿನ 26% ನಿಂದ 19%ಕ್ಕೆ ಇಳಿದಿದೆ. ದೇಶದ ಜನಸಂಖ್ಯೆಯ 40% ದುಡಿಮೆಗೆ ಅರ್ಹರಾದ ಜನರಿದ್ದಾರೆ. 2020–2021ರಲ್ಲಿ (ಜುಲೈನಿಂದ ಜೂನ್ ವರೆಗೆ) ಕೆಲಸ ಮಾಡಲು ಸಿದ್ಧರಿರುವ ಕಾರ್ಮಿಕ ಬಲದ ಶೇ. 7.5ರಷ್ಟು ಜನರು ನಿರುದ್ಯೋಗಿಗಳಾಗಿದ್ದಾರೆ. ಎಂದರೆ ಸುಮಾರು 42 ಮಿಲಿಯನ್ ಜನರಿಗೆ ಉದ್ಯೋಗವಿಲ್ಲ ಎಂದು ಇದು ಸೂಚಿಸುತ್ತದೆ. (ನಿಯತಕಾಲಿಕ ಕಾರ್ಮಿಕ ಶಕ್ತಿ ಸಮೀಕ್ಷೆ (periodic labour force survey)ಯ ಪ್ರಕಾರ ಸಮೀಕ್ಷೆಯ ದಿನಾಂಕದ ಹಿಂದಿನ ಏಳು ದಿನಗಳಲ್ಲಿ ಒಬ್ಬ ವ್ಯಕ್ತಿಯು ಒಂದು ದಿನ ಕನಿಷ್ಟ ಒಂದು ಘಂಟೆ ಕೆಲಸ ಮಾಡಿದರೆ ಉದ್ಯೋಗಿ ಎಂದು ವ್ಯಾಖ್ಯಾನಿಸಲಾಗಿದೆ.) ಒಂದು ವರ್ಷದಲ್ಲಿ ಒಬ್ಬ ವ್ಯಕ್ತಿಯ 180 ಅಥವಾ ಅದಕ್ಕಿಂತ ಹೆಚ್ಚು ದಿನಗಳ ಚಟುವಟಿಕಯನ್ನು ಆಧರಿಸಿ ನೋಡಿದರೆ ಜನಸಂಖ್ಯೆಯ 4.2% ಅಥವಾ 25 ಮಿಲಿಯನ್ ಜನರು ನಿರುದ್ಯೋಗಿಗಳು ಎನ್ನುತ್ತದೆ ಆ ಸಮೀಕ್ಷೆ.

ಮನುವಾದವನ್ನು ತೊಲಗಿಸಲು ಐಕ್ಯ ಹೋರಾಟದ ಅಗತ್ಯವಿದೆ; ಸುಭಾಷಿಣಿ ಅಲಿ

ದೇಶದಲ್ಲಿ ಬೇರು ಬಿಟ್ಟಿರುವ ಮನುವಾದವನ್ನು ತೊಲಗಿಸಲು ದಲಿತ, ಕಾರ್ಮಿಕ, ಮಹಿಳಾ ಸಂಘಟನೆಗಳು ಒಂದು ವೇದಿಕೆಯಲ್ಲಿ ಒಗ್ಗೂಡಿ ಐಕ್ಯ ಹೋರಾಟ ರೂಪಿಸಬೇಕು. ಯಾವುದೇ ರೀತಿಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಮನುವಾದವನ್ನು ಸೋಲಿಸುವ ನಿಟ್ಟಿನಲ್ಲಿ ಜೊತೆಯಾಗಿ ಸಾಗಬೇಕು. ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಜನಪರ ಸಂಘಟನೆಗಳು ಒಟ್ಟಾಗಿ ಬಿಜೆಪಿ ಸೋಲಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ಸುಭಾಷಿಣಿ ಅಲಿ ಅವರು ರಾಜ್ಯದ ಜನತೆಗೆ ಕರೆ ನೀಡಿದ್ದಾರೆ.

ಫೆಬ್ರವರಿ 26 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ದಲಿತ ಹಕ್ಕುಗಳ ಸಮಿತಿ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ವತಿಯಿಂದ ಆಯೋಜಿಸಿದ್ದ 'ದಲಿತರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಿ ಮತ್ತು ಅವರ ಹಕ್ಕುಗಳಿಗಾಗಿ ಒತ್ತಾಯಿಸಿ' ಎಂಬ ರಾಜ್ಯಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಬಿಜೆಪಿ ಸರಕಾರ ಮಾಡುತ್ತಿರುವ ಅನಾಚಾರಗಳ ಬಗ್ಗೆ ಮಾಧ್ಯಮಗಳು ಸುದ್ದಿ ಮಾಡುವುದಿಲ್ಲ. ಹಾಗಾಗಿ ಸರಕಾರದ ಜನವಿರೋಧಿ ನೀತಿಗಳ ಕುರಿತು ಸಾರ್ವಜನಿಕರ ನಡುವೆ ಚರ್ಚೆ ಆಗುತ್ತಿಲ್ಲ. ಇದನ್ನು ಸರಿಪಡಿಸಲು ಸಾಮೂಹಿಕ ಸಂಘಟನೆಗಳು ಸಾರ್ವಜನಿಕರ ನಡುವೆ ಸರ್ಕಾರದ ನೀತಿಗಳ ಬಗ್ಗೆ ಚರ್ಚಿಸಬೇಕು ಎಂದುರು.

'ದುಡಿಯುವ ವರ್ಗದ ಐಕ್ಯತೆ ಒಡೆಯಲು ಬಂಡವಾಳಶಾಹಿಗಳು ಅಸ್ಮಿತೆ ರಾಜಕಾರಣವನ್ನು ಮುನ್ನಲೆಗೆ ತಂದಿವೆ' ಎಂದು ದಲಿತ್ ಶೋಷಣ್ ಮುಕ್ತಿ ಮಂಚ್ ರಾಷ್ಟ್ರೀಯ ಉಪಾಧ್ಯಕ್ಷೆ ಹಾಗೂ ರಾಜ್ಯಸಭಾ ಮಾಜಿ ಸದಸ್ಯರಾದ ಸುಭಾಷಿಣಿ ಅಲಿ ಕಳವಳ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ ಬಿಜೆಪಿ ಸರ್ಕಾರವು ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವಂತಹ ಅಪಾಯಕಾರಿ ಕೃತ್ಯಕ್ಕೆ ಕೈ ಹಾಕಿದೆ. ಬೆಂಗಳೂರಿನಲ್ಲಿ ಇಂತಹ ಸುಮಾರು 36 ಸಾವಿರ ಹೆಸರುಗಳನ್ನು ತೆಗೆದುಹಾಕುವ ಕಾರ್ಯಕ್ಕೆ ಬಿಜೆಪಿ ಮುಂದಾಗಿದ್ದು, ಜನತೆಯ ಮೂಲಭೂತ ಹಕ್ಕುಗಳನ್ನು ಒಂದೊಂದಾಗಿ ಕಸಿಯುತ್ತಾ ಬಂದಿದೆ. ಈ ಮೂಲಕ ಬಿಜೆಪಿ ಸಂವಿಧಾನಗಳ ಮೌಲ್ಯಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದೆ. ದಲಿತ, ಮುಸ್ಲಿಂ ಹಾಗೂ ಶೋಷಿತರಿಗೆ ಆಮಿಷವೊಡ್ಡಿ, ಕೆಲವೆಡೆ ದೌರ್ಜನ್ಯಗಳನ್ನು ನಡೆಸಿ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದ ಅವರು, ಇದರ ವಿರುದ್ಧ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವಂತಹ ಪ್ರತಿಯೊಬ್ಬ ನಾಗರಿಕರು ಬೀದಿಗಿಳಿದು ಹೋರಾಟ ಮಾಡಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು.

ಕಳೆದ ವರ್ಷ ನಡೆದ ಉತ್ತರ ಪ್ರದೇಶ ಚುನಾವಣೆಯ ಸಂದರ್ಭದಲ್ಲಿ, ಭದ್ರತಾ ಸಿಬ್ಬಂದಿಗಳನ್ನು ಬಳಸಿಕೊಂಡು ನಿರ್ದಿಷ್ಟವಾಗಿ ಮುಸ್ಲಿಂ ಮತದಾರರಿಗೆ ತಪಾಸಣೆ ನೆಪದಲ್ಲಿ ಅಲ್ಪಸಂಖ್ಯಾತ ಮತದಾರರಲ್ಲಿ ಭೀತಿ ಸೃಷ್ಟಿಸಲಾಯಿತು. ಅದರ ಮುಂದುವರೆದ ಭಾಗವಾಗಿ ಕರ್ನಾಟಕದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಿಂದಲೇ ಮುಸ್ಲಿಂ ಹಾಗೂ ದಲಿತ ಮತದಾರರನ್ನು ಇಲ್ಲವಾಗಿಸುವ ಕೃತ್ಯಕ್ಕೆ ಇಳಿದಿರುವುದರ ಬಗ್ಗೆ ಪ್ರಜ್ಞಾವಂತ ನಾಗರಿಕರು ಗಂಭೀರವಾಗಿ ಚಿಂತಿಸಬೇಕಾಗಿದೆ ಎಂದರು.

ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ವ್ಯಾಪಕವಾಗಿ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಶೇ. 98 ದಲಿತರ ಮೇಲಿನ ಹಲ್ಲೆ ಪ್ರಕರಣಗಳು ಪೊಲೀಸ್ ಠಾಣೆಯಲ್ಲೇ ಇತ್ಯರ್ಥಗೊಂಡು ಆರೋಪಿಗಳು ಕಾನೂನು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಇದು ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತಷ್ಟು ಹೆಚ್ಚಾಗಲು ಕಾರಣವಾಗಿದೆ. ಈ ನಿಟ್ಟಿನಲ್ಲಿ



ರಾಜ್ಯಾದ್ಯಂತ ದಲಿತರ ಮೇಲಿನ ದೌರ್ಜನ್ಯ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಸಮಾವೇಶದಲ್ಲಿ ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಬಾಲಸುಂದರಂ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿತ್ಯಾನಂದ ಸ್ವಾಮಿ, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಡಾ.ಮೋಹನ್‌ರಾಜ್, ಎಸ್ಸಿ, ಎಸ್ಟಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಡಿ.ಶಿವಶಂಕರ್, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ.ಎಸ್.ವೈ. ಗುರುಶಾಂತ್ ಮತ್ತಿತರರು ಉಪಸ್ಥಿತರಿದ್ದರು.

ದುಡಿಯುವ ವರ್ಗದ ಐಕ್ಯತೆ ಒಡೆಯಲು ಅಸ್ಮಿತೆ ರಾಜಕಾರಣ: ಸುಭಾಷಿಣಿ ಅಲಿ

ದಲಿತ ಹಕ್ಕುಗಳ ಸಮಿತಿ–ಕರ್ನಾಟಕ ಬೆಂಗಳೂರು ದಕ್ಷಿಣ ಮತ್ತು ಉತ್ತರ ಸಮಿತಿಗಳು ಫೆಬ್ರವರಿ 24ರಂದು ಆಯೋಜಿಸಿದ್ದ 'ಐಡೆಂಟಿಟಿ(ಅಸ್ಮಿತೆ) ರಾಜಕೀಯ' ಕುರಿತ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಸ್ಮಿತೆ ರಾಜಕಾರಣ ಭಾರತಕ್ಕೆ ಬಂದಿದ್ದು 1960–70ರ ದಶಕದ ನಂತರ. ಅದಕ್ಕೂ ಹಿಂದೆ ಈ ರಾಜಕಾರಣ ಇರಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಬಂಡವಾಳಶಾಹಿಗಳು ಭಾರತಕ್ಕೆ ಇದನ್ನು ಹರಿಬಿಟ್ಟರು. ಧರ್ಮ, ಜಾತಿ, ಒಳಜಾತಿಗಳ ಹೆಸರಿನಲ್ಲಿ ದುಡಿಯುವ ವರ್ಗವನ್ನು ಒಡೆಯುವುದೇ ಇದರ ಹಿಂದಿನ ಉದ್ದೇಶ' ಎಂದರು.

ಇದನ್ನು ಕೇಂದ್ರ ಮತ್ತು ರಾಜ್ಯಗಳಲ್ಲಿ ಪ್ರಯೋಗ ಮಾಡಿರುವ ಬಿಜೆಪಿ, ಲಾಭ ಪಡೆದುಕೊಳ್ಳುತ್ತಿದೆ. ಛತ್ತೀಸಗಡದಲ್ಲಿ ಕ್ರಿಶ್ಚಿಯನ್ ಬುಡಕಟ್ಟು ಮತ್ತು ಇತರ ಬುಡಕಟ್ಟು ಸಮುದಾಯಗಳ ಆಚಾರ, ವಿಚಾರ, ಆಹಾರ ಪದ್ಧತಿ ಎಲ್ಲವೂ ಒಂದೇ ಆದರೂ ಅವರ ನಡುವೆ ಸಂಘರ್ಷ ಹುಟ್ಟುಹಾಕಿದ್ದಾರೆ. ಅದರ ಲಾಭವನ್ನು ಬಹುರಾಷ್ಟ್ರೀಯ ಕಂಪನಿಗಳು ಪಡೆಯುತ್ತಿವೆ ಎಂದು ಹೇಳಿದರು.

ದಲಿತ ಹಕ್ಕುಗಳ ಸಮಿತಿಯ ಬಿ. ರಾಜಶೇಖರಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಂಗಳೂರಿನಲ್ಲಿ ವಿಶ್ವ ಮಹಿಳಾ ದಿನಾಚರಣೆ

ವರದಿ: ವಾ.ಉ

ದೇಶದ ಜನಸಂಖ್ಯೆಯಲ್ಲಿ ಅರ್ಧ ಭಾಗದಷ್ಟು ಮಹಿಳೆಯರಿದ್ದರೂ, ಮಹಿಳಾ ಸಬಲೀಕರಣದ ಪ್ರಶ್ನೆ ಮುಂಚೂಣಿಗೆ ಬರುತ್ತಿಲ್ಲ. ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಅತ್ಯಂತ ಕೀಳಾಗಿ ಕಾಣುತ್ತಾ, ಭೋಗದ ವಸ್ತುವನ್ನಾಗಿಸಿ ನಾಲ್ಕು ಗೋಡೆಗಳ ಮಧ್ಯೆ ಬಂಧಿಯನ್ನಾಗಿಸಿದೆ. ಸಮಾಜದಲ್ಲಿ ನಡೆಯುತ್ತಿರುವ ಎಲ್ಲಾ ಅನಿಷ್ಠಗಳಿಗೆ ಮಹಿಳೆಯರನ್ನೇ ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ. ಇವೆಲ್ಲವನ್ನೂ ಮೀರಿ ಮಹಿಳೆ ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಶಿಕ್ಷಣ, ಆರೋಗ್ಯ, ಉದ್ಯೋಗ ಸೇರಿದಂತೆ ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿ ಇರಬೇಕು. ಮಹಿಳೆಯರು ಭಾಗವಹಿಸದೆ ದೇಶದ ಅಭಿವೃದ್ಧಿ ಖಂಡಿತಾ ಸಾಧ್ಯವಿಲ್ಲ ಎಂದು ಸಿಐಟಿಯು ಕರ್ನಾಟಕ ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಹೇಳಿದರು.

ಅವರು ಮಂಗಳೂರಿನಲ್ಲಿ ಮಾರ್ಚ್ 8ರ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನ್ನಾಡುತ್ತಿದ್ದರು. ದುಡಿಯುವ ಮಹಿಳೆಯರ ದ.ಕ. ಜಿಲ್ಲಾ ಸಮನ್ವಯ ಸಮಿತಿ ಹಾಗೂ ಜಿಲ್ಲಾ ಜನವಾದಿ ಮಹಿಳಾ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಜಿಲ್ಲಾ ಸಮಿತಿಗಳು ಸಹಯೋಗ ನೀಡಿದ್ದವು.

ದ.ಕ. ಜಿಲ್ಲಾ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷರಾದ ಜಯಂತಿ ಶೆಟ್ಟಿ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕರಾದ ಪದ್ಮಾವತಿ ಶೆಟ್ಟಿ ಈ ಸಂದರ್ಭದಲ್ಲಿ ಮಾತನಾಡಿದರು. ವೇದಿಕೆಯಲ್ಲಿ ಜೆಎಂಎಸ್ ಜಿಲ್ಲಾ ಮುಖಂಡರಾದ ಭಾರತಿ ಬೋಳಾರ್, ರಾಧಾ ಮೂಡಬಿದ್ರೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮುಖಂಡರಾದ ಗಿರಿಜಾ ಮೂಡಬಿದ್ರಿ, ಜಯಲಕ್ಷ್ಮಿ ಉಪಸ್ಥಿತರಿದ್ದರು. ಸಿಐಟಿಯು ಜಿಲ್ಲಾ ಮುಖಂಡರಾದ ಜೆ. ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಮಹಿಳಾ ಮುಖಂಡರನ್ನೊಳಗೊಂಡು ಮತ್ತಿತರ ಮುಖಂಡರು ಭಾಗವಹಿಸಿದ್ದರು.



ರಾತ್ರಿ ಪಾಳಿಯ ಕೆಲಸದಲ್ಲಿ ದುಡಿಯುವ ಮಹಿಳೆಯರ ಸಂಕಷ್ಟಗಳು..... ಪುಟ 9 ರಿಂದ

ಇಲಾಖೆಗಳಲ್ಲಿ ದುಡಿಯುವ ಮಹಿಳೆಯರ ಸಂಕಷ್ಟಗಳು ಬೆಟ್ಟದಷ್ಟಿದ್ದು ಕೇಳುವವರೇ ಇಲ್ಲದೆ ಇರುವ ಪರಿಸ್ಥಿತಿಗಳಿಗೆ ಈ ವಿಧೇಯಕ ಮತ್ತಷ್ಟು ಪುಷ್ಠಿ ನೀಡಲಿದೆ. ಗ್ರಾಮೀಣ ಪ್ರದೇಶದಲ್ಲಿ ಆಶಾ ಕಾರ್ಯಕರ್ತೆಯಾಗಿ ದುಡಿಯುವ ಮಹಿಳೆಯನ್ನು ಆ ಗ್ರಾಮದಲ್ಲಿ ಎಂತಹ ಅನಾರೋಗ್ಯಕ್ಕೆ ತುತ್ತಾದವರು, ಹೆರಿಗೆಗೆ ತಾಯಿಂದಿರನ್ನ ಮಧ್ಯ ರಾತ್ರಿ ಕರೆದುಕೊಂಡು ಜಿಲ್ಲಾ/ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕು. ವಾಹನ ವ್ಯವಸ್ಥೆ ಇಲ್ಲ, ಭದ್ರತೆ ಇಲ್ಲ. ಅಲ್ಲಿಯ ಅಧಿಕಾರಿಗಳ ದಬ್ಬಾಳಿಕೆಯಿಂದ ಕೇವಲ ಪ್ರೋತ್ಸಾಹ ಧನಕ್ಕಾಗಿ ದುಡಿಸಿಕೊಳ್ಳುತ್ತಿವೆ. ದುಡಿಯುವ ಮಹಿಳೆಯರ ಮೇಲೆ ಯಾವುದೇ ಕಾಳಜಿ ಇಲ್ಲದೆ ಕೇವಲ ಚುನಾವಣಾ ಸಂದರ್ಭದಲ್ಲಿ ಮಾತ್ರ ಕಾಳಜಿಯ ಸುಳ್ಳು ಭರವಸೆ ನೀಡುವ ಭ್ರಷ್ಟ ಸರ್ಕಾರಗಳು ದೇಶದಲ್ಲಿ 1 ಕೋಟಿಗೂ ಅಧಿಕ ಮಹಿಳೆಯರನ್ನ ಸ್ಕೀಮ್‌ಗಳಲ್ಲಿ ಗೌರವಧನದ ಹೆಸರಿನಲ್ಲಿ ಅಂಗನವಾಡಿ ಕಾರ್ಯಕರ್ತೆ, ಸಂಬಾವನೆಯ ಹೆಸರಿನಲ್ಲಿ ಬಿಸಿಯೂಟ, ಪ್ರೋತ್ಸಾಹಧನದಲ್ಲಿ ಆಶಾ ಕಾರ್ಯಕರ್ತೆ, ಬಳಸಿ ಬೀಸಾಡು ಎಂಬಂತೆ ಪದವೀಧರರೂ, ಉತ್ತಮ ಕೌಶಲ್ಯ ಹೊಂದಿದ ಅತಿಥಿ ಉಪನ್ಯಾಸಕರನ್ನು, NHM ಗಳಲ್ಲಿ ದುಡಿಯುವ ನರ್ಸ್ ಸಿಬ್ಬಂದಿಗಳನ್ನು ವೇತನ ತಾರತಮ್ಯ, ಕಡಿಮೆ ವೇತನದಲ್ಲಿ ದುಡಿಸಿ ಕೊಳ್ಳುತ್ತಿದೆ ಬಂಡವಾಳ ಶಾಹಿ, ಕಾರ್ಪೋರೇಟ್ ಸರ್ಕಾರಗಳು ಅವಿರತ ಹೋರಾಟಗಳ ಮೂಲಕ ಪಡೆದ ಕಾನೂನುಗಳನ್ನು ಕಸಿಯಲು ಮುಂದಾಗಿದೆ. ಐಕ್ಯ ಹೋರಾಟಗಳ ಮೂಲಕ ನಮ್ಮ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ಒಂದೇ ಮಾರ್ಗ ಎಂಬುದನ್ನು ಜನತೆಗೆ ಮನವರಿಕೆ ಮಾಡಬೇಕಿದೆ.



ತ್ರಿಪುರಾದಲ್ಲಿ ಬಿಜೆಪಿಯಿಂದ ಚುನಾವಣೋತ್ತರ ಭಯೋತ್ಪಾದನೆ:
ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಬಿಜೆಪಿ ತ್ರಿಪುರಾದಲ್ಲಿ ಸಿಪಿಐ(ಎಂ), ಎಡರಂಗ ಮತ್ತು ಪ್ರತಿ ಪಕ್ಷದ ಕಾರ್ಯಕರ್ತರ ವಿರುದ್ಧ ಚುನಾವಣೋತ್ತರ ಹಿಂಸಾಚಾರವನ್ನು ನಡೆಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಮಾರ್ಚ್ 6ರಂದು ನೀಡಿರುವ ಹೇಳಿಕೆಯಲ್ಲಿ ಬಲವಾಗಿ ಖಂಡಿಸಿದೆ. ಮಾರ್ಚ್ 2 ರಂದು ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ ಮತ್ತು ಬಿಜೆಪಿ ಕಷ್ಟಪಟ್ಟು ಬಹುಮತದತ್ತ ಸಾಗುತ್ತಿದ್ದಂತೆ, ತ್ರಿಪುರಾದಲ್ಲಿ ಹಾಡುಹಗಲೇ ಪ್ರಜಾಪ್ರಭುತ್ವವನ್ನು ಸಾಯಿಸುವ ಹಿಂಸಾಚಾರದ ಕಿಚ್ಚು ಹೊತ್ತಿಸಲಾಯಿತು. ತನ್ನ ಮತ ಗಳಿಕೆಯಲ್ಲಿ ಶೇಕಡಾ 10 ಕ್ಕಿಂತ ಹೆಚ್ಚು ನಷ್ಟವಾಗಿದೆ, ಸರಳವಾದ ಬಹುಮತವಷ್ಟೇ ಸಿಕ್ಕಿದೆ, ಮತ್ತು ತನ್ನ ಸಮ್ಮಿಶ್ರ ಕೂಟ 11 ಸ್ಥಾನಗಳನ್ನು ಕಳೆದುಕೊಂಡಿದೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಬಿಜೆಪಿಯು ಅಂತಹ ಹಿಂಸಾಚಾರದ ಬೆಂಕಿ ಹೊತ್ತಿಸಿದೆ ಎಂದು ಸಿಪಿಐ(ಎಂ) ಹೇಳಿದೆ.

ರಾಜ್ಯದೆಲ್ಲೆಡೆ ಸಿಪಿಐ(ಎಂ) ಬೆಂಬಲಿಗರ ಮನೆ ಮತ್ತು ಆಸ್ತಿಪಾಸ್ತಿ ಧ್ವಂಸ, ದೈಹಿಕ ದಾಳಿ, ಹಣ ಸುಲಿಗೆ, ಜನಸಾಮಾನ್ಯರ ಜೀವನೋಪಾಯಕ್ಕೆ ನಿರ್ಬಂಧ ಹೇರುವ ಹಿಂಸಾತ್ಮಕ ದಾಳಿಗಳು ನಡೆಯುತ್ತಲೇ ಇವೆ. ಸಿಪಿಐ(ಎಂ) ಮತ್ತು ಎಡರಂಗದ ನಿಯೋಗವನ್ನು ಭೇಟಿ ಮಾಡಲು ರಾಜ್ಯಪಾಲರು ಅಲಭ್ಯವಾಗಿರುವುದರಿಂದ ಇದುವರೆಗೆ ಮೂರು ಜೀವಗಳನ್ನು ಕಳೆದುಕೊಂಡಿರುವ ಒಟ್ಟು ಸಾವಿರಕ್ಕೂ ಹೆಚ್ಚು ಘಟನೆಗಳ ಪೈಕಿ 668 ಪ್ರಕರಣಗಳ ವಿವರಗಳನ್ನು ರಾಜ್ಯ ಆಡಳಿತಕ್ಕೆ ಸಲ್ಲಿಸಲಾಗಿದೆ.

ಕಾನೂನು ಮತ್ತು ಸುವ್ಯವಸ್ಥೆಯನ್ನು ಪುನಃಸ್ಥಾಪಿಸಲು ಮತ್ತು ಸಂತ್ರಸ್ತರಿಗೆ ಅಗತ್ಯವಾದ ಆರ್ಥಿಕ ಮತ್ತು ವೈದ್ಯಕೀಯ ಪರಿಹಾರವನ್ನು ಒದಗಿಸಲು ತಕ್ಷಣವೇ ಮಧ್ಯಪ್ರವೇಶಿಸುವಂತೆ ರಾಜ್ಯ ಆಡಳಿತ ಮತ್ತು ಕಾನೂನು ಜಾರಿ ವ್ಯವಸ್ಥೆಗಳಿಗೆ ಪೊಲಿಟ್ ಬ್ಯೂರೋ ಕೇಳಿದೆ.

ತ್ರಿಪುರಾದಲ್ಲಿ ಬಿಜೆಪಿಯಿಂದ ಈ ಪ್ರಜಾಪ್ರಭುತ್ವದ ಕೊಲೆ ಮತ್ತು ಭಯೋತ್ಪಾದಕ ರಾಜಕಾರಣದ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ಸಂಘಟಿಸಲು ಸಿಪಿಐ(ಎಂ) ಪೊಲಿಟ್ ಬ್ಯೂರೋ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಪಿತೃಪ್ರಾಧಾನ್ಯತೆ ಮತ್ತು ಜಾತಿವಾದಿ ಪಕ್ಷಪಾತದ ವಾಸನೆ ತುಂಬಿರುವ ಹಾಥ್ರಸ್ ತೀರ್ಪು ಆಘಾತಕಾರಿ–ಎಐಡಿಡಬ್ಲ್ಯುಎ ಖಂಡನೆ

ಉತ್ತರ ಪ್ರದೇಶದ ಹಾಥ್ರಸ್ ನಲ್ಲಿ 19 ವರ್ಷದ ದಲಿತ ಬಾಲಕಿ ಸಾಮೂಹಿಕ ಅತ್ಯಾಚಾರದ ನಂತರ ಸಾವನ್ನಪ್ಪಿದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಆರೋಪಗಳಿಂದ ಖುಲಾಸೆಗೊಳಿಸಿದ ನ್ಯಾಯಾಲಯದ ತೀರ್ಪು ಆಘಾತಕಾರಿ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ತೀವ್ರವಾಗಿ ಖಂಡಿಸಿದೆ. ಈ ತೀರ್ಪಿನ ವಿರುದ್ಧ ತಕ್ಷಣವೇ ಮೇಲ್ಮನವಿ ಸಲ್ಲಿಸುವಂತೆ ಸಿಬಿಐ ನ್ನು ಅದು ಆಗ್ರಹಿಸಿದೆ.

ವಿಶೇಷ ನ್ಯಾಯಾಧೀಶ ತ್ರಿಲೋಕ್ ಸಿಂಗ್ ಪಾಲ್ ಹಾಥ್ರಸ್ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಠಾಕೂರ್ ಮೇಲ್ಜಾತಿಯ ನಾಲ್ವರು ಗಂಡಸರನ್ನು ಸಾಮೂಹಿಕ ಅತ್ಯಾಚಾರದ ಆರೋಪದಿಂದ ಖುಲಾಸೆಗೊಳಿಸಿದರು. ಪ್ರಮುಖ ಆರೋಪಿ ಸಂದೀಪ್ (20ವರ್ಷ) ಮಾತ್ರ ಕೊಲೆಯಲ್ಲದ ಆಪರಾಧಿಕ ನರಹತ್ಯೆಯ ಮತ್ತು ಎಸ್‌ಸಿ/ಎಸ್‌ಟಿ ಕಾಯ್ದೆಯಡಿಯಲ್ಲಿ ಅಪರಾಧಿ ಎಂದು ತೀರ್ಪಿತ್ತು ಉಳಿದಂತೆ ರವಿ (35), ಲವ್ ಕುಶ್ (23) ಮತ್ತು ರಾಮು (26) ಅವರನ್ನು ಖುಲಾಸೆಗೊಳಿಸಲಾಗಿದೆ.

ಸಂತ್ರಸ್ತೆ ಸೆಪ್ಟೆಂಬರ್ 14, 2020 ರಂದು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು ಮತ್ತು ಕ್ರೂರವಾಗಿ ಹಲ್ಲೆ ನಡೆಸಿದರು ಎಂಬ ಆರೋಪವಿತ್ತು. ಹದಿನೈದು ದಿನಗಳ ನಂತರ ಆಸ್ಪತ್ರೆಯಲ್ಲಿ ಆಕೆಯ ಸಾವಾಯಿತು.

ಎಐಡಿಡಬ್ಲ್ಯೂಎ ಹೇಳಿಕೆ ಸಂತ್ರಸ್ತೆ ಸೆಪ್ಟೆಂಬರ್ 29 ರಂದು ತನಗುಂಟಾದ ಗಾಯಗಳಿಗೆ ಬಲಿಯಾದಾಗ, ಕುಟುಂಬದ ಅನುಪಸ್ಥಿತಿಯಲ್ಲಿ ಪೊಲೀಸರು ತರಾತುರಿಯಲ್ಲಿ ಆಕೆಯ ಅಂತ್ಯಸಂಸ್ಕಾರ ಮಾಡಿದರು ಎಂದು ನೆನಪಿಸಿದೆ. ಅಂತ್ಯಸಂಸ್ಕಾರಕ್ಕೆ ತಮ್ಮ ಒಪ್ಪಿಗೆಯನ್ನು ತೆಗೆದುಕೊಂಡಿಲ್ಲ ಎಂದು ಕುಟುಂಬದವರು ಹೇಳಿಕೊಂಡಾಗ, ಪೊಲೀಸರು ಹಾಗಿಲ್ಲ ಎಂದು ಪ್ರತಿಪಾದಿಸಿದರು. ಇದು ಸ್ಥಳೀಯವಾಗಿ ಪ್ರತಿಭಟನೆಯನ್ನು ಹುಟ್ಟುಹಾಕಿತು ಮತ್ತು ಹಲವಾರು ಆಕ್ರೋಶಿತ ನಾಗರಿಕರು ಮತ್ತು ಸಂಘಟನೆಗಳು ಈ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್‌ಗೆ ಮೊರೆ ಹೋದವು. ಅಲಹಾಬಾದ್ ಹೈಕೋರ್ಟ್ ಸಹ ಸ್ವಯಂಪ್ರೇರಿತವಾಗಿ ಇದನ್ನು ಗಮನಕ್ಕೆ ತಗೊಂಡು ಸಿಬಿಐ ಅಡಿಯಲ್ಲಿ ತನಿಖೆಯ ಮೇಲ್ವಿಚಾರಣೆ ಮಾಡಲು ಒಪ್ಪಿಕೊಂಡಿತು.

"ಪಿತೃಪ್ರಧಾನ ಮತ್ತು ಜಾತಿವಾದಿ ಪಕ್ಷಪಾತದ ವಾಸನೆ ತುಂಬಿರುವ ತೀರ್ಪು ಎಲ್ಲಾ ನಾಲ್ಕು ಮೇಲ್ಜಾತಿಯ ಪುರುಷರನ್ನು ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯಿಂದ ಆರೋಪಮುಕ್ತಗೊಳಿಸುತ್ತದೆ ಮತ್ತು ಸಂತ್ರಸ್ತೆಯ ಮರಣದ ವೇಳೆಯ ಘೋಷಣೆಯನ್ನು, ಮತ್ತು ಅವಳು ಅನುಭವಿಸಿದ ಕ್ರೂರ ಪ್ರಹಾರವನ್ನು ಸಹ ವಿಶ್ವಾಸಾರ್ಹ ಎಂದು ಪರಿಗಣಿಸುವುದಿಲ್ಲ" ಎಂದು ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ.

ಪ್ರಕರಣವು ವರದಿಯಾದಾಗಿನಿಂದ, ಎಐಡಿಡಬ್ಲ್ಯುಎ ಮತ್ತು ಇತರ ಸಂಘಟನೆಗಳು ಉತ್ತರಪ್ರದೇಶದ ಪೊಲೀಸರು ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ ಮತ್ತು "ತನಿಖೆಯನ್ನು ಆರಂಭದಿಂದಲೂ ಕುಂಠಿತಗೊಳಿಸಿದ್ದಾರೆ" ಎಂದು ಆರೋಪಿಸಿದ್ದರು. ಪೊಲೀಸ್ ಕ್ರಮದಲ್ಲಿ, ಘಟನೆಯ ನಂತರ ಸಂತ್ರಸ್ತೆ ಆರೋಪಿಯನ್ನು ಹೆಸರಿಸಿದಾಗ, ಪೊಲೀಸರು ಮೊದಲ ಎಫ್‌ಐಆರ್‌ನಲ್ಲಿ ಸಾಮೂಹಿಕ ಅತ್ಯಾಚಾರದ ಆರೋಪವನ್ನು ಸೇರಿಸದಂತಹ ಹಲವು ಪ್ರಶ್ನಾರ್ಹ ನಿದರ್ಶನಗಳಿವೆ. ಸಂತ್ರಸ್ತೆ ಪ್ರಜ್ಞೆಯನ್ನು ಮರಳಿ ಪಡೆದು ಮ್ಯಾಜಿಸ್ಟ್ರೇಟ್‌ಗೆ ಔಪಚಾರಿಕ ಹೇಳಿಕೆ ನೀಡಿದ ನಂತರವೇ ಅತ್ಯಾಚಾರದ ಆರೋಪಗಳನ್ನು ಸೇರಿಸಲಾಯಿತು. ಆಕೆಯ ಹೇಳಿಕೆಯನ್ನು ಅನುಸರಿಸಿ, ಪೊಲೀಸರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಸ್ಯಾಂಪಲ್‌ಗಳನ್ನು ಸೆಪ್ಟಂಬರ್ 25ರಂದು, ಹಲ್ಲೆಯ 11 ದಿನಗಳ ನಂತರವಷ್ಟೇ ತಲುಪಿಸಿದರು. ಈ ಎಫ್‌ಎಸ್‌ಎಲ್ ವರದಿಯನ್ನು ಆಧರಿಸಿ ಉತ್ತರಪ್ರದೇಶ ಪೊಲೀಸರು ಮಹಿಳೆಯ ಮೇಲೆ ಅತ್ಯಾಚಾರ ನಡೆದಿಲ್ಲ ಎಂದು ಹೇಳಿದ್ದಾರೆ. ಆದರೆ ಸ್ಯಾಂಪಲ್ ಪಡೆಯುವ ವೇಳೆಗೆ ಬಹಳ ಸಮಯವಾಗಿದ್ದರಿಂದ ಎಫ್‌ಎಸ್‌ಎಲ್ ವರದಿಯು ಯಾವುದೇ ಮೌಲ್ಯವನ್ನು ಹೊಂದಿಲ್ಲ ಎಂದು ತಜ್ಞರು ಹೇಳಿರುವುದಾಗಿ ವರದಿಯಾಗಿದೆ.

ಸಂತ್ರಸ್ತೆಯ ತಾಯಿ, ಮಗಳನ್ನು ಕಂಡಾಗ, ಆಕೆಯ ಜನನಾಂಗದಿಂದ ರಕ್ತ ಧಾರಾಕಾರವಾಗಿ ಸುರಿಯುತ್ತಿತ್ತು ಎಂದು ಸ್ಪಷ್ಟವಾಗಿ ಹೇಳಿದ್ದರು ಎಂಬುದನ್ನು ಎಐಡಿಡಬ್ಲ್ಯುಎ ಹೇಳಿಕೆ ಉಲ್ಲೇಖಿಸಿದೆ.



"ಈ ಅರ್ಥಹೀನ ವಿಧಿವಿಜ್ಞಾನ ಪರೀಕ್ಷೆಯ ಆಧಾರದ ಮೇಲೆ ಉತ್ತರ ಪ್ರದೇಶದ ಡಿಜಿಪಿ ಕೂಡ ಯಾವುದೇ ಅತ್ಯಾಚಾರ ನಡೆದಿಲ್ಲ ಎಂದು ಸ್ಪಷ್ಟವಾದ ಪಕ್ಷಪಾತದಿಂದ ಹೇಳಿದ್ದರು. ಹಾಥ್ರಸ್‌ನ ಮೇಲ್ಜಾತಿ ಠಾಕೂರ್‌ಗಳು ಯಾವುದೇ ಅಪರಾಧ ನಡೆದಿಲ್ಲ ಎಂದು ಆರೋಪಿಸಿ ಬಾಲಕಿಯ ಕುಟುಂಬದ ಮೇಲೆ ದಾಳಿ ಆರಂಭಿಸಿದ್ದರಿಂದ ಕುಟುಂಬಕ್ಕೆ ಸಿಆರ್‌ಪಿಎಫ್ ಭದ್ರತೆಯನ್ನು ಒದಗಿಸಬೇಕಾಗಿ ಬಂದಿತ್ತು" ಎಂದು ಎಐಡಿಡಬ್ಲ್ಯು ಹೇಳಿದೆ.

ಸಂತ್ರಸ್ತೆಯ ಹೇಳಿಕೆಯು ವಿಶ್ವಾಸಾರ್ಹವಲ್ಲ ಎಂದು ನೀಡಿದ ತೀರ್ಪಿನ ಬಗ್ಗೆ ಟಿಪ್ಪಣಿ ಮಾಡುತ್ತ ಅದು "ಸೆಪ್ಟೆಂಬರ್ 22 ರಂದು ಅಲಿಗಢ್ ಮ್ಯಾಜಿಸ್ಟ್ರೇಟ್‌ಗೆ ಬಾಲಕಿಯ ಹೇಳಿಕೆಯು ಸಾಯುತ್ತಿದ್ದ ವೇಳೆಯ ಘೋಷಣೆಯಾಗಿದೆ. ಅದರ ಮೊದಲು ಸೆಪ್ಟೆಂಬರ್ 14 ರಂದು ಕೂಡ ಆರೋಪಿಗಳು ತನ್ನೊಂದಿಗೆ 'ಜಬರ್ದಸ್ತಿ' ಮಾಡಿದ್ದಾರೆ ಎಂದು ಸಂತ್ರಸ್ತೆ ವಿಡಿಯೋದಲ್ಲಿ ಹೇಳಿಕೆ ನೀಡಿದ್ದಳು. ಸೆಪ್ಟೆಂಬರ್ 22 ರ ಹೇಳಿಕೆಯು ಸಾಯುತ್ತಿರುವಾಕೆಯ ಘೋಷಣೆಯ ಹೇಳಿಕೆಯಾಗಿದ್ದು, ಇಂತಹ ಹೇಳಿಕೆ ಭಾರತದಲ್ಲಿ ಅತ್ಯಾಚಾರದ ವಿಚಾರಣೆಗಳಲ್ಲಿ ನಿರ್ಣಾಯಕ ಸಾಕ್ಷಿ ಎಂದು ಸ್ಥಾಪಿತವಾಗಿದೆ" ಎಂದು ಹೇಳಿದೆ.

ಘಟನೆ ನಡೆದು ಐದು ದಿನಗಳ ನಂತರ ಮಹಿಳಾ ಪೊಲೀಸ್ ಪೇದೆಯೊಬ್ಬರಿಗೆ ನೀಡಿರುವ ಹೇಳಿಕೆಯಲ್ಲಿ ಸಂತ್ರಸ್ತೆ ಎಲ್ಲಾ ಆರೋಪಿಗಳನ್ನು ಹೆಸರಿಸದ ಕಾರಣ, ಆಕೆಯ ಸಾವಿಗೆ ಮುನ್ನ ಅಥವಾ ಘಟನೆಯ ನಂತರ ನೀಡಿದ ಹೇಳಿಕೆ ಅಥವಾ ಆಕೆಯ ತಾಯಿಯ ಹೇಳಿಕೆಯನ್ನು ನಂಬಲು ಸಾಧ್ಯವಿಲ್ಲ, ಮತ್ತು ನಾಲ್ಕು ವ್ಯಕ್ತಿಗಳು ಸಾಮೂಹಿಕ ಅತ್ಯಾಚಾರವನ್ನು ನಡೆಸಿದರೆಂದು ಆರೋಪಿಸುವಂತೆ ಸಂತ್ರಸ್ತೆ ತನ್ನ ಹೇಳಿಕೆಯನ್ನು ಬದಲಾಯಿಸಲು ಹೇಳಿಕೊಟ್ಟಿರಬಹುದು ಎಂದು ವಿಶೇಷ ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿದ್ದಾರೆ. ಬಾಲಕಿಯನ್ನು ಕೊಲ್ಲುವ ಉದ್ದೇಶ ಇರಲಿಲ್ಲವಾದ್ದರಿಂದ, ಈ ಅಪರಾಧವು ಕೊಲೆ ಎಂದಾಗುವುದಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಈ ನಿಟ್ಟಿನಲ್ಲಿ, "ಸುಪ್ರೀಂ ಕೋರ್ಟ್ ಹಲವಾರು ಪ್ರಕರಣಗಳಲ್ಲಿ ಸಾವಿನ ವೇಳೆಯ ಘೋಷಣೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದೆ ಮತ್ತು ಸಾವಿನ ವೇಳೆಯ ಘೋಷಣೆಯು ಅಪರಾಧ ಸಾಬೀತಿನಲ್ಲಿ ಏಕೈಕ ಆಧಾರವಾಗಬಲ್ಲದು ಎಂದು ಹೇಳಿದೆ" ಎಂದು ಎಐಡಿಡಬ್ಲ್ಯುಎ ಉಲ್ಲೇಖಿಸಿದೆ.

ಸಂತ್ರಸ್ತೆ ಘಟನೆಯ ನಂತರ ಪ್ರಜ್ಞೆ ಹೊಂದಿದ್ದಳಾದ್ದರಿಂದ ಆರೋಪಿಗಳಾಗಿದ್ದ ಸಂದೀಪ್ ಮತ್ತು ಇತರರು ಸಂತ್ರಸ್ತೆಯನ್ನು ಕೊಲೆ ಮಾಡುವ ಉದ್ದೇಶವನ್ನು ಹೊಂದಿರಲಿಲ್ಲ ಎಂಬ ತೀರ್ಮಾನಕ್ಕೆ ಬರುವುದು "ತಪ್ಪು" ಎಂದಿರುವ ಎಐಡಿಡಬ್ಲ್ಯುಎ "ನಿರ್ಭಯಾ ಪ್ರಕರಣದಲ್ಲಿ, ಇದೇ ರೀತಿಯ ಸನ್ನಿವೇಶಗಳಲ್ಲಿ, ಕೊಲೆ ಸಾಬೀತಾಗಿದೆ ಎಂದು ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. ಅದೇನೇ ಇರಲಿ, ಆರೋಪಿಗಳಿಗೆ ಸಂತ್ರಸ್ತೆಯ ಮೇಲಿನ ಕ್ರೂರ ದಾಳಿಯ ಪರಿಣಾಮಗಳು ತಿಳಿದಿದ್ದವು ಎಂದೇ ಭಾವಿಸಬೇಕಾಗುತ್ತದೆ" ಎಂದು ಹೇಳಿದೆ.

ಈ ನಡುವೆ, ಸಂತ್ರಸ್ತೆಯ ಕುಟುಂಬವು ನ್ಯಾಯಕ್ಕಾಗಿ ಹೋರಾಟವನ್ನು ಮುಂದುವರೆಸುವುದಾಗಿ ಹೇಳಿದೆ. "ನನ್ನ ಸೋದರಿಗೆ ನ್ಯಾಯ ದೊರಕಿಸಿಕೊಡಲು ನಾವು ನಡೆಸಿದ ಹೋರಾಟ ಯಾವುದೇ ಫಲ ನೀಡಿಲ್ಲ. ನಮಗೆ ಇನ್ನೂ ನ್ಯಾಯ ಸಿಕ್ಕಿಲ್ಲ, ಅದಕ್ಕಾಗಿ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ" ಎಂದು ಸಂತ್ರಸ್ತೆಯ ಸೋದರ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಕೊಳ್ಳೆಗಾಲ ತಾಲೂಕು ಕುಣಗಳ್ಳಿ ಗ್ರಾಮದ ಉಪ್ಪಾರ ಜನಾಂಗದ ವಿ. ಗೋವಿಂದರಾಜು ಹಾಗೂ ಮಳವಳ್ಳಿ ತಾಲೂಕಿನ ಹೂವಿನ ಕೊಪ್ಪಲು ಗ್ರಾಮದ ದಲಿತ ಯುವತಿ ಶ್ವೇತಾ ಎಂಬುವವರು ಅಂತರ್ಜಾತಿ ವಿವಾಹವಾದ ಕಾರಣಕ್ಕೆ ಕಳೆದ ಐದು ವರ್ಷಗಳಿಂದ ಅವರನ್ನು ಕುಣಗಳ್ಳಿ ಗ್ರಾಮದ ಮುಖಂಡರು ಗ್ರಾಮಕ್ಕೆ ಸೇರಿಸದೆ ಬಹಿಷ್ಕಾರ ಹಾಕಿದ್ದಲ್ಲದೆ ಹುಡುಗನ ತಂದೆಯಿಂದ ಒಂದೂಕಾಲು ಲಕ್ಷ ಹಣವನ್ನ ದಂಡವಾಗಿ ಪಡೆಯಲಾಗಿತ್ತು.

ಇತ್ತೀಚಗೆ ಗ್ರಾಮಕ್ಕೆ ಹೋಗಿದ್ದ ಕಾರಣಕ್ಕೆ ಮತ್ತೆ ಇವರಿಗೆ ಮೂರು ಲಕ್ಷ ದಂಡ ವಿಧಿಸಿದ್ದಲ್ಲದೇ, ವಿವಾಹಿತರನ್ನು ಮನೆಗೆ ಸೇರಿಸಿದರೆ ಇಡೀ ಕುಟುಂಬಕ್ಕೆ ಬಹಿಷ್ಕಾರ ಹಾಕುವುದಾಗಿ ಹಾಗೂ ಜೀವ ಬೆದರಿಕೆ ಹಾಕಿದ್ದ ಕ್ರಮ ವಿರೋಧಿಸಿ ದಲಿತ ಹಕ್ಕುಗಳ ಸಮಿತಿ ಮಂಡ್ಯ ಸಹಾಯದಿಂದ ದಂಪತಿಗಳು ಪೋಲೀಸ್ ಠಾಣೆ ಮೆಟ್ಟಿಲೇರಿ ಗ್ರಾಮದ ಮುಖಂಡರ ಮೇಲೆ ಮೊಕದ್ದಮೆ ದಾಖಲಿಸಿದ್ದರು.

ಈ ಬಗ್ಗೆ ಇಂದು ಜನವಾದಿ ಮಹಿಳಾ



ಸಂಘಟನೆ ತಂಡ ಕೊಳ್ಳೆಗಾಲದ ಆರಕ್ಷಕ ಉಪಾಧೀಕ್ಷಕರನ್ನ ಭೇಟಿಯಾಗಿ ಕುಟುಂಬಕ್ಕೆ ರಕ್ಷಣೆ ಒದಗಿಸುವುದಲ್ಲದೆ ಆರೋಪಿಗಳನ್ನ ಶೀಘ್ರ ಬಂಧಿಸಲು ಒತ್ತಾಯಿಸಲಾಗಿತ್ತು. ಮತ್ತು ಗ್ರಾಮಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಧೈರ್ಯ ಹೇಳಲಾಗಿತ್ತು.

ಉಪ್ಪಾರ ಶೆಟ್ಟಿ ಜನಾಂಗದ ಪಾಳೆಗಾರಿ ಪ್ರಭುತ್ವದ ಯಜಮಾನರು ಸಾಮಾಜಿಕ ಬಹಿಷ್ಕಾರ ಹಾಕಿ 6 ಲಕ್ಷ ರೂಪಾಯಿಗಳ ದಂಡ ವಿಧಿಸಿದ್ದನ್ನು ಖಂಡಿಸಿ. ದಲಿತ ಹಕ್ಕುಗಳ ಸಮಿತಿ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ, ಡಿ.ವೈ.ಎಫ್.ಐ. ಸಂಘಟನೆ ಸೇರಿದಂತೆ ಸಾಮಾಜಿಕ ಬಹಿಷ್ಕಾರ ಹಾಕಿರುವವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಚಾಮರಾಜನಗರ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ದೇವಿ, ಕ.ಪ್ರಾಂತ ರೈತ ಸಂಘದ ಮುಖಂಡ ಹಾಗೂ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಟಿ.ಎಲ್. ಕೃಷ್ಣೇಗೌಡ ಮುಂತಾದವರು ಭಾಗವಹಿಸಿದ್ದರು.

ಮೂಲಸೌಕರ್ಯದ ಬೇಡಿಕೆಯೂ ಒಂದು ವರ್ಗಪ್ರಶ್ನೆಯೇ ಆಗಿದೆ

ಕೇಂದ್ರ ಸರ್ಕಾರದ ಇತ್ತೀಚಿನ ಬಜೆಟ್‌ನಲ್ಲಿ ಮೂಲಸೌಕರ್ಯಗಳಿಗಾಗಿ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸಿರುವುದರ ಬಗ್ಗೆ ಟೀಕೆಗಳು ಅವುಗಳು ನಿಜವಾಗಿಯೂ ಸಾಕಾರಗೊಳ್ಳುತ್ತವೆಯೇ ಎಂಬುದರ ಮೇಲೇಯೇ ಗಮನ ಕೇಂದ್ರೀಕರಿಸಿವೆಯೇ ಹೊರತು ಅಷ್ಟೊಂದು ಹಣವನ್ನು ಮೀಸಲಿಡುವುದು ಅಪೇಕ್ಷಣೀಯವೇ ಎಂಬುದರ ಬಗ್ಗೆ ಅಲ್ಲ. ಆದರೆ ಮೂಲಸೌಕರ್ಯಗಳನ್ನು ಕುರಿತ ಬೇಡಿಕೆಗೂ ಜಾರಿಯಲ್ಲಿರುವ ಆರ್ಥಿಕ ಕಾರ್ಯತಂತ್ರಕ್ಕೂ ನೇರ ಸಂಬಂಧವಿದೆ. ಮೂಲಸೌಕರ್ಯದ ಬೇಡಿಕೆಯೂ ಒಂದು ವರ್ಗ ಪ್ರಶ್ನೆಯೇ ಆಗಿದೆ. ಮೂಲಸೌಕಯಗಳ ನಿರ್ಮಾಣಕ್ಕೆ ಹೆಚ್ಚೆಚ್ಚು ಹಣ ಕೊಡಬೇಕೆನ್ನುವ ಸರಕಾರಗಳು ಶಿಕ್ಷಣ ಮತ್ತು ಆರೋಗ್ಯವನ್ನು ಹೆಚ್ಚೆಚ್ಚಾಗಿ ನಿರ್ಲಕ್ಷಿಸುತ್ತವೆ, ಅಸಮಾನತೆಗಳನ್ನು ಪೋಷಿಸುವ ಆರ್ಥಿಕ ಕಾರ್ಯತಂತ್ರದ ಪ್ರವೃತ್ತಿಯನ್ನು ಬಲಪಡಿಸುತ್ತವೆ. ಮೂಲಸೌಕಯಗಳ ನಿರ್ಮಾಣವನ್ನು ಒಂದು ಪವಿತ್ರ ಗೋವು ಎಂಬಂತೆ ನೋಡುವ ಕ್ರಮವು ಈ ವರ್ಗ ಪ್ರಶ್ನೆಯನ್ನು, ಅಂದರೆ ಅಭಿವೃದ್ಧಿಯ ವರ್ಗ ಸ್ವರೂಪವನ್ನು ಮರೆಮಾಚುತ್ತದೆ.



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಪ್ರತಿಯೊಂದು ದೇಶಕ್ಕೂ "ಭೌತಿಕ ಮೂಲಸೌಕರ್ಯ"ಗಳು ಎಂಬುದು ಅತ್ಯಗತ್ಯ ಮತ್ತು ಲಭ್ಯವಿರುವ ಮೂಲಸೌಕರ್ಯಗಳ ಪ್ರಮಾಣವು ಯಾವತ್ತೂ ಅಗತ್ಯಕ್ಕಿಂತ ಕಡಿಮೆಯೇ ಇರುತ್ತದೆ ಎಂಬ ಭಾವನೆ ಪ್ರಗತಿಪರ ಬುದ್ಧಿಜೀವಿಗಳಲ್ಲೂ ಇದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮೂಲಸೌಕರ್ಯಗಳಿಗಾಗಿ ಮಾಡುತ್ತಿರುವ ವೆಚ್ಚವನ್ನು "ಅತಿ ಹೆಚ್ಚು ಹೂಡಿಕೆ" ಎನ್ನುವಂತಿಲ್ಲ.

ಹಾಗಾಗಿ ಮೂಲಸೌಕರ್ಯಗಳ ನಿರ್ಮಾಣಕ್ಕಾಗಿ ಎಷ್ಟು ಹೆಚ್ಚಿನ ಮೊತ್ತದ ಹಣವನ್ನು ಮೀಸಲಿಟ್ಟರೂ ಸಹ ಸಾಮಾನ್ಯವಾಗಿ ಆಕ್ಷೇಪಣೆಗಳೇ ಇರುವುದಿಲ್ಲ. ಮೂಲಸೌಕರ್ಯ ಯೋಜನೆಗಳ ವಿರುದ್ಧ ಮಾಡಲಾಗುವ ಟೀಕೆಗಳು ಈ ಯೋಜನೆಗಳು ಕಾರ್ಯಸಾಧ್ಯವೇ, ಅವುಗಳು ನಿಜವಾಗಿಯೂ ಸಾಕಾರಗೊಳ್ಳುತ್ತದೆಯೇ, ಅವುಗಳಿಗೆ ನಿಗದಿಪಡಿಸಿದ ವೆಚ್ಚವನ್ನು ವಾಸ್ತವವಾಗಿ ಕೈಗೊಳ್ಳಲಾಗುತ್ತದೆಯೇ ಮುಂತಾದ ವಿಷಯಗಳ ಬಗ್ಗೆ ಕೇಂದ್ರೀಕರಿಸಲ್ಪಟ್ಟಿರುತ್ತವೆಯೇ ವಿನಃ, ಅಂತಹ ಯೋಜನೆಗಳು ಅಪೇಕ್ಷಣೀಯವೇ ಎಂಬುದರ ಬಗ್ಗೆ ಚರ್ಚೆಯಾಗುವುದೇ ಇಲ್ಲ.

ಕೇಂದ್ರ ಸರ್ಕಾರದ ಇತ್ತೀಚಿನ ಬಜೆಟ್‌ನಲ್ಲಿ ಮೂಲಸೌಕರ್ಯಗಳಿಗಾಗಿ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆಯಾದರೂ, ಅದರ ಬಗ್ಗೆ ಟೀಕೆಗಳು ನಿಗದಿಪಡಿಸಿದ ಮೊತ್ತವನ್ನು ಸರ್ಕಾರವು ಖರ್ಚು ಮಾಡಲು ಸಾಧ್ಯವಾಗುವುದಿಲ್ಲ ಎಂಬುದರ ಮೇಲೇಯೇ ಗಮನ ಕೇಂದ್ರೀಕರಿಸಿವೆಯೇ ಹೊರತು ಅಷ್ಟೊಂದು ಹಣವನ್ನು ಮೀಸಲಿಟ್ಟ ಬಗ್ಗೆ ಅಲ್ಲ. ಮೂಲಸೌಕರ್ಯಗಳಿಗಾಗಿ ಅಷ್ಟೊಂದು ಹಣವನ್ನು ಖರ್ಚು ಮಾಡುವ ಕ್ರಮವು ತಪ್ಪು ಆದ್ಯತೆಯಾಗಬಹುದು ಎಂಬ ಅಂಶವನ್ನೂ ಚರ್ಚಿಸಬೇಕು ಎಂದು ಅನಿಸಿದಂತೆಯೇ ಇಲ್ಲ. ಭಾರತದಲ್ಲಿ ಮೂಲಸೌಕರ್ಯವನ್ನು ಸಾಮಾನ್ಯವಾಗಿ ಒಂದು ಪವಿತ್ರ ಗೋವು ಎಂಬಂತೆ ಪರಿಗಣಿಸಲಾಗಿದೆ.

ಮೂಲಸೌಕರ್ಯಗಳನ್ನು ಪವಿತ್ರ ಗೋವು ಎಂದು ನೋಡಬೇಕಾಗಿಯೇ ಇಲ್ಲ ಎಂಬುದನ್ನು ಈ ಅಂಕಣದಲ್ಲಿ ಈ ಮೊದಲೇ ಹೇಳಲಾಗಿದೆ. ಆದರೆ, ವಿಚಾರ ಮಾಡದೆ ವಿಷಯವನ್ನು ಒಪ್ಪಿಕೊಳ್ಳುವ ಮನೋಭಾವದ ಪರಿಸ್ಥಿತಿಯಲ್ಲಿ ಈ ಅಂಶವನ್ನು ಮತ್ತೆ-ಮತ್ತೆ ಹೇಳಬೇಕಾಗುತ್ತದೆ. ಜನರು ಬಯಸುವ ಭೌತಿಕ ಮೂಲಸೌಕರ್ಯಗಳು ದೇಶವು ಅನುಸರಿಸರಿಸುವ ಆರ್ಥಿಕ ಕಾರ್ಯತಂತ್ರವನ್ನು ಅವಲಂಬಿಸಿರುತ್ತವೆ. ಅರ್ಥವ್ಯವಸ್ಥೆಯ ದೃಷ್ಟಿಯಲ್ಲಿ ಹೇಳುವುದಾದರೆ, ಅದು ಒಂದು ಸಂಪೂರ್ಣವಾದ ಅಥವ ಬದಲಾಗದ ಅವಶ್ಯಕತೆಯೇನಲ್ಲ. ಆಚರಣೆಯಲ್ಲಿರುವ ಒಂದು ನಿರ್ದಿಷ್ಟ ಆರ್ಥಿಕ ಕಾರ್ಯತಂತ್ರದಿಂದಾಗಿ ಒಂದು ನಿರ್ದಿಷ್ಟ ರೀತಿಯ ಭೌತಿಕ ಮೂಲಸೌಕರ್ಯದ ಅಗತ್ಯವು ಉದ್ಭವಿಸುತ್ತದೆ.

ವಸಾಹತುಶಾಹಿ ಆದ್ಯತೆಗಳು ಹಾಗೂ ಬಂದರು–ರೈಲು ಕಾಮಗಾರಿಗಳು

ಉದಾಹರಣೆಗೆ, ವಸಾಹತುಶಾಹಿ ಆಳ್ವಿಕೆಯು ಭಾರತದಲ್ಲಿ ನೆಲೆಗೊಂಡ ನಂತರವೇ ಬಂದರುಗಳ ನಿರ್ಮಾಣದ ಅಗತ್ಯ ಉಂಟಾಯಿತು. ಭಾರತವನ್ನು ವಸಾಹತುಶಾಹಿಯು ವಶಪಡಿಸಿಕೊಂಡ ನಂತರ ಭಾರತದ ಅರ್ಥವ್ಯವಸ್ಥೆಯು ಕಡಲ–ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಇದ್ದಕ್ಕಿದ್ದಂತೆ ಹೆಚ್ಚಳಕ್ಕೆ ಒಳಗಾಯಿತು. ಏಕೆಂದರೆ, ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಭಾರತವು ಮೆಟ್ರೋಪಾಲಿಟನ್(ಬಂಡವಾಳಶಾಹಿ) ದೇಶಗಳಿಗೆ ಪ್ರಾಥಮಿಕ ಸರಕುಗಳನ್ನು(ಕಚ್ಚಾ ಸಾಮಗ್ರಿಗಳನ್ನು) ಒದಗಿಸಬೇಕಾಗಿತ್ತು ಮತ್ತು ಆ ದೇಶಗಳಲ್ಲಿ ತಯಾರಾದ ಸರಕುಗಳಿಗೆ ಭಾರತದಲ್ಲಿ ಮಾರುಕಟ್ಟೆಯನ್ನು ಒದಗಿಸಬೇಕಾಗಿತ್ತು. ಈ ರೀತಿಯಲ್ಲಿ ವಸಾಹತುಶಾಹಿಯು ಅನುಸರಿಸುತ್ತಿದ್ದ ಆರ್ಥಿಕ ಕಾರ್ಯತಂತ್ರವು ಈ ಹಿಂದೆಂದೂ ಕಾಣದಷ್ಟು ಸಂಖ್ಯೆಯಲ್ಲಿ ಬಂದರುಗಳನ್ನು ನಿರ್ಮಿಸುವ ಅಗತ್ಯವನ್ನು ಸೃಷ್ಟಿಸಿತು.

ಹದಿನಾರನೇ ಶತಮಾನದ ಚಕ್ರವರ್ತಿ ಶೇರ್ ಷಾ ಸೂರಿ ಸಹ, ಮೂಲಸೌಕರ್ಯ ಯೋಜನೆಗಳನ್ನು ನಿರ್ಮಿಸಲು ಸಾಕಷ್ಟು ಸಂಪನ್ಮೂಲಗಳನ್ನು ಮೀಸಲಿಟ್ಟಿದ್ದರು. ಆತ ರಸ್ತೆಗಳನ್ನು ನಿರ್ಮಿಸಿದ್ದರು, ಬಂದರುಗಳನ್ನಲ್ಲ. ಏಕೆಂದರೆ, ಆ ಕಾಲದ ಆರ್ಥಿಕ ಕಾರ್ಯತಂತ್ರವು ದೂರ–ದೇಶಗಳೊಂದಿಗಿನ ವ್ಯಾಪಾರಗಳಿಗಾಗಿ ಹಡಗು–ಸಾಗಣೆಗಿಂತ ರಸ್ತೆ ಸಾರಿಗೆಯನ್ನು ಹೆಚ್ಚಾಗಿ ಅವಲಂಬಿಸಿತ್ತು.

ವಸಾಹತುಶಾಹಿ ಯುಗದಲ್ಲಿ ಭಾರತದಲ್ಲಿ ರೈಲ್ವೆಗಳ ಅಭಿವೃದ್ಧಿಯನ್ನು ಬಂದರುಗಳು ನೆರವೇರಿಸುತ್ತಿದ್ದ ಉದ್ದೇಶಗಳಿಗಾಗಿಯೇ ಕೈಗೊಳ್ಳಲಾಯಿತು. ಕಚ್ಚಾ ಸಾಮಗ್ರಿಗಳ ಸಾಗಣೆಯೇ ಭಾರತೀಯ ರೈಲ್ವೆ ಜಾಲದ ಮುಖ್ಯ ಗುರಿಯಾಗಿತ್ತು ಎಂಬುದಾಗಿ ಆರ್ಥಿಕ ಇತಿಹಾಸಕಾರ ದಿವಂಗತ ಇಯಾನ್ ಮ್ಯಾಕ್ಫರ್ಸನ್ ವಾದಿಸಿದ್ದಾರೆ. ನಾವು ಇಲ್ಲಿ ಈ ಅಂಶದ ಬಗ್ಗೆ ಚರ್ಚಿಸುತ್ತಿಲ್ಲ. ವಿಷಯವೆಂದರೆ, ವಸಾಹತುಶಾಹಿ ಭಾರತದ ಅರ್ಥವ್ಯವಸ್ಥೆಯು ರೈಲ್ವೆಯಲ್ಲಿ ಹೂಡಿಕೆಯನ್ನು ಅಗತ್ಯಗೊಳಿಸಿತು ಎಂಬುದು. ಈ ಉದ್ದೇಶಕ್ಕಾಗಿ ವಸಾಹತುಶಾಹಿ ಆಡಳಿತವು ರೈಲ್ವೆ ವಲಯದಲ್ಲಿ ಹೂಡಿಕೆ ಮಾಡುವ ಖಾಸಗಿ ಕಂಪನಿಗಳಿಗೆ ಖಾತರಿಯ ಆದಾಯವನ್ನು ನೀಡಲು ಸಹ ಸಿದ್ಧವಾಗಿತ್ತು.

ರೈಲುಗಳು ಎಲ್ಲ ದೇಶಗಳಿಗೂ ಸದಾ ಉಪಯುಕ್ತವೇ ಆದ್ದರಿಂದ, ಅವುಗಳನ್ನು ನಿರ್ಮಿಸಿದ ನಿರ್ದಿಷ್ಟ ಉದ್ದೇಶವು ಅಪ್ರಸ್ತುತವಾಗುತ್ತದೆ. ಹಾಗೆ ನೋಡಿದರೆ ಮೂಲಸೌಕರ್ಯದ ನಿರ್ಮಾಣವನ್ನು ಅನುಸರಿಸಲಾಗುತ್ತಿರುವ ಆರ್ಥಿಕ ಕಾರ್ಯತಂತ್ರದೊಂದಿಗೆ ತಳುಕು ಹಾಕುವುದೇ ಅಪ್ರಸ್ತುತ. ಏಕೆಂದರೆ, ಮೂಲಸೌಕರ್ಯಗಳು ಸದಾ ಉಪಯುಕ್ತವೇ. ಆದ್ದರಿಂದ ಅವುಗಳನ್ನು ನಿರ್ಮಿಸಲೇಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮೂಲಸೌಕರ್ಯಗಳಿಗಾಗಿ ಮಾಡುವ ಹೂಡಿಕೆ ಸದಾ ಒಳ್ಳೆಯದೇ ಎಂಬ ಈ ದೃಷ್ಟಿಕೋನವು ನಾನು ಇಲ್ಲಿಯವರೆಗೆ ಮಾಡಿದ ವಾದಕ್ಕೆ ತದ್ವಿರುದ್ಧವಾಗಿದೆ.




ಆರ್ಥಿಕ ಕಾರ್ಯತಂತ್ರದ ಪ್ರಶ್ನೆ

ಕೆಲವು ನಿರ್ದಿಷ್ಟ ಮೂಲಸೌಕರ್ಯ ಯೋಜನೆಗಳು ಭವಿಷ್ಯದಲ್ಲಿ ಉಪಯೋಗವಾಗುತ್ತವೆ ಎಂಬ ನೆಲೆಯಲ್ಲಿ ಅವುಗಳ ನಿರ್ಮಾಣಕ್ಕಾಗಿ ಇಂದು ಹಣ ಸುರಿಯುವುದು ವಿವೇಕದ ಕೆಲಸವಲ್ಲ. ಒಂದು ವೇಳೆ ಗಣನೀಯ ಸಂಪನ್ಮೂಲಗಳನ್ನು ಅಂತಹ ಉದ್ದೇಶಗಳಿಗಾಗಿ ಬಳಸಿದಾಗ ಅದರ ಕಾರಣವು ಆಚರಣೆಯಲ್ಲಿರುವ ನಿರ್ದಿಷ್ಟ ಆರ್ಥಿಕ ಕಾರ್ಯತಂತ್ರಕ್ಕೆ ಸಂಬಂಧಿಸಿರುತ್ತದೆ. ಅದೇನೇ ಇರಲಿ, ಸಂಪನ್ಮೂಲಗಳು ವಿರಳವೇ. ಅವುಗಳನ್ನು ಒಂದು ಉದ್ದೇಶಕ್ಕಾಗಿ ಬಳಸಿದಾಗ, ಅವುಗಳನ್ನು ಬೇರೊಂದು ಉದ್ದೇಶಕ್ಕೆ ಬಳಸುವುದು ತಪ್ಪುತ್ತದೆ. ಹಾಗಾಗಿ, ಅವುಗಳನ್ನು ಹೇಗೆ ಬಳಸಲಾಗುತ್ತದೆ ಎಂಬುದು ಆಯ್ಕೆಯ ವಿಷಯವಾಗುತ್ತದೆ. ಈ ಆಯ್ಕೆಯನ್ನು ಆಚರಣೆಯಲ್ಲಿರುವ ಆರ್ಥಿಕ ಕಾರ್ಯತಂತ್ರವು ನಿಯಂತ್ರಿಸುತ್ತದೆ.

'ಆಧುನಿಕತೆ'ಯನ್ನು ಕಾರ್ಲ್ ಮಾರ್ಕ್ಸ್ ಬೆಂಬಲಿಸಿದರು ಎಂಬ ಕಾರಣದ ಮೇಲೆ, ಜನರಿಗೆ ನೇರವಾಗಿ ಮತ್ತು ತಕ್ಷಣದಲ್ಲಿ ಅಲ್ಲದಿದ್ದರೂ ಕಾಲ ಕ್ರಮೇಣ ಉಪಯೋಗಕ್ಕೆ ಬರುವ ಮೂಲಸೌಕರ್ಯ ಯೋಜನೆಗಳನ್ನು ಅವರು ಅನುಮೋದಿಸುತ್ತಿದ್ದರು ಎಂಬ ಒಂದು ಅಭಿಪ್ರಾಯವಿದೆ. ಉದಾಹರಣೆಗೆ, ಭಾರತದಲ್ಲಿ ರೈಲ್ವೆಗಳ ನಿರ್ಮಾಣದ ವಿಷಯದಲ್ಲಿ, ಅವು ವಸಾಹತುಶಾಹಿಗಳ ಹಿತಾಸಕ್ತಿಗಳನ್ನು ಪೂರೈಸುತ್ತಿದ್ದರೂ ಸಹ, ದೀರ್ಘಾವಧಿಯಲ್ಲಿ ಭಾರತದ ಅರ್ಥವ್ಯವಸ್ಥೆಯನ್ನು ಆಧುನೀಕರಿಸುವಲ್ಲಿ ಅವು ವಹಿಸುವ ಪಾತ್ರದಿಂದಾಗಿ, ಅವುಗಳ ನಿರ್ಮಾಣವನ್ನು ಮಾರ್ಕ್ಸ್ ಅನುಮೋದಿಸುತ್ತಿದ್ದರು ಎಂಬ ಒಂದು ಗ್ರಹಿಕೆ ಇದೆ. ಆದರೆ, "ಆಧುನಿಕತಾವಾದಿ ನಿಲುವು" ಎಂದು ಕರೆಯಲಾದ ಈ ನಿಲುವಿಗೆ ತದ್ವಿರುದ್ಧವಾದ ನಿಲುವನ್ನು ಮಾರ್ಕ್ಸ್ ತೆಗೆದುಕೊಂಡಿದ್ದರು ಎಂಬ ಅಂಶವು ಗಮನಾರ್ಹವಾಗಿದೆ. 'ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್'ನಲ್ಲಿ ಭಾರತದ ಬಗ್ಗೆ ಬರೆದ ತಮ್ಮ ಲೇಖನವೊಂದರಲ್ಲಿ ಮಾರ್ಕ್ಸ್, ಬ್ರಿಟಿಷ್ ವಸಾಹತುಶಾಹಿಯು ಭಾರತದಲ್ಲಿ ನಿರ್ಮಿಸಿದ ರೈಲ್ವೆಗಳನ್ನು "ಹಿಂದೂಗಳಿಗೆ ನಿಷ್ಪ್ರಯೋಜಕ" ಎಂದು ಬಣ್ಣಿಸಿದ್ದಾರೆ.

ಮಾರ್ಕ್ಸ್ ಅಕ್ಷರಶಃ ಇದೇ ಭಾವನೆ ಹೊಂದಿದ್ದರು ಎಂದು ಹೇಳಲಾಗದು. ಅವುಗಳ ಪ್ರಸ್ತುತ ಉಪಯುಕ್ತತೆಯನ್ನು ಬದಿಗಿಟ್ಟು ನೋಡಿದರೂ ಸಹ, ರೈಲ್ವೆಗಳು ಹೊಸದಾಗಿ ಸ್ಥಾಪನೆಯಾದ ಸಮಯದಲ್ಲೂ ಭಾರತದ ಜನರಿಗೆ ಉಪಯುಕ್ತವಾಗಿದ್ದವು. ಅರ್ಥವ್ಯವಸ್ಥೆಯನ್ನು ವಸಾಹತುಶಾಹಿ ಶೋಷಣೆಗೆ ತೆರೆಯುವುದೇ ರೈಲ್ವೆಗಳ ಸ್ಥಾಪನೆಯ ಉದ್ದೇಶವಿರಬಹುದು. ಆದರೆ ಅವುಗಳನ್ನು ಭಾರತೀಯರಿಗೆ "ನಿಷ್ಪ್ರಯೋಜಕ" ಎಂದು ಕರೆಯುವುದು

ಪುಟ 15 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಚೀನಾ ವಿಜ್ಞಾನ–ತಂತ್ರಜ್ಞಾನದ ಸೂಪರ್ ಪವರ್ ಆಗಿ ಬಿಟ್ಟಿದೆಯೇ?

ಜಗದ ಸುತ್ತ

ವಸಂತರಾಜ ಎನ್.ಕೆ.

ಹೌದು. ಜಗತ್ತಿನ ಭವಿಷ್ಯ ನಿರ್ಧರಿಸುವಲ್ಲಿ ಮಹತ್ವದ ಮತ್ತು ನಿರ್ಣಾಯಕ ಪಾತ್ರ ವಹಿಸುವ ವಿಜ್ಞಾನ–ತಂತ್ರಜ್ಞಾನದ 44 **(Critical Technology)** ಕ್ಷೇತ್ರಗಳಲ್ಲಿ 37ರಲ್ಲಿ ಚೀನಾ ಮುಂದಿದೆ, ಎನ್ನುತ್ತದೆ ಆಸ್ಟ್ರೇಲಿಯಾದ ವ್ಯೂಹಾತ್ಮಕ ನೀತಿ ಅಧ್ಯಯನ ಸಂಸ್ಥೆ (Australian Strategic Policy Institute - ASPI) ಇತ್ತೀಚೆಗೆ ಪ್ರಕಟಿಸಿರುವ 'Critical Technology Tracker' ಎಂಬ ವಿಶ್ಲೇಷಣಾತ್ಮಕ ಅಧ್ಯಯನ ವರದಿ. ಯು.ಎಸ್ 7 ಕ್ಷೇತ್ರಗಳಲ್ಲಿ ಮೊದಲಿನ ಸ್ಥಾನದಲ್ಲಿ ಮತ್ತು ಹೆಚ್ಚಿನ ಇತರ ಕ್ಷೇತ್ರಗಳಲ್ಲಿ ಎರಡನೆಯ ಸ್ಥಾನದಲ್ಲಿದೆ. ಈ ವರದಿಯ ಪ್ರಕಾರ ಒಂದು ದಶಕದ ಹಿಂದೆ ಈ ಹೆಚ್ಚಿನ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದ ಯು.ಎಸ್. ಈಗ ದೂರದ ಎರಡನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಚೀನಾ 5ಜಿ, ಸೆಮಿಕಂಡಕ್ಟರ್ ಚಿಪ್, ಕೃತಕ ಬುದ್ಧಿಮತ್ತೆ ಇತ್ಯಾದಿ ಕ್ಷೇತ್ರಗಳಲ್ಲಿ ಮುನ್ನಡೆ ಬಗ್ಗೆ ಪಾಶ್ಚಿಮಾತ್ಯ ದೇಶಗಳಿಗೆ ಅರಿವಿದ್ದು ಅದರಿಂದಾಗಿಯೇ ಈ ಕೈಗಾರಿಕೆಗೆ ಯು.ಎಸ್. ನಾಯಕತ್ವದಲ್ಲಿ ಪಾಶ್ಚಿಮಾತ್ಯ ದೇಶಗಳು ದಿಗ್ಬಂಧನಗಳನ್ನು ಹಾಕಿದ್ದವು. ಬಲೂನಿನ ಬೆದರಿಕೆ ಬಗ್ಗೆ ಬೊಬ್ಬೆ ಹಾಕಿದ್ದವು. ಆದರೆ ಚೀನಾದ ಮುನ್ನಡೆ ಇಷ್ಟು ಸಮಗ್ರವಾಗಿದೆ ತೀವ್ರವಾಗಿದೆ ಎಂಬುದು ಬಹುಶಃ ಈ ದೇಶಗಳಿಗೂ ಅಚ್ಚರಿ ತಂದಿರಬೇಕು.

ಭಾರತ ಮತ್ತು ಯು.ಕೆ ಮೂರನೇಯ ಸ್ಥಾನಕ್ಕೆ ಪೈಪೋಟಿಯಲ್ಲಿವೆ ಎಂಬುದು ಈ ವರದಿ ಹೊರಗೆಡಹುವ ಇನ್ನೊಂದು ಅಚ್ಚರಿಯ ಸಂಗತಿ. ಈ 44 ನಿರ್ಣಾಯಕ ಕ್ಷೇತ್ರಗಳಲ್ಲಿ 29ರಲ್ಲಿ ಭಾರತ ಮತ್ತು ಯು.ಕೆ ಅತ್ಯಂತ ಅಭಿವೃದ್ಧ 5 (ಟಾಪ್–5) ದೇಶಗಳ ಪಟ್ಟಿಯಲ್ಲಿದೆ. ದಕ್ಷಿಣ ಕೊರಿಯಾ ಮತ್ತು ಜರ್ಮನಿ ಅನುಕ್ರಮವಾಗಿ 20 ಮತ್ತು 17 ನಿರ್ಣಾಯಕ ಕ್ಷೇತ್ರಗಳಲ್ಲಿ ಟಾಪ್–5 ಪಟ್ಟಿಯಲ್ಲಿವೆ ಆಸ್ಟ್ರೇಲಿಯಾ 9, ಇಟಲಿ 7, ಇರಾನ್ 6, ಜಪಾನ್ 4, ಕೆನಡಾ 4 ಕ್ಷೇತ್ರಗಳ ಟಾಪ್–5 ದೇಶಗಳ ಪಟ್ಟಿಯಲ್ಲಿವೆ. ಈ ಮಾಹಿತಿಯಿಂದ ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಮೇಲುಗೈಗೆ ಪೈಪೋಟಿಯಲ್ಲಿ 'ಪಾಶ್ಚಿಮಾತ್ಯ' (ಜಿ–7 ಹೇಳುವುದು ಹೆಚ್ಚು ಸರಿಯಾದೀತು) ದೇಶಗಳು ತಮ್ಮ ಏಕಸ್ವಾಮ್ಯ, ಯಜಮಾನಿಕೆಗಳನ್ನು ಕಳೆದುಕೊಂಡಿವೆ ಎಂಬಂತೆ ಕಾಣುತ್ತಿದೆ.

ವರದಿಯ ದತ್ತಾಂಶ, ವಿಧಾನ

ಈ ವರದಿಯನ್ನು ನಂಬಬಹುದೇ? ಇದು ಚೀನಾದ ಪ್ರಚಾರದ ಭಾಗವೇ? ಅಥವಾ ಪೆಡಂಭೂತ ಚೀನಾದ ಕುರಿತು ಅತಿಶಯವಾದ ಬೆದರಿಕೆ ಹುಟ್ಟಿಸುವ ಪಾಶ್ಚಿಮಾತ್ಯ ಪ್ರಚಾರವೇ? ನಿರ್ಣಾಯಕ ಪಾತ್ರ ವಹಿಸುವ ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರಗಳ ಪ್ರಗತಿ ಸಾಮಾನ್ಯವಾಗಿ 'ರಾಷ್ಟ್ರೀಯ ಗೋಪ್ಯ' ಸಂಗತಿ, ಈ ಕುರಿತು ನಂಬಲರ್ಹ ಮಾಹಿತಿ ಸಂಗ್ರಹಿಸಲು ಸಾಧ್ಯವೇ? ಈ ಮೇಲಿನ ಸುದ್ದಿ ಕೇಳಿದವರಲ್ಲಿ ಏಳುವ ಪ್ರಶ್ನೆಗಳು ಇವು. ಇದಕ್ಕಾಗಿ 'Critical Technology Tracker' ವರದಿ ತಯಾರಿಸಲು ASPI ಬಳಸಿರುವ ಮಾಹಿತಿ, ಅದರ ಮೂಲ, ವಿಶ್ಲೇಷಣಾ ವಿಧಾನವನ್ನು ಪರಿಶೀಲಿಸಬೇಕಾಗುತ್ತದೆ.


ಈ ವರದಿ ನಿಗದಿಪಡಿಸಿದ ನಿರ್ದಿಷ್ಟ ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕಳೆದ 5 ವರ್ಷಗಳಲ್ಲಿ 'ಅತ್ಯಂತ ಪರಿಣಾಮಕಾರಿ' ಸಂಶೋಧನಾ (high-impact research) ಪ್ರಬಂಧಗಳಲ್ಲಿ ಪ್ರತಿ ದೇಶದ ಪಾಲನ್ನು ಪ್ರಮುಖ ದತ್ತಾಂಶವಾಗಿ ಪರಿಗಣಿಸುತ್ತದೆ. ಒಂದು ಕ್ಷೇತ್ರದ 'ಅತ್ಯಂತ ಪರಿಣಾಮಕಾರಿ' ಸಂಶೋಧನಾ ಪ್ರಬಂಧಗಳನ್ನು ಗುರುತಿಸುವುದು ಹೇಗೆ? ಆ ಕ್ಷೇತ್ರದ ಪ್ರಬಂಧಗಳಲ್ಲಿ ಅತ್ಯಂತ ಹೆಚ್ಚು ಉಲ್ಲೇಖಗಳನ್ನು (most highly cited) ಪಡೆದ ಟಾಪ್–10% ಸಂಶೋಧನಾ ಪ್ರಬಂಧಗಳನ್ನು 'ಅತ್ಯಂತ ಪರಿಣಾಮಕಾರಿ' ಎಂದು ಗುರುತಿಸಲಾಗುತ್ತದೆ. ಈ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ ವಿಜ್ಞಾನಿ–ತಂತ್ರಜ್ಞಾನಿಗಳು, ಅವರು ಕೆಲಸ ಮಾಡುವ ಸಂಶೋಧನಾ ಸಂಸ್ಥೆಗಳು, ದೇಶಗಳ ಕುರಿತು ಮಾಹಿತಿ ಇತರ ದತ್ತಾಂಶಗಳು. ಈ ವಿಜ್ಞಾನಿ–ತಂತ್ರಜ್ಞಾನಿಗಳು ಶಿಕ್ಷಣ ಪಡೆದ ಸಂಸ್ಥೆಗಳು, ಪರಿಣತಿಯ ಅವಧಿ, ಸಂಶೋಧನೆಯಲ್ಲಿ ತೊಡಗಿಕೊಂಡ ಇತರ ಸಂಸ್ಥೆಗಳು ಇತ್ಯಾದಿ ಮಾಹಿತಿಗಳನ್ನೂ ಪರಿಶೀಲಿಸುತ್ತದೆ. ಇದೇ ರೀತಿ ಸಂಶೋದನಾ ಸಂಸ್ಥೆಗಳ ಕುರಿತ ಮಾಹಿತಿಗಳನ್ನು ಪರಿಶೀಲಿಸುತ್ತದೆ. ಆಯಾ ಕ್ಷೇತ್ರದಲ್ಲಿ ಒಂದು ದೇಶದ ಸ್ಥಳೀಯ/ವಿದೇಶಿ ವಿಜ್ಞಾನಿಗಳ ಪ್ರಮಾಣಗಳನ್ನೂ ಪರಿಶೀಲಿಸಿ ಯಾವ ದೇಶದಿಂದ ಯಾವ ದೇಶಕ್ಕೆ ಪ್ರತಿಭಾ ಪಲಾಯನವಾಗುತ್ತಿದೆ ಎಂಬುದನ್ನೂ ಪರಿಶೀಲಿಸುತ್ತದೆ. ಆಯಾ ದೇಶ ವಿಜ್ಞಾನಿಗಳಿಗೆ, ಸಂಶೋಧನಾ ಸಂಸ್ಥೆಗಳಿಗೆ, ಶಿಕ್ಷಣ–ಸಂಶೋಧನೆಗಳ ನಡುವಿನ ಕೊಂಡಿ ಇತ್ಯಾದಿಗಳ ಕುರಿತು ಆಯಾ ದೇಶದ ನೀತಿ ಮತ್ತು ದೀರ್ಘಕಾಲೀನ ಯೋಜನೆ/ವ್ಯೂಹಗಳನ್ನು ಸಹ ವಿಶ್ಲೇಷಣಾ ವಿಧಾನ ಪರಿಶೀಲಿಸುತ್ತದೆ.

ಕೃತಕ ಬುದ್ಧಿಮತ್ತೆ, 5ಜಿ, ಸೆಮಿಕಂಡಕ್ಟರ್ ಮುಂತಾದ ವಿಜ್ಞಾನ–ತಂತ್ರಜ್ಞಾನದ ಮುಂಚೂಣಿ ಕ್ಷೇತ್ರಗಳಲ್ಲಿ ಚೀನಾ ಸ್ವಾವಲಂಬನೆ ಮತ್ತು ಉತ್ತಮ ಮುನ್ನಡೆ ಸಾಧಿಸಿದೆ ಎಂಬುದು ಸರ್ವವಿದಿತ. ಚೀನಾದ 5ಜಿ, ಸೆಮಿಕಂಡಕ್ಟರ್ ಚಿಪ್ ಕೈಗಾರಿಕೆಗೆ ಪಾಶ್ಚಿಮಾತ್ಯ ದಿಗ್ಬಂಧನಗಳು, ಬಲೂನು ಬೆದರಿಕೆ ಪ್ರಕರಣ–ಇವುಗಳಲ್ಲಿ ವ್ಯಕ್ತವಾದ ಆತಂಕಕ್ಕೆ ಇದೇ ಕಾರಣ. ಆದರೆ ಇಂತಹ 44 ಕ್ಷೇತ್ರಗಳಲ್ಲಿ ಚೀನಾ 37ರಲ್ಲಿ ಮೊದಲ ಸ್ಥಾನದಲ್ಲಿದೆ ಎಂಬ ಆಸ್ಟ್ರೇಲಿಯಾದ ಅಧ್ಯಯನ ಸಂಸ್ಥೆ ASPI ಇತ್ತೀಚೆಗೆ ಪ್ರಕಟಿಸಿರುವ 'Critical Technology Tracker' ಎಂಬ ವರದಿ ಅಚ್ಚರಿ ತಂದಿದೆ. ಈಗಾಗಲೇ ಪಾಶ್ಚಿಮಾತ್ಯ ಆಳುವ ವಲಯಗಳಲ್ಲಿ ಗಾಬರಿಯನ್ನೂ ತಂದಿದೆ. ಈ ವರದಿಯ ಪ್ರಕಾರ ಯು.ಎಸ್., ಯು.ಕೆ. ಬಿಟ್ಟರೆ ಇತರ ಜಿ–7 ದೇಶಗಳು ಈ ಕ್ಷೇತ್ರಗಳಲ್ಲಿ ಬಹಳ ಹಿಂದೆ ಬಿದ್ದಿವೆ, ಭಾರತ ಯುಕೆಯ ಜತೆಗೆ ಮೂರನೆಯ ಸ್ಥಾನದಲ್ಲಿದೆ ಎಂಬುದು ವರದಿಯ ಗಮನಾರ್ಹ ಅಂಶ. ಈ ವರದಿಯನ್ನು ನಂಬಬಹುದೇ? ಈ ವರದಿಯ ದತ್ತಾಂಶಗಳು, ವಿಶ್ಲೇಷಣಾ ವಿಧಾನ ಏನು? ಭಾರತದ ವಿಜ್ಞಾನ–ತಂತ್ರಜ್ಞಾನ ನೀತಿ ಯೋಜನೆ ಈ ವರದಿಯಿಂದ ಏನು ಕಲಿಯಬಹುದು? ವರದಿಯ ಮುಖ್ಯಾಂಶಗಳನ್ನು ತಿಳಿಸುತ್ತಲೇ ಈ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನ ಇಲ್ಲಿದೆ.

ನಿರ್ಣಾಯಕ ಕ್ಷೇತ್ರಗಳು ಯಾವುವು?

ನಿರ್ಣಾಯಕ ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರಗಳನ್ನು ಹೇಗೆ ಗುರುತಿಸಲಾಯಿತು? ಇಂದು ಮನುಕುಲದ ಮುಂದಿರುವ ಬಿಕ್ಕಟ್ಟುಗಳನ್ನು, ಸವಾಲುಗಳನ್ನು ಪರಿಹರಿಸಬಲ್ಲ, ಮತ್ತು ಈ ವರೆಗಿನ ಪ್ರಗತಿಗಯನ್ನು ಕಾಯ್ದುಕೊಂಡು ತೀವ್ರ ಮುನ್ನಡೆಗಳನ್ನು ಕೊಡಬಲ್ಲ ಮುಂಚೂಣಿ ಕ್ಷೇತ್ರಗಳನ್ನು ನಿರ್ಣಾಯಕ ಕ್ಷೇತ್ರಗಳೆಂದು ಗುರುತಿಸಲಾಯಿತು. ಉನ್ನತ ಮಟ್ಟದ ಹೊಸ ಸಾಮಗ್ರಿಗಳು ಮತ್ತು ಸಾಮೂಹಿಕ ಉತ್ಪಾದನಾ ವಲಯದಲ್ಲಿ 12 ಕ್ಷೇತ್ರಗಳು (ಉದಾ: ನಾನೋಸಾಮಗ್ರಿಗಳು ಮತ್ತು ಅವುಗಳ ಉತ್ಪಾದನೆ, ಸೂಪರ್ ಕಂಡಕ್ಟರ್ ಗಳು, 3–ಡಿ ಪ್ರಿಂಟಿಂಗ್), ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಮತ್ತು ಕಮ್ಯುನಿಕೇಶನ್ಸ್ ವಲಯದ 10 ಕ್ಷೇತ್ರಗಳು (ಉದಾ: ಯಂತ್ರದ ಕಲಿಕೆ, ಸೈಬರ್ ಭದ್ರತೆ, ಕೃತಕ ಬುದ್ಧಿಮತ್ತೆ ವಿಧಾನಗಳು ಮತ್ತು ವೇಗವರ್ಧಕ ಯಂತ್ರಾಂಶ), ಶಕ್ತಿ ಮತ್ತು ಪರಿಸರ ವಲಯದ 8 ಕ್ಷೇತ್ರಗಳು (ಉದಾ: ಬ್ಯಾಟರಿಗಳು, ಜೈವಿಕ ಇಂಧನಗಳು, ಪರಮಾಣು ಶಕ್ತಿ) ಕ್ವಾಂಟಂ ತಂತ್ರಜ್ಞಾನ ವಲಯದ 4 ಕ್ಷೇತ್ರಗಳು (ಉದಾ: ಕ್ವಾಂಟಂ ಕಂಪ್ಯೂಟರುಗಳು, ಇಂದ್ರಿಯಗಳು), ಜೈವಿಕ ತಂತ್ರಜ್ಞಾನ ವಲಯದ 3 ಕ್ಷೇತ್ರಗಳು, ರಕ್ಷಣೆ, ಬಾಹ್ಯಾಕಾಶ, ರೊಬೊಟಿಕ್ಸ್, ಸಾರಿಗೆ ವಲಯದ 6 ಕ್ಷೇತ್ರಗಳು (ಉದಾ: ಡ್ರೋನ್, ಹೈಪರ್ ಸೋನಿಕ್ ಸೇರಿದಂತೆ ಉನ್ನತ ವಿಮಾನ ಇಂಜಿನುಗಳು) – ಇವುಗಳನ್ನು ನಿರ್ಣಾಯಕ ಕ್ಷೇತ್ರಗಳೆಂದು ಗುರುತಿಸಲಾಗಿದೆ.

ಉನ್ನತ ಮಟ್ಟದ ಹೊಸ ಸಾಮಗ್ರಿಗಳು ಮತ್ತು ಸಾಮೂಹಿಕ ಉತ್ಪಾದನಾ ವಲಯದ ಎಲ್ಲ 12 ಕ್ಷೇತ್ರಗಳಲ್ಲಿ, ಹಾಗೂ ಶಕ್ತಿ ಮತ್ತು ಪರಿಸರ ವಲಯದ ಎಲ್ಲ 8 ಕ್ಷೇತ್ರಗಳಲ್ಲಿ ಚೀನಾ ನಂ.1 ಆಗಿದೆ. ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಮತ್ತು ಕಮ್ಯುನಿಕೇಶನ್ಸ್ ವಲಯದ 10 ಕ್ಷೇತ್ರಗಳಲ್ಲಿ 7 ರಲ್ಲಿ ಚೀನಾ, 3 ರಲ್ಲಿ ಯು.ಎಸ್ ಮೊದಲ ಸ್ಥಾನದಲ್ಲಿದೆ. ರಕ್ಷಣೆ,



ಬಾಹ್ಯಾಕಾಶ, ರೊಬೊಟಿಕ್ಸ್, ಸಾರಿಗೆ ವಲಯದ 6 ಕ್ಷೇತ್ರಗಳಲ್ಲಿ 4 ರಲ್ಲಿ ಚೀನಾ, 2 ರಲ್ಲಿ ಯು.ಎಸ್ ನಂಬರ್ 1 ಆಗಿದೆ. ಕ್ವಾಂಟಂ ವಲಯದ 4 ಕ್ಷೇತ್ರಗಳಲ್ಲಿ, 3 ರಲ್ಲಿ ಚೀನಾ, 1 ರಲ್ಲಿ ಯು.ಎಸ್ ಮೊದಲ ಸ್ಥಾನದಲ್ಲಿದೆ.

ಸಂಶೋಧನಾ ಸಂಸ್ಥೆಗಳಲ್ಲೂ ಚೀನಾ ಮುಂದು

ಚೀನಾ ಹೆಚ್ಚಿನ ಕ್ಷೇತ್ರಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಮಾತ್ರವಲ್ಲ, ಯು.ಎಸ್.ನ್ನು ದೂರದ ಎರಡನೆಯ ಸ್ಥಾನಕ್ಕೆ ತಳ್ಳಿದೆ. ಉದಾಹರಣೆಗೆ ಉನ್ನತ ಮಟ್ಟದ ಹೊಸ ಸಾಮಗ್ರಿಗಳು ಮತ್ತು ಸಾಮೂಹಿಕ ಉತ್ಪಾದನಾ ವಲಯದ 2 ಕ್ಷೇತ್ರಗಳಲ್ಲಿ (ನ್ಯಾನೊ ಸಾಮಗ್ರಿ ಸೇರಿದಂತೆ) ಅತ್ಯಂತ ಪರಿಣಾಮಕಾರಿ ಸಂಶೋದನಾ ಪ್ರಬಂಧಗಳ ಚೀನಾದ ಪಾಲು ಸುಮಾರು 58% ಆಗಿದ್ದು ಯು.ಎಸ್. ನ ಪಾಲಿನ 8 ಪಟ್ಟಿನಷ್ಟು ಇದೆ. ಇತರ 7 ಕ್ಷೇತ್ರಗಳಲ್ಲಿ ಚೀನಾದ ಪಾಲು ಯು.ಎಸ್ ನ ಪಾಲಿನ 2 ಮತ್ತು ಹೆಚ್ಚು ಪಟ್ಟಿನಷ್ಟು ಇದೆ. ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಮತ್ತು ಕಮ್ಯುನಿಕೇಶನ್ಸ್ ವಲಯದ 10 ಕ್ಷೇತ್ರಗಳಲ್ಲಿ, 6 ರಲ್ಲಿ ಚೀನಾದ ಪಾಲು ಯು.ಎಸ್ ನ ಪಾಲಿನ 2 ಮತ್ತು ಹೆಚ್ಚು ಪಟ್ಟಿನಷ್ಟು ಇದೆ.

ಸಂಶೋಧನಾ ಸಂಸ್ಥೆಗಳಲ್ಲೂ ಚೀನಾ ಬಹಳ ಮುಂದಿದೆ. ಕೆಲವು ನಿರ್ಣಾಯಕ ಕ್ಷೇತ್ರಗಳಲ್ಲಿ ಜಗತ್ತಿನ ಎಲ್ಲ ಟಾಪ್–10 ಸಂಸ್ಥೆಗಳೂ ಚೀನಾದವು ಹಾಗೂ ಎರಡನೆಯ ಸ್ಥಾನದಲ್ಲಿರುವ ದೇಶದ ಸಂಸ್ಥೆಗಳಿಗಿಂತ 9 ಪಟ್ಟು ಹೆಚ್ಚು ಅತ್ಯಂತ ಪರಿಣಾಮಕಾರಿ ಸಂಶೋದನಾ ಪ್ರಬಂಧಗಳನ್ನು ಪ್ರಕಟಿಸಿವೆ. ಚೀನಾ ವಿಜ್ಞಾನ ಅಕಾಡೆಮಿ 44 ರಲ್ಲಿ 27 ಕ್ಷೇತ್ರಗಳಲ್ಲಿ ಟಾಪ್–5 ಸಂಸ್ಥೆಗಳಲ್ಲಿ ಒಂದಾಗಿದೆ. ಅದರ 116 ಸಂಶೋದನಾ ಸಂಘಟನೆಗಳು ಹೆಚ್ಚು ಕಡಿಮೆ ಎಲ್ಲ ಕ್ಷೇತ್ರಗಳ ಸಂಶೋಧನೆಯಲ್ಲಿ ಸಕ್ರಿಯವಾಗಿವೆ. ಪರಿಣಾಮಕಾರಿ ಸಂಶೋದನಾ ಪ್ರಬಂಧಗಳನ್ನು ಪ್ರಕಟಿಸಿದ ಚೀನಾದ ವಿಜ್ಞಾನಿ–ತಂತ್ರಜ್ಞಾನಿಗಳಲ್ಲಿ ಶೇ.80 ದೇಶದಲ್ಲೇ ಶಿಕ್ಷಣ ಪಡೆದು ದೇಶದಲ್ಲೇ ಸಂಶೋಧನೆಯಲ್ಲಿ ತೊಡಗಿರುವವರು. ಅವರು ಶಿಕ್ಷಣ ಅಥವಾ ಸಂಶೋಧನೆಗಾಗಿ ವಿದೇಶಗಳಿಗೆ ಹೋದವರಲ್ಲ ಎಂಬುದು ಗಮನಾರ್ಹ.

ಸಂಶೋಧನೆಯಲ್ಲಿ ಮೇಲುಗೈಯಿಂದ ಉತ್ಪನ್ನಗಳಲ್ಲಿ ಮೇಲುಗೈ ಆಗಬೇಕಿಲ್ಲ

ಆದರೆ ಯಾವುದೇ ಕ್ಷೇತ್ರದಲ್ಲಿ ಅತ್ಯಂತ ಪರಿಣಾಮಕಾರಿ ಸಂಶೋಧನಾ ಪ್ರಬಂಧ ಪ್ರಕಟಣೆಯಲ್ಲಿ ಮೈಲುಗೈ ಸಾಧಿಸಲಾಗಿದೆ ಎಂಬುದು, ಆ ಕ್ಷೇತ್ರದಲ್ಲಿ ಅದನ್ನು ಬಳಸಿ ಉತ್ತಮ ಗುಣಮಟ್ಟದ ಪರಿಣಾಮಕಾರಿ ಉತ್ಪನ್ನಗಳ ಡಿಸೈನ್, ಸಾಮೂಹಿಕ ಉತ್ಪಾದನೆಗೆ ತನ್ನಷ್ಟಕ್ಕೆ ಹಾದಿ ಮಾಡಿ ಕೊಡುತ್ತದಾ ಅಂತ ವರದಿ ಸ್ವಯಂ–ವಿಮರ್ಶಾತ್ಮಕವಾಗಿ ಕೇಳಿಕೊಳ್ಳುತ್ತದೆ. ಹೌದು, ಉತ್ತಮ ಸಂಶೋಧನೆಯನ್ನು ಡಿಸೈನ್, ಉತ್ಪಾದನೆಗೆ ಅಳವಡಿಸಲು ಇನ್ನೂ ಹಲವು ಸಾಮರ್ಥ್ಯಗಳು, ಕಾರ್ಯಕ್ರಮಗಳು, ಯೋಜನೆಗಳು ಬೇಕಾಗುತ್ತವೆ. ಆದರೆ ಈ ವಿಶ್ಲೇಷಣೆ ಭವಿಷ್ಯದಲ್ಲಂತೂ ಅಂತಹ ಸಾಧ್ಯತೆಗೆ ಕ್ಷಮತೆಯತ್ತ ಮುನ್ನಡೆಯ ಸರಿಯಾದ ಸೂಚನೆಯನ್ನಂತೂ ಕೊಡುತ್ತದೆ ಎಂದು ಉತ್ತರಿಸುತ್ತದೆ. ಚೀನಾ ಉತ್ತಮ ಗುಣಮಟ್ಟದ ಡಿಸೈನ್, ಸಾಮೂಹಿಕ ಉತ್ಪಾದನೆಯಲ್ಲಿ ಸಾರ್ವತ್ರಿಕ ಕ್ಷಮತೆಯನ್ನಂತೂ ಬೆಳೆಸಿರುವುದರಿಂದ ಈ ನಿಟ್ಟಿನಲ್ಲಿ ಪ್ರಮುಖ ಸವಾಲುಗಳೇನೂ ಎದುರಾಗಲಿಕ್ಕಿಲ್ಲ.

ಅಲ್ಲದೆ ವಿಜ್ಞಾನ–ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವ ಕುರಿತು ಚೀನಾದ ರಾಜಕೀಯ ನಾಯಕತ್ವದ ಬದ್ಧತೆ, ವ್ಯೂಹಾತ್ಮಕ ಯೋಜನೆ, ಅದರ ದಕ್ಷ ಜಾರಿಯ ಫಲಿತವೇ ಈ ವರದಿ ಸೂಚಿಸುತ್ತಿರುವ ಮುನ್ನಡೆ ಎಂಬುದರತ್ತ ಗಮನ ಸೆಳೆಯುತ್ತದೆ.

ಭಾರತ ಏನು ಕಲಿಯಬಹುದು?

ವರದಿ ಚೀನಾದ ಮುನ್ನಡೆಯನ್ನು ವಸ್ತುನಿಷ್ಠವಾಗಿ ದಾಖಲಿಸುತ್ತಲೇ ಅದೊಂದು ಜಾಗತಿಕ ಅಪಾಯವೆಂದೇ ಬಿಂಬಿಸುತ್ತದೆ. ವರದಿ ರಾಜಕೀಯವಾಗಿ ತಟಸ್ಥವಾಗೇನಿಲ್ಲ. ವಿಜ್ಞಾನ–ತಂತ್ರಜ್ಞಾನದ ಮುಂಚೂಣಿ ಕ್ಷೇತ್ರಗಳಲ್ಲಿ ತಮ್ಮ ಏಕಸ್ವಾಮ್ಯ, ಯಜಮಾನಿಕೆ ಹೋಗುತ್ತಿದೆ ಎಂಬ ಯು.ಎಸ್. ನಾಯಕತ್ವದ ಪಾಶ್ಚಿಮಾತ್ಯ ದೇಶಗಳ ಗಾಬರಿ, ಆತಂಕಗಳನ್ನು ಬಿಂಬಿಸುತ್ತದೆ. 44 ನಿರ್ಣಾಯಕ ಕ್ಷೇತ್ರಗಳಲ್ಲಿ 37ರಲ್ಲಿ ಚೀನಾದ ಪ್ರಾಬಲ್ಯ 'ಪ್ರಜಾಪ್ರಭುತ್ವ ಜಗತ್ತಿಗೆ' ಗಂಭೀರ ಅಪಾಯ ಎಂದು ಹೇಳುತ್ತದೆ. (ಇದನ್ನು ಪಾಶ್ಚಿಮಾತ್ಯ ಅಥವಾ ಜಿ–7 ದೇಶಗಳ ಯಜಮಾನಿಕೆಗೆ ಅಪಾಯ ಎಂದು ಓದಿಕೊಳ್ಳಬೇಕು) ಹಾಗಾದರೆ ಈ ವರೆಗಿದ್ದ ಯು.ಎಸ್ (ಪಾಶ್ಚಿಮಾತ್ಯ ಅಥವಾ ಜಿ–7 ➚

ಉರೀಗೌಡ-ದೊಡ್ಡ ನಂಜೇಗೌಡ ಫ್ಲೆಕ್ಸ್ ತೆರವುಗೊಳಿಸಿ-ಮಂಡ್ಯ ಶಾಂತವಾಗಿರಲು ಕ್ರಮ ಕೈಗೊಳ್ಳಿ ಜಿಲ್ಲಾಡಳಿತಕ್ಕೆ ಸಿಪಿಐ(ಎಂ) ಒತ್ತಾಯ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಜಿಲ್ಲೆಗೆ ಆಗಮಿಸುತ್ತಿರುವ ಹೊತ್ತಿನಲ್ಲಿ ಬಿಜೆಪಿ ಪಕ್ಷವು ಕಪೋಲಕಲ್ಪಿತವಾದ 'ಉರಿಗೌಡ & ದೊಡ್ಡ ನಂಜೇಗೌಡ' ಎಂಬ ಹೆಸರುಗಳಲ್ಲಿ ಹಾಕಿರುವ ಫ್ಲೆಕ್ಸ್‌ಗಳನ್ನು ಕೂಡಲೇ ತೆರವುಗೊಳಿಸಿ ಜಿಲ್ಲೆಯನ್ನು ಕೋಮು ದಳ್ಳುರಿಗೆ ತಳ್ಳುವ ಬಿಜೆಪಿಯ ಪ್ರಯತ್ನಗಳನ್ನು ವಿಫಲಗೊಳಿಸಬೇಕೆಂದು ಮಂಡ್ಯ ಜಿಲ್ಲಾಡಳಿತವನ್ನು ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.

ಸದರಿ ಫ್ಲೆಕ್ಸ್ ಬೋರ್ಡ್‌ನಲ್ಲಿ ಕೋಮು ಪ್ರಚೋದಿತ ಸುಳ್ಳು ಮತ್ತು ಅಶಾಂತಿ ಹರಡುವ ಉದ್ದೇಶಗಳು ಇರುವ ಕಾರಣ ಅದನ್ನು ಹಾಕಲು ಜಿಲ್ಲಾಡಳಿತವು ಅವಕಾಶ ನೀಡಬಾರದು. ಸರ್ಕಾರದ ಸಾರ್ವಜನಿಕ ಕಾರ್ಯಕ್ರಮಗಳಲ್ಲೇ ಇಂತಹ ಕೋಮುವಾದಿ ಮತ್ತು ಸುಳ್ಳಿನ ಪೋಸ್ಟರ್ ಗಳನ್ನು ಬಳಸುವುದು, ಪ್ರಚಾರ ಮಾಡುವುದು ಸಂವಿಧಾನದ ಆಶಯಗಳ ಉಲ್ಲಂಘನೆಯಾಗುತ್ತದೆ, ಬಿಜೆಪಿ ಮತ್ತು ಸಂಘ ಪರಿವಾರದ ಕೋಮುವಾದಿ ಉದ್ದೇಶವನ್ನು ಈಡೇರಿಸಿಕೊಳ್ಳಲು ಬಳಕೆಯಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ.

ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ನಕಲಿ ವ್ಯಕ್ತಿಗಳನ್ನು ಸೃಷ್ಟಿಸಿ ಅವರು ಟಿಪ್ಪುವನ್ನು ಕೊಂದ ಸೈನಿಕರು ಎಂದು ಸುಳ್ಳು ಕತೆ ಕಟ್ಟಿ ಒಕ್ಕಲಿಗರನ್ನು ಟಿಪ್ಪು ವಿರುದ್ಧ ಹೋರಾಡಿ ಬ್ರಿಟೀಷರಿಗೆ ಸಹಾಯ ಮಾಡಿದರು ಎಂದು ಬಿಂಬಿಸಲಾಗುತ್ತಿದೆ. ಆ ಮೂಲಕ ಒಕ್ಕಲಿಗರನ್ನು ಬ್ರಿಟೀಷರ ಏಜೆಂಟರು ಎಂದು ಅವಮಾನಿಸುವ ಕೆಲಸವನ್ನು ಬಿಜೆಪಿ ಮತ್ತು ಸಂಘ ಪರಿವಾರ ಮಾಡುತ್ತಿದೆ. ಇದರ ಮುಂದುವರಿಕೆಯಾಗಿ ಪ್ರಧಾನಿಯೊಬ್ಬರ ಭೇಟಿಯ ಘನತೆಯನ್ನೂ ಮಣ್ಣು ಪಾಲು ಮಾಡಿ ತನ್ನ ಸುಳ್ಳಿನ, ವಿಕೃತಿಯ ಪ್ರಚಾರದಲ್ಲಿ ಬಿಜೆಪಿ ನಿರತವಾಗಿದೆ.

ಜಿಲ್ಲಾಡಳಿತ ಇಂದು ಸಂಜೆಯೊಳಗೆ ಈ ವಿವಾದಾತ್ಮಕ, ವಿಕೃತ ಫ್ಲೆಕ್ಸ್ ಬೋರ್ಡ್‌ಗಳನ್ನು ತೆರವುಗೊಳಿಸಬೇಕು. ಇಲ್ಲವಾದಲ್ಲಿ ಸಿಪಿಐ(ಎಂ) ಮತ್ತು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮತ್ತು ಸಾರ್ವಜನಿಕರು ಇಂತಹ ಕೇಡಿನ ಕೆಲಸಗಳ ವಿರುದ್ಧ ತೀವ್ರವಾದ ಪ್ರತಿಭಟನೆಯನ್ನ ನಾಳೆಯೇ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸಿಪಿಐ(ಎಂ) ತಿಳಿಸುತ್ತದೆ. ಜಿಲ್ಲಾಡಳಿತ ಇದಕ್ಕೆ ಅವಕಾಶ ಕೊಡದೇ ಯಾವುದೇ ಮುಲಾಜುಗಳಿಗೆ ಒಳಗಾಗದೇ ಸಕ್ಕರೆ ಕಾರ್ಖಾನೆ ವೃತ್ತದಲ್ಲಿರುವ (ಬಿ.ಜಿ ದಾಸೇಗೌಡ ವೃತ್ತ) ಫ್ಲೆಕ್ಸ್ ಬೋರ್ಡ್‌ಗಳನ್ನ ತೆರವುಗೊಳಿಸಬೇಕೆಂದು ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಮಿತಿ ಆಗ್ರಹಿಸಿತು.

ಈ ಸಾರ್ವಜನಿಕ ಒತ್ತಡಕ್ಕೆ ಮಣಿದ ಜಿಲ್ಲಾಡಳಿತ ಆ ಫ್ಲೆಕ್ಸ್ ಬೋರ್ಡ್ ಗಳನ್ನ ತೆರವುಗೊಳಿಸಿ ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿ ಇವರ ಹೆಸರಿನ ಕಮಾನನ್ನು ಹಾಕಿಸಿತು. ಇದು ಜನತೆಯ ಹೋರಾಟಕ್ಕೆ ಸಂದ ಜಯ ಎಂದು ತಿಳಿಸಿರುವ ಸಿಪಿಐ(ಎಂ) ಜಾಗೃತ ಜನತೆಯನ್ನೂ ಹಾಗೂ ಜಿಲ್ಲಾಡಳಿತವನ್ನು ಅಭಿನಂದಿಸಿದೆ.

ಆರೋಗ್ಯ ದತ್ತಾಂಶಗಳನ್ನು ಅಲ್ಪಸಂಖ್ಯಾತರ ವಿರುದ್ಧ ಅಸ್ತ್ರವಾಗಿಸುತ್ತಿರುವ ಅಸ್ಸಾಂ ಪೋಲೀಸರು-ಬೃಂದಾ ಕಾರಟ್ ಖಂಡನೆ

ಅಸ್ಸಾಂ ಪೋಲಿಸರು ಗರ್ಭಿಣಿ ಯುವತಿಯರ ಆರೋಗ್ಯ ದತ್ತಾಂಶಗಳನ್ನು ಮತ್ತು ಯುವ ತಾಯಂದಿರ ಮಕ್ಕಳ ಜನನ ದತ್ತಾಂಶಗಳನ್ನು ಬಾಲವಿವಾಹಕ್ಕೆ ಸಂಬಂಧಪಟ್ಟ ಬಂಧನಗಳಿಗೆ ಅಸ್ತ್ರವಾಗಿಸಿಕೊಂಡಿದ್ದಾರೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ. ಅವರು ಅಸ್ಸಾಂನ ಬಾರ್ಪೇಟಾ ಮತ್ತು ಬೋಡೋ ಜಿಲ್ಲೆಗಳಲ್ಲಿ ಬಾಲ್ಯವಿವಾಹ ಪ್ರಕರಣಗಳಲ್ಲಿ ಬಂಧನಕ್ಕೊಳಗಾದವರ ಕುಟುಂಬಗಳನ್ನು ಭೇಟಿ ಮಾಡಿದ ನಂತರ ಮಾತನಾಡುತ್ತ, ಅತಿ ಹೆಚ್ಚು ಶೇಕಡಾವಾರು ಬಾಲ್ಯವಿವಾಹಗಳನ್ನು ಹೊಂದಿರುವ ಅಸ್ಸಾಂ ನಲ್ಲಿ ಬಾಲ್ಯವಿವಾಹವು ಗಂಭೀರ ಸಮಸ್ಯೆಯಾಗಿದೆ, ಎಲ್ಲಾ ಸಮುದಾಯಗಳ ಬಡವರನ್ನು ಇದು ತಟ್ಟಿದೆ, ಆದರೆ ಅಸ್ಸಾಂ ಸರ್ಕಾರದ ಬಾಲ್ಯವಿವಾಹ-ವಿರೋಧಿ ಅಭಿಯಾನ ಅಲ್ಪಸಂಖ್ಯಾತ ಸಮುದಾಯಗಳ ವಿರುದ್ಧವಷ್ಟೇ ಗಮನ ಕೇಂದ್ರೀಕರಿಸಿದೆ ಎಂದು ಹೇಳಿದ್ದಾರೆ.

ಎಐಡಿಡಬ್ಲ್ಯುಎ ರಾಜ್ಯಾಧ್ಯಕ್ಷೆ ಸ್ವರ್ಣಲತಾ ದಾಸ್ ಮತ್ತು ರಾಜ್ಯ ಕಾರ್ಯದರ್ಶಿ ನಿಯೋತಿ ಬರ್ಮನ್ ಅವರೊಂದಿಗೆ ಮಾರ್ಚ್ 9ರಂದು ಅವರು 15 ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಿದರು. ಎಲ್ಲಾ 15 ಪ್ರಕರಣಗಳಲ್ಲಿ ಯುವತಿಯರು ಒಂದು ತಿಂಗಳ ಅಥವಾ ಎರಡು ತಿಂಗಳ ಮಕ್ಕಳನ್ನು ಹೊಂದಿದ್ದರು ಅಥವಾ ಗರ್ಭಿಣಿಯಾಗಿದ್ದರು. ಇವರಲ್ಲಿ ಅನೇಕ ತಾಯಂದಿರು 18 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದರು. ಆದರೆ ಮನೆಯಿಂದ ಓಡಿ ಹೋಗಿ 18ರ ಮೊದಲೇ ಮದುವೆಯಾಗಿದ್ದವರು. ತಮ್ಮ ಗಂಡಂದಿರನ್ನು ಬಂಧಿಸಲು ಈ ದತ್ತಾಂಶಗಳನ್ನು ಬಳಸುತ್ತಿರುವುದರಿಂದ ಅವರು ಆರೋಗ್ಯಪಾಲನೆಯ ಸೇವೆಗಳನ್ನು ಪಡೆಯಲು ಭಯಪಡುತ್ತಿದ್ದಾರೆ. ಅಸ್ಸಾಂ ಸರ್ಕಾರವು ಅನೇಕ ಕಾನೂನುಗಳು ಮತ್ತು ವಿಧಿ-ವಿಧಾನಗಳನ್ನು ಉಲ್ಲಂಘಿಸುತ್ತಿದೆ, ಇದು ಅತ್ಯಂತ ಖಂಡನೀಯ ಎಂದು ಎಐಡಿಡಬ್ಲ್ಯುಎ ತಂಡ ಹೇಳಿದೆ.



ದೇಶಗಳ) ಪ್ರಾಬಲ್ಯ ಜಗತ್ತಿನ ಬಡದೇಶಗಳ ಬೆಳವಣಿಗೆಗೆ ಅಪಾಯಕರವಾಗಿರಲಿಲ್ಲವೇ?

ಈ 'ಅಪಾಯವನ್ನು' ಎದುರಿಸಲು ಎಲ್ಲ 'ಪ್ರಜಾಪ್ರಭುತ್ವ ದೇಶ'ಗಳು ಯಾವ ರೀತಿ ಪರಸ್ಪರ ಸಹಕರಿಸಬೇಕು, ಜಂಟಿ ಹೂಡಿಕೆ-ಯೋಜನೆಗಳನ್ನು ಮಾಡಬೇಕು ಇತ್ಯಾದಿ ಪರಿಹಾರಗಳನ್ನು ಸೂಚಿಸುತ್ತದೆ. ಆದರೆ ಜಗತ್ತಿನ ಯಾವುದೇ ದೇಶ ಒಂದು ಕ್ಷೇತ್ರದಲ್ಲಿ ಮುನ್ನಡೆಯನ್ನು ಏಕಸ್ವಾಮ್ಯವನ್ನು ಪ್ರಾಬಲ್ಯ ಸೂಪರ್ ಲಾಭಕ್ಕೆ ಬಳಸದೆ, ಎಲ್ಲ ದೇಶಗಳು ಪರಸ್ಪರ ಸಹಕಾರದಿಂದ ಮುನ್ನಡೆಯನ್ನು ತೀವ್ರಗೊಳಿಸಿ ಮನುಕುಲದ ಸಮಸ್ಯೆಗಳನ್ನು ಪರಿಹಾರ ಮಾಡುವತ್ತ ಹೋಗುವ ಬದಲಿ ಸಾಧ್ಯವಿಲ್ಲವೇ?

ಈ ವರದಿಯಿಂದ ಭಾರತ ಏನು ಕಲಿಯಬಹುದು? ಭಾರತ ಮೂರನೆಯ ಸ್ಥಾನದಲ್ಲಿರುವುದು ಮೊದಲ ದಶಕಗಳಲ್ಲಿ ವಿಜ್ಞಾನ-ತಂತ್ರಜ್ಞಾನದಲ್ಲಿ ಸ್ವಾವಲಂಬನೆಯ ನೀತಿ, ಯೋಜನೆಗಳನ್ನು ಕೈಗೊಂಡು ಶಿಕ್ಷಣ-ಸಂಶೋಧನೆಗಳ ಸ್ಥಾಪನೆಗೆ ಒತ್ತು ಕೊಟ್ಟಿದ್ದರ ಫಲ. ಸಂಶೋಧನಾ ಸಾಧನೆಯಿಂದ ಡಿಸೈನ್, ಉತ್ಪಾದನೆಯತ್ತ ಪಯಣದಲ್ಲಿನ ವರದಿ ಎತ್ತುವ ಸವಾಲುಗಳು ಬಹುಶಃ ಭಾರತಕ್ಕೆ ಹೆಚ್ಚು ಅನ್ವಯಿಸುತ್ತದೆ. 'ಮೇಕ್ ಇನ ಇಂಡಿಯಾ', ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳ ನಿರ್ವಹಣೆಯ ನೀತಿಗಳಲ್ಲಿ ಖಾಸಗಿ ಕ್ಷೇತ್ರದ ಮೇಲೆ ಅವಲಂಬನೆಯತ್ತ ಮಾಡಿರುವ ಬದಲಾವಣೆಗಳು ಈಗಿನ ಸಾಧನೆ ಮತ್ತು ಅದರ ಮುನ್ನಡೆಗೆ ಮಾರಕವಾದೀತು ಎಂಬುದನ್ನು ಕಲಿಯಬೇಕು. ವಿಜ್ಞಾನ-ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವ ಕುರಿತು ರಾಜಕೀಯ ನಾಯಕತ್ವದ ಬದ್ಧತೆ, ವ್ಯೂಹಾತ್ಮಕ ಯೋಜನೆ, ಅದರ ದಕ್ಷ ಜಾರಿಯ ಚೀನಾ ನೀತಿಯಿಂದ ಬಹಳಷ್ಟು ಕಲಿಯಬಹುದು. ಅದೇ ಸಮಯದಲ್ಲಿ ಯು.ಎಸ್ ನಾಯಕತ್ವದ ಪಾಶ್ಚಿಮಾತ್ಯ ಪ್ರಾಬಲ್ಯದ ಕುಸಿತ ಮತ್ತು ಚೀನಾದ ಮುನ್ನಡೆಯನ್ನು ಅಪಾಯವೆಂದು ಭಾರತ ಪರಿಗಣಿಸಬೇಕಿಲ್ಲ. ಮೇಲೆ ಹೇಳಿದ ಬದಲಿಯತ್ತ ಇಡೀ ಜಗತ್ತನ್ನು ಒಯ್ಯುವ ಪ್ರಯತ್ನ ಮಾಡಬಹುದು.

ಮೂಲಸೌಕರ್ಯದ ಬೇಡಿಕೆಯೂ....

ಪುಟ 13 ರಿಂದ

ಅತಿಯಾಗಿ ತೋರುತ್ತದೆ. ಆದರೆ, ಮಾರ್ಕ್ಸ್ ನಿಜಕ್ಕೂ ಉಲ್ಲೇಖಿಸಿದ ಸಂಗತಿಯೆಂದರೆ, ರೈಲ್ವೆ ಜಾಲವನ್ನು ನಿರ್ಮಿಸುವುದು ಭಾರತದ ಜನರ ಆದ್ಯತೆಯಾಗಿರಲಿಲ್ಲ; ವಸಾಹತುಶಾಹಿ ಆಡಳಿತಕ್ಕೆ ಅದು ಆದ್ಯತೆಯಾಗಿತ್ತು. ಅದಕ್ಕಾಗಿಯೇ ಅದನ್ನು ನಿರ್ಮಿಸಲಾಯಿತು. ಆದರೆ, ಭಾರತದ ಜನರಿಗೆ ಆ ಸಮಯದಲ್ಲಿ ಅದರ ಅಗತ್ಯವಿರಲಿಲ್ಲ ಮತ್ತು ಅವರು ಸ್ವತಂತ್ರರಾಗಿದ್ದರೆ ತಮ್ಮ ಸಂಪನ್ಮೂಲಗಳನ್ನು ಅದಕ್ಕಾಗಿ ಅಷ್ಟೊಂದು ಹಣವನ್ನು ಖರ್ಚು ಮಾಡುವ ಒತ್ತಾಯಕ್ಕೆ ಒಳಗಾಗುತ್ತಿರಲಿಲ್ಲ.

ಒಂದು ದೇಶದ ಮೂಲಸೌಕರ್ಯದ ಬೇಡಿಕೆಗಳು ಆ ದೇಶದೊಳಗೆ ಅನುಸರಿಸಲಾಗುವ ಆರ್ಥಿಕ ಕಾರ್ಯತಂತ್ರದ ಮೇಲೆ ಅವಲಂಬಿತವಾಗಿವೆ ಎಂಬ ಪ್ರತಿಪಾದನೆಯು ಅವುಗಳ ಕೊರತೆಯ ಬಗ್ಗೆ ಏನನ್ನೂ ಹೇಳುವುದಿಲ್ಲ. ಮೂಲಸೌಕರ್ಯಗಳಿಗಾಗಿ ಮಾಡುತ್ತಿರುವ ವೆಚ್ಚವನ್ನು "ಅತಿ ಹೆಚ್ಚು ಹೂಡಿಕೆ" ಎನ್ನುವಂತೆಯೇ ಇಲ್ಲ ಎಂಬ ಭಾವನೆಯ ಬಗ್ಗೆ ಈ ಹಿಂದೆ ಹೇಳಲಾಗಿದೆ. ಇದು ಸಾಮಾನ್ಯವಾಗಿ ಇರುವ ಪರಿಸ್ಥಿತಿಯೇ. ಏಕೆಂದರೆ ಮೂಲಸೌಕರ್ಯಗಳ ಕೊರತೆಗಳು ಸದಾ ಇದ್ದೇ ಇರುತ್ತವೆ. ಹೂಡಿಕೆಯು ಈ ಸಮಸ್ಯೆಯನ್ನು ನಿವಾರಿಸುತ್ತದೆ. ಆರ್ಥಿಕ ಕಾರ್ಯತಂತ್ರವು ಯಾವುದೇ ಇರಲಿ, ಅದಕ್ಕೆ ಅನುಗುಣವಾದ ಮೂಲಸೌಕರ್ಯವು ಒಂದು ನಿರ್ದಿಷ್ಟ ರೀತಿಯದ್ದೇ ಆಗಿರುತ್ತದೆ. ಮೂಲಸೌಕರ್ಯಗಳಂತೂ ಎಷ್ಟಿದ್ದರೂ ಸಾಕಾಗುವುದಿಲ್ಲ. ಹಾಗಾಗಿ, ಮೂಲಸೌಕರ್ಯಗಳ ಮೇಲಿನ ಹೂಡಿಕೆಯು ಸದಾ "ಸಮರ್ಥನೀಯ" ಎಂದೇ ಕಾಣಿಸುತ್ತದೆ. ಆದರೆ ಈ "ಸಮರ್ಥನೆಯು" ಆರ್ಥಿಕ ಕಾರ್ಯತಂತ್ರದೊಂದಿಗೆ ಸಂಬಂಧ ಹೊಂದಿದೆ ಎಂಬುದನ್ನು ಮರೆಯುವಂತಿಲ್ಲ.

ವರ್ಗ ಸ್ವರೂಪವನ್ನು ಮರೆಮಾಚುವ ಮಾರ್ಗ

ಒಂದು ಉದಾಹರಣೆಯನ್ನು ನೋಡೋಣ. ನವ ಉದಾರವಾದಿ ಆಳ್ವಿಕೆಯಲ್ಲಿ ಆರ್ಥಿಕ ಅಸಮಾನತೆಗಳು ಅಗಾಧವಾಗಿ ಬೆಳೆದಿವೆ. ಈ ವಿದ್ಯಮಾನವು ಒಂದು ನಿರ್ದಿಷ್ಟ ಮಾದರಿಯ ಬೇಡಿಕೆಯನ್ನು ಸೃಷ್ಟಿಸಿದೆ. ಈ ಬೇಡಿಕೆಯ ಒಂದು ಮುಖ್ಯ ಲಕ್ಷಣವೆಂದರೆ ವಾಯು-ಯಾನದಲ್ಲಿ ಆಗಿರುವ ಭಾರಿ ಹೆಚ್ಚಳವೇ. ಅದಕ್ಕಾಗಿ ದೇಶಾದ್ಯಂತ ವಿಮಾನ ನಿಲ್ದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಅವುಗಳನ್ನು ವಿಸ್ತರಿಸಬೇಕಾಗುತ್ತದೆ ಮತ್ತು ನವೀಕರಿಸಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ತೀವ್ರ ದಟ್ಟಣೆಯಾಗುತ್ತದೆ. ಅದು ಪ್ರಯಾಣಿಕರಿಗೆ ಅನಾನುಕೂಲತೆಯನ್ನು ಉಂಟುಮಾಡುತ್ತದೆ. ಈ ವಿದ್ಯಮಾನವು ವಿಮಾನ ನಿಲ್ದಾಣಗಳ ಮೇಲೆ ಹೂಡಿಕೆಯನ್ನು ಹೆಚ್ಚು ಮಾಡಲು ಸಮರ್ಥನೆಯನ್ನು ಒದಗಿಸುತ್ತದೆ. ಹೂಡಿಕೆಯು ಸಾರ್ವಜನಿಕ ವಲಯದ್ದೇ ಇರಲಿ ಅಥವಾ ಖಾಸಗಿ ವಲಯದ್ದೇ ಇರಲಿ, ಇಂತಹ ಹೂಡಿಕೆ ಸಂಪೂರ್ಣವಾಗಿ ತರ್ಕಬದ್ಧವೆಂದೆನಿಸುವುದರಿಂದ, ಇಂತಹ ಹೂಡಿಕೆಯ ವಿರುದ್ಧ ಯಾರೂ ವಾದಿಸುವಂತಿಲ್ಲ. ಆದರೆ ಈ ತರ್ಕಬದ್ಧತೆಯೆಂಬುದು ನವ ಉದಾರವಾದದ ಆರ್ಥಿಕ ಕಾರ್ಯತಂತ್ರಕ್ಕೆ ಮಾತ್ರ ಸಂವಾದಿಯಾಗಿದೆ. ಒಂದು ವೇಳೆ ಹೆಚ್ಚು ಸಮಾನತೆಯ ಆರ್ಥಿಕ ಅಭಿವೃದ್ಧಿಯ ಒಂದು ಪರ್ಯಾಯ ಕಾರ್ಯತಂತ್ರವೇ ಆಚರಣೆಯಲ್ಲಿದ್ದಿದ್ದರೆ, ವಿಮಾನ ಪ್ರಯಾಣದ ಮೇಲಿನ ಬೇಡಿಕೆ ತುಂಬಾ ಕಡಿಮೆ ಇರುತ್ತಿತ್ತು. ವಿಮಾನ ನಿಲ್ದಾಣಗಳಲ್ಲಿ ದಟ್ಟಣೆ ಕಡಿಮೆಯಾಗುತ್ತಿತ್ತು ಮತ್ತು ವಿಮಾನ ನಿಲ್ದಾಣಗಳನ್ನು ವಿಸ್ತರಿಸಲು ಮತ್ತು ನವೀಕರಿಸಲು ಹೆಚ್ಚಿನ ಹೂಡಿಕೆ ಅನಗತ್ಯವಾಗುತ್ತಿತ್ತು.

ಮೂಲಸೌಕರ್ಯಗಳ ಮೇಲಿನ ಬೇಡಿಕೆಯನ್ನು ಆಚರಣೆಯಲ್ಲಿರುವ ಆರ್ಥಿಕ ಕಾರ್ಯತಂತ್ರದಿಂದ ಬೇರ್ಪಡಿಸಿ ನೋಡುವ ಕ್ರಮವು ಅಂತಹ ಬೇಡಿಕೆಯ ಅಂತರ್ಗತ ವರ್ಗ ಸ್ವರೂಪವನ್ನು ಮರೆಮಾಚುವ ಒಂದು ಮಾರ್ಗವಾಗಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ ಮೂಲಸೌಕರ್ಯದ ಬೇಡಿಕೆಯೂ ಒಂದು ವರ್ಗ-ವಿಷಯವೇ. ಮೂಲಸೌಕರ್ಯಗಳನ್ನು ಒಂದು ಪವಿತ್ರ ಗೋವು ಎಂಬಂತೆ ನೋಡುವ ಕ್ರಮವು ಈ ವರ್ಗ ಪ್ರಶ್ನೆಯನ್ನು, ಅಂದರೆ ಅಭಿವೃದ್ಧಿಯ ವರ್ಗ ಸ್ವರೂಪವನ್ನು ಮರೆಮಾಚುತ್ತದೆ.

ಇಲ್ಲೊಂದು ನಿರ್ದಿಷ್ಟ ದ್ವಂದ್ವವೂ ಇದೆ. ಸರ್ಕಾರಗಳು ಆಗಾಗ್ಗೆ ಮಂಡಿಸುವ ವಾದವೆಂದರೆ, ಸಂಪನ್ಮೂಲಗಳ ಕೊರತೆಯಿಂದಾಗಿ ಆರೋಗ್ಯ ರಕ್ಷಣೆಗೆ ಧನಸಹಾಯ ನೀಡುವುದು ಸಾಧ್ಯವಿಲ್ಲ (ಸಾರ್ವಜನಿಕ ಆರೋಗ್ಯ ವೆಚ್ಚಗಳಿಗಾಗಿ ಜಿಡಿಪಿಯ ಶೇ. 3ರಷ್ಟನ್ನೂ ನಿಗದಿಪಡಿಸಿಲ್ಲ), ಅಥವಾ ಶಿಕ್ಷಣಕ್ಕೆ ಧನಸಹಾಯ ನೀಡಲು ಸಾಧ್ಯವಿಲ್ಲ (ದಶಕಗಳ ಹಿಂದೆ ಕೊಠಾರಿ ಆಯೋಗದ ಶಿಫಾರಸಿನ ಪ್ರಕಾರ ಜಿಡಿಪಿಯ ಶೇ. 6ರಷ್ಟನ್ನೂ ನಿಗದಿಪಡಿಸಿಲ್ಲ) ಎಂಬುದು. ಎಷ್ಟೇ ಸಂಪನ್ಮೂಲಗಳನ್ನು ಕ್ರೋಢೀಕರಿಸಿದರೂ ಸಹ, ಅದನ್ನು ತಮಗೆ ನೀಡುವಂತೆ ಹಲವು ದಾವೆಗಳಿರುತ್ತವೆ. ಅವುಗಳಲ್ಲಿ ಪ್ರಮುಖ ದಾವೇದಾರನೆಂದರೆ, ಮೂಲಸೌಕರ್ಯ ವಲಯವೇ. ಸಾರ್ವಜನಿಕ ಶಿಕ್ಷಣದ ಮೇಲಿನ ಮತ್ತು ಆರೋಗ್ಯ ರಕ್ಷಣೆಯ ಮೇಲಿನ ಈ ರೀತಿಯ ನಿರ್ಲಕ್ಷ್ಯವು, ಬಡವರನ್ನು ಹಿಂಡುವ ಮೂಲಕ ಮತ್ತು ಈ ಕ್ಷೇತ್ರಗಳಲ್ಲಿ ಲಾಭದಾಯಕ ಖಾಸಗಿ ಕಾರ್ಯಾಚರಣೆಗಳಿಗೆ ಅವಕಾಶಗಳನ್ನು ಒದಗಿಸುವ ಮೂಲಕ ಅಸಮಾನತೆಗಳನ್ನು ಪೋಷಿಸುವ ಆರ್ಥಿಕ ಕಾರ್ಯತಂತ್ರದ ಪ್ರವೃತ್ತಿಯನ್ನು ಬಲಪಡಿಸುತ್ತದೆ.

ಈ ದ್ವಂದ್ವವನ್ನು ಅಸಮಾನತೆಗಳನ್ನು ಪೋಷಿಸುವ ಆರ್ಥಿಕ ಕಾರ್ಯತಂತ್ರವನ್ನು ಬದಲಾಯಿಸುವ ಮೂಲಕ ಹಿಮ್ಮೆಟ್ಟಿಸಬಹುದು. ನಿಜ, ಅದಕ್ಕಾಗಿ ದುಡಿಯುವ ಜನರ ವರ್ಗವನ್ನು ಅಣಿನೆರೆಸಬೇಕಾಗುತ್ತದೆ. ಆದರೆ ಈ ರೀತಿ ಅಣಿನೆರೆಸಬೇಕಾದರೆ, ಮೂಲಸೌಕರ್ಯ ಹೂಡಿಕೆಯ ಮಾದರಿಯನ್ನು ಅರ್ಥಮಾಡಿಕೊಳ್ಳುವುದೂ ಕೂಡ ಯಾವುದರ ವಿರುದ್ಧ ದುಡಿಯುವ ಜನರು ಹೋರಾಟ ಮಾಡುತ್ತಿದ್ದಾರೋ ಅಂತಹ ಹೋರಾಟದ ಒಂದು ಭಾಗವಾಗಿರಬೇಕಾಗುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE MARCH 13-19, 2023 Price: Rs. 10/- Date of Publication: 10 MARCH 2023 RNI No. KARKAN /2006/17926 Posted on 14-03-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಜನವಾದಿ ಮಹಿಳಾ ಸಂಘಟನೆ ಮತ್ತು ಇತರೆ ಸಮಾನ ಮನಸ್ಕರು ಬಳ್ಳಾರಿಯಲ್ಲಿ ಸಂಘಟಿಸಿದ ಸಮಾರಂಭದ ಸಂದರ್ಭದಲ್ಲಿ ನಡೆದ ಕವಿಗೋಷ್ಠಿ ಯಲ್ಲಿ ವಾಚಿಸಿದ ಕೆಲವು ಕವಿತೆಗಳು

ಬೊಟ್ಟು

ಬೊಟ್ಟಿಲ್ಲವೆಂದು
ಹೊಟ್ಟೆ ಮ್ಯಾಲೆ ಹೊಡೆಯಬ್ಯಾಡಿ...

ನಸುಕಲೆದ್ದು ಬೀದಿಗುಡಿಸಲೊರಟವಳಿಗೆ
ಅವಸರದಿ ಮರೆತು ಬಂದ
ಹಣೆಬೊಟ್ಟು ನೆನಪಾಯಿತು.
ಹೇಳಿ ಅಣ್ಣ ಬೀದಿಗುಡಿಸಲೋ
ಮನೆಗ್ಹೋಗಿ ಹಣೆ ಬೊಟ್ಟು
ಹುಡುಕಿ ತರಲೋ



ಸೂರ್ಯನುಟ್ಟುವ ಮುನ್ನವೇ
ನಾಲ್ಕಾರು ಮನೆಯ ಕಸ ಮುಸುರಿ
ತೊಳೆದು ಮುಗಿಸಬೇಕಿದೆ
ಒಂದು ಮನೆಯ ಕಸ ಬಳಿದು
ನೆಲಕೆ ನೀರು ಚಿಮುಗಿಸುವಾಗ
ಬಚ್ಚಲ ಗೋಡೆಗಂಟಿಸಿ ಬಂದ
ಹಣೆ ಬೊಟ್ಟು ನೆನಪಾಯಿತು
ಹೇಳಿ ಅಣ್ಣ ನೆಲವಾ ಸಾರಿಸಲೋ
ಮನೆಗ್ಹೋಗಿ ಹಣೆ ಬೊಟ್ಟು
ಹುಡುಕಿ ತರಲೋ

ಚುಮು ಚುಮು ಚಳಿಯಲ್ಲೇ
ನಾಲ್ಕಾರು ಮನೆಗಳ ದೇವರ ಪೂಜೆಗೆ
ಹೂ ತಲುಪಿಸುವ ವರ್ತ್ನೇ ಕೆಲಸ
ಶೆಟ್ರು ಮನೆಗೆ ಹೂ ನೀಡಿದ ಮ್ಯಾಲೆ ಮನೆಯ
ಕನ್ನಡಿಗಂಟಿಸಿದ
ಹಣೆ ಬೊಟ್ಟು ನೆನಪಾಯ್ತು
ಹೇಳಿ ಅಣ್ಣ ಮುಂದಿನ ಭಟ್ರ ಮನೆಗೆ
ಹೂ ತಲುಪಿಸಲೋ
ಮನೆಗ್ಹೋಗಿ ಹಣೆ ಬೊಟ್ಟು
ಹುಡುಕಿ ತರಲೋ

ಬೆಳೆದು ನಿಂತ ಗೌಡ್ರ ಗದ್ದೆಯ
ಭತ್ತ ಕಟಾವ್ಗೇ ಕೂಲಿಗ್ಹೊಂಟವಳು
ಕುಡುಗೋಲು ಸೊಂಟಕೆ ಸಿಕ್ಕಿಸಿಕೊಂಡು
ಬಿರಬಿರನೇ ಹೊಂಟಾಗ ಬಾಗಿಲಿಂಬದಿ
ಅಂಟಿಸಿದ್ದ ಹಣೆಬೊಟ್ಟು ನೆನಪಾಯ್ತು
ಹೇಳಿ ಅಣ್ಣ ಗದ್ದೆಗ್ಹೋಗಿ ಗೇಯ ಮಾಡಲೋ
ಮನೆಗ್ಹೋಗಿ ಹಣೆ ಬೊಟ್ಟು
ಹುಡುಕಿ ತರಲೋ

ಬೊಟ್ಟು ಜುಟ್ಟು ಎಂಬುದೆಲ್ಲ ಅವರವರ
ಭಾವಕ್ಕೆ ಭಕುತಿಗೆ ಬಿಟ್ಟುಬಿಡಿಯಣ್ಣಾ ಉಳ್ಳವರು
ಬೊಟ್ಟು ಧರಿಸುವುದು ಅಲಂಕಾರಕ್ಕೆ ಅಣ್ಣ...
ಆದರೆ.....
ಬೊಟ್ಟು ಇಟ್ಟುಕೊಂಡರೂ ಸರಿಯೇ
ಜುಟ್ಟು ಬಿಟ್ಟು ಕೊಂಡರೂ ಸರಿಯೇ
ನಮ್ಮಯ ದುಡಿಮೆಯೇನೂ ಬದಲಾಗದಣ್ಣ
ನಿತ್ಯ ಬೆವ್ರ ಸುರಿಸದೆ ನಮ್ಗೇ
ಅನ್ನವೇ ಸಿಗದು ಅಣ್ಣಾ
ದಯಮಾಡಿ ಬೊಟ್ಟಿಲ್ಲವೆಂದು
ನಮ್ಮಯ ಹೊಟ್ಟೆ ಮ್ಯಾಲೆ
ಹೊಡೆಯಬ್ಯಾಡಿ...ಅಣ್ಣಾ...

–ಕೆ. ಮಹಾಂತೇಶ್

ಪ್ರಕೃತಿ

ತೊಟ್ಟಿಲ ತೂಗುವ ಕೈ ಜಗತ್ತನ್ನೇ ತೂಗಬಲ್ಲದೆಂಬರು,
ತೂಗುವ ಕೈಯನ್ನೇ ಕಟ್ಟಿ ಹಾಕುವರಲ್ಲ
ಹೆಣ್ಣು ಮಾಯೆಯಲ್ಲ ಮಹಾತಾಯಿಯೆಂಬರು
ಧರೆ ಕಾಣುವ ಮುನ್ನವೇ ಮಾಯೆ ಮಾಡಿ ಬಿಡುವರಲ್ಲ
ಹೆಣ್ಣೊಂದು ಮಹಾಶಕ್ತಿಯೆಂಬರು
ಆದಿಯಿಂದ ಅಂತ್ಯದವರೆಗೆ ತುಳಿದು ತುಳಿದು ಅಡಗಿಸಿ
ಹೂಳುತಿಹರಲ್ಲ
ಹೆಣ್ಣು ಜಗದ ಕಣ್ಣೆಂಬರು ಕಂಡಿದ್ದು ಕಂಡಾಗೆ ನುಡಿಯದಾಂಗ
ಮೂಕ, ಕಿವುಡ, ಕುರುಡರಾಗಿ ಸಾಗುವಂತೆ ಮಾಡಿಹರಲ್ಲ
ಹೆಣ್ಣೆಂದರೆ ಸೌಂರ್ಯದ ಖಣಿಯೆಂಬರು
ಬೆಳಗು ಕಾಣದೆ ನಲುಗಿ ಹೋಗಿಹದಲ್ಲ ಮುಸುಕಿನಲ್ಲೇ
ಹೆಣ್ಣೆಂದರೆ ಪ್ರಕೃತಿಯೆಂಬರು
ಹೆಜ್ಜೆ ಹೆಜ್ಜೆಯಲಿ ಮಾತು ಮಾತಿನಲ್ಲೆ ಮಾಡಿಹರಲ್ಲ ವಿಕೃತಿ

–ಶ್ರೀಮತಿ ಈರಮ್ಮ ಶಿಕ್ಷಕಿ ಬಳ್ಳಾರಿ

ಬಿಟ್ಟುಕೊಡಿ ಹುಟ್ಟ

ನೂರಾರು ಅಲೆತಕ್ಕೆ ಸಿಕ್ಕ ಅವಳು
ನನ್ನ ವರುಟು ತಲೆ ಸವರಿದಾಗ
ಕೋಮಲ ಬೆರಳು ಸೀಳಿ ರಕ್ತ ಹನಿಸಿತೆಂದು ಹೆದರಿದ್ದೆ.
ಊಂಹು ಹಾಗಾಗಲಿಲ್ಲ
ಅವಳು ನಿಂತ ನೆಲದಲ್ಲಿ ತೆನೆ ಗಿಲಕಿ ನಕ್ಕಿತು
ಸರ್ಯಕಾಂತಿಯಂತೆ ರೊಟ್ಟಿಯಾಗರಳಿ.

ಅವಳು
ತನ್ನೆಲ್ಲ ಕಳವಳದ ಕಸಗುಡಿಸಿ ಬೆಂಕಿ ಇಟ್ಟಾಗ
ಬೂದಿಯಾದಳು ಎಂದುಕೊಂಡೆ
ಊಂಹು ಇಲ್ಲ ಹಾಗಾಗಲಿಲ್ಲ
ಸಂಕಟದ ಬೂದಿಯಿಂದೆದ್ದು ಬೆಳದಿಂಗಳ ಹಾಸಿದಳು.

ಬೇಧವಿಲ್ಲದ ಪ್ರಸವ ನೋವಲಿ
ಗಂಡು ಹೆಣ್ಣಿನ ಸಮಾನತೆಯ ಹಾಡ ಹಾಡಿದಳು.
ತನ್ನ ಅಕ್ಕರೆಯ ಕಣ್ಣೊಳಗೆ ತಾನೇ ಇಣುಕಿ
ಉತ್ತರಕೆ ಕಾದಳು.
ರೆಪ್ಪೆಗಳು ಸೆಟೆದ ಸರಳಾದಾಗ
ಅವಳಿಗೆ ತಿಳಿಯಲೇ ಇಲ್ಲ ತಾನು ಅವಳೆಂದು.

ಅವಳ ಮೊನೆಚು ಮಾತು
ಅವನು ನೆಟ್ಟ ಸರಹದ್ದಿನಲಿ ಮೌನ.
ಅಕ್ಕರೆಯ ರೆಕ್ಕೆ ಬಿಚ್ಚಿದರೇನು ಹಾರುವ ಹಕ್ಕೆಲ್ಲಿ?
ಅಸಮಾನದ ನೋಟ ಇರಿದ ಗಾಯದಲೆ ರೆಕ್ಕೆಯ ಒದ್ದಾಟ.
ಅಡುಗೆ ಮನೆ ಮೂಲೆಯಲಿ
ಎದೆಯ ಬೆಂಕಿಗೆ ಬೆರಳ ಕಟ್ಟಿಗೆ ಮುರಿದ
ಲಟಲಟ ಸದ್ದು.



ಅವಳು ಅವಳೇ
ಸ್ವದರಮನೆಯ ಅಹಂಕಾರದ ಗೋಡೆಗೆ
ಜೋತಾಡಿಸಿದ ಅಲಂಕಾರ ಚಿತ್ರ.
ಬದುಕೇ ಬದುಕಿನ ಶತ್ರುವಾದಾಗ
ಬುಕ್ಕಿ ನುರುಕಿ ಕ್ಯಾಕರಿಸಿ ಉಗಿದ ತೊಂಬಲ.

ಅವಳು
ಬೃಹತ್ ಮಹಡಿಗೆ, ಊರ ಕಾರುಣ್ಯಕೆ,
ಮನೆಯ ದೀಪಕೆ ಶಾಕ ಹರಿದು
ಜಲ ಉಕ್ಕಿಸಿ, ಬೆಳಕಾಗಿ, ಬೆಳೆ ಬೆಳಸಿ
ಕಲ್ಲು ಬಂಧಿಯಾದವಳು.
ಮರಕ್ಕೊ ಗವಿಗರ್ಭಗುಡಿಯ ಕತ್ತಲ ಕೂಪಕ್ಕೋ
ಮಾರೆಮ್ಮ ಕಾಡಮ್ಮ ಸುಡುಗಾಡಮ್ಮ
ಎಲ್ಲದರ ಅಮ್ಮ ಎಲ್ಲಮ್ಮನಾಗಿ
ನೆಲದ ಮಕ್ಕಳ ಕರುಳಿಗೆ ರಕ್ತಮಾಂಸವ ತೊಡಿಸಿ
ಅಸ್ತಿಯಾದವಳು.

ಬೆವರ ಸಮುದ್ರವ ಹರಿಸಿ
ಹುಟ್ಟು ಕದ್ದವರ ಪಯಣಕೆ ದೋಣಿಯಾದವಳು.
ಸಮುದ್ರ ಉಕ್ಕೇರುವ ಮೊದಲೆ
ಬಿಟ್ಟುಕೊಡಿ ಹುಟ್ಟ.

–ಪಿ.ಆರ್.ವೆಂಕಟೇಶ್

ಅವಳು ಮತ್ತು.........

ಅವನು ದುಡುಕಿ ಧ್ವನಿ ಏರಿಸಿದಾಗಲೂ ಅವನಲ್ಲಿ
ಅವಳು ತನ್ನ ಬಗೆಗಿನ ಪ್ರೀತಿ ಹುಡುಕುತ್ತಾಳೆ.
ಅವಳು ದುಡುಕುವುದಿಲ್ಲ ಸಹಜವಾಗಿದ್ದರೂ ದೋಷ ಹುಡುಕುತ್ತಾನೆ
ಹೆಂಗಸರೊಂದಿಗೆ ಹಲ್ಕಿರಿಯುತ ಹುಬ್ಬೇರಿಸುವ ಅವನು
ಗಂಡಸಿನ ಧ್ವನಿ ಎಲ್ಲಿ ಅವಳ ಕಿವಿ
ತಾಕುವುದೋ ಎಂದು ಹಪಹಪಿಸುತ್ತಾನೆ.....
ಗಂಡಸು ಅಣ್ಣನಾಗಲಿ, ಅಪ್ಪನಾಗಲಿ ಯಾರದ್ದೂ...
ಅವಳು ಸದಾ ಅವನನ್ನು, ಅವನ ಆಗು ಹೋಗುಗಳನ್ನು
ಗಮನಿಸುತ್ತಿರಬೇಕು
ಹೊರಗಿನ, ಒಳಗಿನ ಕೆಲಸದ ಜೊತೆಗೂ...
ತಾನು ತನ್ನನ್ನು ಗಮನಿಸಿಕೊಳ್ಳದಂತೆ.
ಅವನು ಕತ್ತೆತ್ತಿ ನೋಡುವುದಂತು ದೂರವೆ!
ಸದಾ ಮೊಬೈಲಲ್ಲೇ
ಮಿಂದೇಳುತ್ತಿರುವ ಅವನಿಗೆ ಮುಂದಿರಿಸಿದ
ಟೀ/ತಿಂಡಿ ತಣ್ಣಗಾಗುವ ಅರಿವಿರದು
ಎಚ್ಚರಾದಾಗ ಬಿಸಿ ಬಿಸಿ ರಾದ್ಧಾಂತ!
ಅವಳಿಗೂ ಹಾಗೆಯೇ.......
ಅವನು, ಅವನ ಮಕ್ಕಳ ನೋಡಿಕೊಳ್ಳುವ ಭರಾಟೆಯಲಿ
ತಣ್ಣಗಾದುದರ ಅರಿವಿಲ್ಲ! ಅರಿವಾದಾಗಲೇ ಹಸಿವಿಂದ ಕಂಗೆಟ್ಟ
ಹೊಟ್ಟೆಗೆ
ಸುರಿದು ಬಿಡುವಳು –ಒಂದೇ ಗುಕ್ಕಿಗೆ
ಎಷ್ಟಾದರೂ ಅವಳು ಹೆಣ್ಣಲ್ಲವೆ?

ಈಗೀಗ ತಲೆ ಬಾಚುವಂತಿಲ್ಲ
ಕನ್ನಡಿಯ ಮುಂದೆ ನಿಲ್ಲುವಂತಿಲ್ಲ
ಕದ್ದೊಮ್ಮೆ ಕನ್ನಡಿ ಮುಂದೆ ನಿಂತಳೆಂದರೆ
“ಕೆಲಸಕ್ಕೆ ರಜೆ ಇದ್ದರೂ ಇದೆಲ್ಲಾ ಬೇಕಾ?” ಎನ್ನುವ ಧ್ವನಿಗೆ
ಗಬಕ್ಕನೆ ಹೃದಯ ಬಾಯಿಗೆ
ಬಂದು
ಅಗೆದು ನುಂಗಿ ಬಿಡುವಳು
ಏನೆಂದರೂ ಅವಳು ಹೆಣ್ಣು!



ಗೆಳತಿ ಹೇಳುತ್ತಾಳೆ:
‘ಮಾತಾಡದೇ ಸುಮ್ಮನಿದ್ದುಬಿಡು
ಎಲ್ಲವೂ ಸರಿ ಹೋಗುತ್ತೆ’ ಎಂದು.
ಆಕೆಯ ಮಾತನೊಮ್ಮೆ ಧ್ಯಾನಿಸಲು ಕೂತರೆ
"ಎಲ್ಲಿದ್ದೀಯಾ" ಎನ್ನುವ ಅಗೋಚರ ಕರೆಗಂಟೆಗೆ
ಬೆಚ್ಚಿ ಕಣ್ತೆರೆದಾಗ ಅನ್ನಿಸುವುದು....
ಅವಳದೇನಿದ್ದರೂ ಧ್ಯಾನಿಸುವುದಲ್ಲ. ಬರೀ ಬೇಯಿಸುವದೆಂದು.
ಎಷ್ಟಾದರೂ ಅವಳದು ಹೆಣ್ಣು ಜೀವವಲ್ಲವೆ?

ಈಗೀಗ ಅಡುಗೆ ಕೋಣೆಗೆ ಅವಳು ಸ್ವಂತ. ಕೊರೋನಾ ನೀಡಿದ ಉಡುಗೊರೆ
ಇದಿಷ್ಟೇ ಅಲ್ಲ..
ಇದ್ದದು ಇಲ್ಲದ್ದನ್ನು ಜೋಡಿಸಿಕೊಂಡು
ಮೂರು ಹೊತ್ತು ಅವರಾಯ್ಕೆಯ ಅಡುಗೆ ಒಮ್ಮೆ ಸ್ನ್ಯಾಕ್ಸ್
ಮಾಡುವಾಗ
ಮುಡಿಯಿಂದ ಅಡಿಯವರೆಗೂ ಬೆಚ್ಚನೆಯ ಬೆವರಿನಲ್ಲಿ
ಮಿಂದೇಳುವಾಗ
ಜೊತೆಗಿದ್ದು ದೇಹ ಮನಸ್ಸಿಗೆ ತಂಪೆರೆದದ್ದು ಅದು ಅಡುಗೆ ಕೋಣೆ.
ಅವಳಿಗರಿವಿಲ್ಲದೇ ಅವಳಾಡಿಕೊಳ್ಳುವ ಪ್ರತಿ ಮಾತಿಗೂ ಕಿವಿಯಾದದ್ದು
ಅದೇ

ಅವಳ ಮಾತು ಸುಳ್ಳೆಂದರೆ ಒಮ್ಮೆ ಗೋಡೆಗಳನ್ನು ಮಾತನಾಡಿಸಿ
ಹೇಳುತ್ತವೆ ಅವಳು ಹೇಳದ್ದನ್ನೂ.....!!
ಅವಳ ಮಾತು ನಂಬುವುದಿಲ್ಲ ಎಷ್ಟಾದರೂ ಅವಳು ಹೆಣ್ಣು

–ಭಾರತಿ ಅಶೋಕ್

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**